KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫ | ಬೆಂಗಳೂರು, ಗುರುವಾರ, ಜನವರಿ ೧೪, ೨೦೧೦ (ಪುಷ್ಯ ೨೪, ಶಕವರ್ಷ ೧೯೩೧) | ಸಂಚಿಕೆ ೨

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ವಿ.ರಾ. ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ
8	4.1.2010	ಸಂ. ಇಡಿ 4 ಎಲ್‌ಐಬಿ 2010, ದಿ. 2.1.2010 – ಬೆಂಗಳೂರು ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯದ ಅಧೀನದಲ್ಲಿನ ಎಂ.ಸಿ. ಲೇಔಟ್‌ನ ಅಧ್ಯಯನ ಕೇಂದ್ರಕ್ಕೆ "ಡಾ: ವಿಷ್ಣುವರ್ಧನ್ ಸ್ಮಾರಕ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನ ಕೇಂದ್ರ" ಎಂದು ನಾಮಕರಣ ಮಾಡುವ ಬಗ್ಗೆ.
9	5.1.2010	ಸಂ. ಸಿಐ 589 ಎಸ್‌ಪಿಕ್ಯೂ 2009, ದಿ. 1.1.2010 – ಕೆ.ಐ.ಎ.ಡಿ. ಕಾಯ್ದೆ ಕಲಂ 3(1) 1(3) 28(1)ರಡಿ ಗುಲ್ಬರ್ಗಾ ಜಿಲ್ಲೆಯ ಅಳಂದ ಗ್ರಾಮಕ್ಕೆ ಸಂಬಂಧಿಸಿದ ಅಧಿಸೂಚನೆ.
10	6.1.2010	No. DPAR 4 CHUVIPA 2009, Dt. 6.1.2010 - Under Section 16 of the Representation of the People Act, 1951 – Members elected to KLC.
11	6.1.2010	ಸಂ. ಸಇ 115 ಎಂಆರ್‌ಇ 2008 (ಭಾಗ), ದಿ. 6.1.2010 – ಗಂಗಾವತಿ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣಕ್ಕೆ ಸಂಬಂಧಿಸಿದಂತೆ.
12	6.1.2010	ಸಂ. ಸಿಐ 561 ಎಸ್‌ಪಿಕ್ಯೂ 2009, ದಿ. 1.1.2010 – ಕೆ.ಐ.ಎ.ಡಿ. ಕಾಯ್ದೆ ಕಲಂ 3(1) 1(3) 28(1)ರಡಿ ಬೆಳಗಾವಿ ಜಿಲ್ಲೆಯ ಬೀರನಹೊಳೆ ಗ್ರಾಮಕ್ಕೆ ಸಂಬಂಧಿಸಿದ ಅಧಿಸೂಚನೆ.
13	6.1.2010	No. UDD 146 CSS 2009, Dt. 14.12.2009 - Devolution of planning functions to the Urban Local Bodies under the 74th Constitutional (Amendment) Act – reg.
14	6.1.2010	No. HD 247 POP 2009, Dt. 22.12.2009 – Jurisdiction of Police Station – Bangalore City East Division.
15	6.1.2010	No. HD 297 POP 2009, Dt. 22.12.2009 - Jurisdiction of Nelamangala Police Station.
16	6.1.2010	ಸಂ. ಆರ್‌ಡಿ 120 ಎಲ್‌ಜಿಬಿ 2009, ದಿ. 23.12.2009 – 68ನೇ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗಿನ ಘೋಷಣೆ – ನಿಯಮ 96 – ಬೆಂಗಳೂರು ಪೂರ್ವ ತಾಲ್ಲೂಕು.
17	6.1.2010	ಸಂ. ನಅಇ 246 ಎಂಎಲ್‌ಆರ್ 2009, ದಿ. 4.1.2010 – ಬೆಳಗಾವಿ ಮಹಾನಗರ ಪಾಲಿಕೆಗೆ ಚುನಾಯಿತರಾದ ಅಭ್ಯರ್ಥಿಯ ಹೆಸರನ್ನು ಪ್ರಕಟಿಸುವ ಬಗ್ಗೆ.
18	6.1.2010	ಸಂ. ಕವಿಪ:ಆ–1:44:ಡಿಗುಹುಭ:2009, ದಿ. 6.1.2010 – ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಗ್ರೂಪ್–ಡಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.
19	6.1.2010	ಸಂ. ಸಿಐ 100 ಎಸ್‌ಪಿಕ್ಯೂ 2008, ದಿ. 6.1.2010 – ಕೆ.ಐ.ಎ.ಡಿ. ಕಾಯ್ದೆ ಕಲಂ 28(1)ರಡಿ ಮೈಸೂರು ಜಿಲ್ಲೆಯ ಅಡಕನಹಳ್ಳಿ ಮತ್ತು ಇಮ್ಮಾವು ಗ್ರಾಮಕ್ಕೆ ಸಂಬಂಧಿಸಿದ ಅಧಿಸೂಚನೆ.
20	7.1.2010	No. UDD 591 MNY 2009, Dt. 7.1.2010 - Karnataka Municipal Corporations (Amendment) Rules, 2009.
21	7.1.2010	ಸಂ. ಸಿಐ 590 ಎಸ್‌ಪಿಕ್ಯೂ 2009, ದಿ. 6.1.2010 – ಕೆ.ಐ.ಎ.ಡಿ. ಕಾಯ್ದೆ ಕಲಂ 3(1) 1(3) 28(1)ರಡಿ ಬಿಜಾಪುರ ಜಿಲ್ಲೆಯ ಕೂಡಗಿ, ತೆಲಗಿ, ಗೂಳಸಂಗಿ ಗ್ರಾಮಕ್ಕೆ ಸಂಬಂಧಿಸಿದ ಅಧಿಸೂಚನೆ.
22	7.1.2010	ಸಂ. ಸಿಐ 335 ಎಸ್‌ಪಿಕ್ಯೂ 2009, ದಿ. 1.1.2010 – ಕೆ.ಐ.ಎ.ಡಿ. ಕಾಯ್ದೆ ಕಲಂ 28(4)ರಡಿ ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಸಂಬಂಧಿಸಿದ ಭೂಸ್ವಾಧೀನ ಅಧಿಸೂಚನೆ.
23	7.1.2010	ಸಂ. ಕವಿಪ:ಶಾರಶಾ:15:ವಿಪನಾ:06, ದಿ. 7.1.2010 – ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರ ಅಧಿಕಾರವಧಿ ಕೊನೆಗೊಳ್ಳುವ ಬಗ್ಗೆ.
24	8.1.2010	ಸಂ. ಕೃಮಾಇ:18:ಚುನಾವಣೆ:2008, ದಿ. 8.1.2010 – ದಾವಣಗೆರೆ ಕೃ.ಉ.ಮಾ. ಸಮಿತಿಗೆ ಆಯ್ಕೆಯಾದ ಸದಸ್ಯರ ಹೆಸರನ್ನು ಪ್ರಕಟಿಸುವ ಬಗ್ಗೆ.
25	8.1.2010	No. LAW 67 LAC 2007, Dt. 7.1.2010 - Karnataka Judicial Officers (Medical Attendance) Rules, 2009 .
26	8.1.2010	ಸಂ. ನಅಇ 332 ಬಿಎಂಆರ್ 2009, ದಿ. 7.1.2010 – ತಿದ್ದುಪಡಿ – ದಿನಾಂಕ: 10.12.2009ರ ನಅಇ 332 ಬಿಎಂಆರ್ 2009ರ ನಡವಳಿಕೆ.

ವಾರದ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು

http//www.Kar.nic.in/gazette.

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು
http//www.Kar.nic.in/gazette.

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ - 1	12-00	700-00
2.	ಭಾಗ - 2	4-00	208-00
3.	ಭಾಗ - 3	30-00	1075-00
4.	ಭಾಗ - 4	3-00	240-00
5.	ಭಾಗ - 4ಎ	8-00	285-00
6.	ಭಾಗ - 5	13-00	528-00
7.	ಭಾಗ - 6 (ಬೆಂಗಳೂರು)	7-00	325-00
8.	ಭಾಗ - 6ಎ (ಮೈಸೂರು)	50-00	1111-00
9.	ಭಾಗ - 6ಬಿ (ಧಾರವಾಡ)	25-00	1637-00
10.	ಭಾಗ - 6ಸಿ (ಗುಲ್ಬರ್ಗ)	29-00	1469-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ. ಸ. 1 ರಿಂದ 7 (ಭಾಗ-1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	77-00	3360-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	7-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ ಕ್ರಮ ಸಂಖ್ಯೆ 1 ಮತ್ತು 3
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 2 ಮತ್ತು 4 ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗಧಿಪಡಿಸಿರುವುದು.
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :-
1. ಚಂದಾಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು " 0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು " ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.
2. ಭಾಗ VI-ಎ, VI-ಬಿ, VI-ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.
3. ಕರ್ನಾಟಕ ರಾಜ್ಯ ಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು-59.

ಮುದ್ರಕರು :- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು-59

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಜನವರಿ ೧೪, ೨೦೧೦ (ಪುಷ್ಯ ೨೪, ಶಕ ವರ್ಷ ೧೯೩೧)	ಸಂಚಿಕೆ ೨

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 596 ಸಅಸೇ 2009, ಬೆಂಗಳೂರು, ದಿನಾಂಕ: 8ನೇ ಡಿಸೆಂಬರ್ 2009.

ವಿಷಯ: ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಹುದ್ದೆಯನ್ನು ಸೃಜಿಸುವ ಬಗ್ಗೆ.

ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಒಂದು ಹುದ್ದೆಯನ್ನು IAS HAG ಶ್ರೇಣಿ Rs. 67000-(Annual Increment 3%)-79000ರಲ್ಲಿ ದಿನಾಂಕ 6–11–2009ರಿಂದ ಅನ್ವಯವಾಗುವಂತೆ ಹಾಗೂ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಈ ಮೂಲಕ ಸೃಜಿಸಲಾಗಿದೆ.

2) ಈ ಆದೇಶವನ್ನು ಆರ್ಥಿಕ ಇಲಾಖೆಯೊಡನೆ ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 2177 : ಸೇವೆಗಳು–3:2009, ದಿನಾಂಕ 3–12–2009ರಲ್ಲಿ ಸಮಾಲೋಚಿಸಿದ ನಂತರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎಸ್. ಶಿವರಾಮ್

ಪಿ.ಆರ್. 2801 ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

EDUCATION SECRETARIAT

Sub: Issue of terms and conditions of appointment of Prof. D. Shivalingaiah, Registrar, Tumkur University, Tumkur.

Read: 1) Government Notification No. ED 124 UNE 2009 dated: 16.11.09.

2) Letter No. MU/13/EST (2)/2009-10, dated 27.11.2009 from the registrar, Mangalore University, Mangalore.

3) Letter No. TU/PSVC/412(1)/2009-10, dt:1-12-2009.

Preamble:

Prof. D.Shivalingaiah, Professor, Dept. of Library and Information Science, Mangalore University, Mangalore, has been appointed as the Registrar of Tumkur University, Tumkur, vide Govt. Notification dt:16-11-2009 read (1) above. The Officer has reported for duty on 18-11-2009 at Tumkur University, Tumkur. The Registrar, Mangalore University, Mangalore, has reported that the Syndicate, which met on 20.11.2009, has resolved to issue terms and conditions vide letter dt:27-11-2009 read (2) above. The

Vice-Chancellor, Tumkur University, has requested to spare the services of Prof. D. Shivalingaiah as Registrar of Tumkur University for a period of three years vide his letter dt:1-12-2009 read (3) above. It is necessary to issue terms and conditions of his appointment. The matter has been examined. Hence the following orders.

Government Order No. ED 100 UDV 2009, Bangalore, Dated: 2nd December 2009

Government are pleased to issue the terms and conditions of appointment of Prof. D.Shivalingaiah, Professor, Dept. of Library and Information Science, Mangalore University, Mangalore as the Registrar, Tumkur University, Tumkur which are as appended to this order.

By Order and in the Name of the Governor of Karnataka

U.B. ULAVI

Under Secretary to Government,

Education Department (Universities)

APPENDIX TO G.O.NO. ED 100 UDV 2009, DATED 2-12-2009

TERMS AND CONDITIONS OF DEPUTATION OF Prof. D. SHIVALINGAIAH, PROFESSOR, DEPT. OF LIBRARY & INFORMATION SCIENCE, MANGALORE UNIVERSITY, MANGALORE, AS THE REGISTRAR, TUMKUR UNIVERSITY, TUMKUR.

1. PERIOD : The period of service of Prof. D. Shivalingaiah, Professor, Dept. of Library and Information Science, Mangalore University, Mangalore is for the period of Three years or until further orders whichever is earlier.

2. COMMENCEMENT AND END OF APPOINTMENT : The Appointment shall commence with effect from 18.11.2009, and ends on the date he relinquishes his office.

3. PAY AND OTHER ALLOWANCES : During the period of appointment, Prof. D.Shivalingaiah, Professor, Dept. of Library and Information Science, Mangalore University, Mangalore shall be entitled to draw own pay and grade admissible to him is his parent organization. Other allowances, such as DA/HRA/CCA as admissible under rules at the deputed place. He shall not be entitled to any other deputation or foreign service allowance.

4. LEAVE RULES : He shall be treated as vacation prevented staff governed by the leave rules as applicable to him.

5. LEAVE SALARY CONTRIBUTION : The Tumkur University, Tumkur, Shall pay Leave Salary Contribution at the rate of 11% of pay.

6. PENSION CONTRIBUTION : Pension contribution shall be paid by the Tumkur University, Tumkur at the provisional rate at 12.5% on the total basic pay received during the period of deputation as per statute.

7. MEDICAL CONCESSION : The official shall be entitled to the medical attendance as per the Karnataka Government Servants (Medical Attendance) Rules, 1963.

8. JOINING TIME : He shall be entitled for joining time pay and transfer TA as per rules.

9. He shall perform the functions of the Registrar and attend to all work entrusted to him from time to time by the Vice-Chancellor, Tumkur University, Tumkur.

10. He shall perform his duties diligently and he shall maintain strict secrecy in respect of officia[l] information, which he comes to know in the course of his duties.

11. He shall be liable to reimburse to Government all the losses, which the Government may sustain du[e] to misconduct of any sort on his part.

P.R. 2802

U.B. ULAVI

Under Secretary to Government

Education Department (Universities)

ಶಿಕ್ಷಣ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಇಡಿ 367 ಎಂಪಿಡಿ 2009, ಬೆಂಗಳೂರು, ದಿನಾಂಕ: 2ನೇ ಡಿಸೆಂಬರ್ 2009

ವಿಷಯ: ಶ್ರೀ ಸಹ್ಯಾದ್ರಿ ವಿದ್ಯಾಸಂಸ್ಥೆ, ಚಿಗಟೇರಿ, ಹರಪನ ಹಳ್ಳಿ ಸಂಸ್ಥೆಯ ಸಮನ್ವಯ ಶಿಕ್ಷಣ ಯೋಜನೆ 2007–08ನೇ ಸಾಲಿನ ಅನುದಾನವನ್ನು ದಾವಣಗೆರೆ ಜಿಲ್ಲೆಯ ಬದಲಿಗೆ ಬಳ್ಳಾರಿ ಜಿಲ್ಲೆಗೆ ಬಿಡುಗಡೆ ಮಾಡುವಂತೆ ಕೋರಿರುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ಇಡಿ 196 ಯೋಸಕ 2009 ದಿನಾಂಕ:30–05–2008.

2) ಸರ್ಕಾರಿ ಆದೇಶ ಸಂಖ್ಯೆ: ಇಡಿ 138 ಎಂಪಿಡಿ 2009 ದಿನಾಂಕ:23–09–2009.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರಿ ಆದೇಶಗಳ ಅನುಬಂಧದಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಓದಿಕೊಳ್ಳತಕ್ಕದ್ದು:–

ಕ್ರಮ ಸಂಖ್ಯೆ	ಹಿಂದಿನ ಆದೇಶದಲ್ಲಿದ್ದ ವಿಳಾಸ	ಪ್ರಸ್ತುತ ಬದಲಾವಣೆ ಮಾಡಬೇಕಾದ ತಾಲ್ಲೂಕು ಹಾಗೂ ಜಿಲ್ಲೆ
1	ಶ್ರೀ ಸಹ್ಯಾದ್ರಿ ಎಜುಕೇಷನ್ ಸೊಸೈಟಿ, ಚಿಗಟೇರಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ	ಶ್ರೀ ಸಹ್ಯಾದ್ರಿ ಎಜುಕೇಷನ್ ಸೊಸೈಟಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ

ಉಳಿದ ಅಂಶಗಳು ಯಥಾವತ್ತಾಗಿ ಮುಂದುವರಿಯುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಐ.ಎಫ್.ಮಾಗಿ

ಪಿ.ಆರ್. 2803

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ).

ಉನ್ನತ ಶಿಕ್ಷಣ ಸಚಿವಾಲಯ

ವಿಷಯ: ಆರ್.ಐ.ಡಿ.ಎಫ್–13 ಯೋಜನೆಯಡಿ ಮತ್ತು 4202 ಅಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ : ಇಡಿ 248 ಯೋಸಕಾ: 2008 ಬೆಂಗಳೂರು ದಿನಾಂಕ 30–12–2008 (ಸ್ವಿಮರ 198)

2) ಸರ್ಕಾರದ ಆದೇಶ ಸಂಖ್ಯೆ : ಇಡಿ 172 ಯೋಸಕಾ: 2008, ಬೆಂಗಳೂರು ದಿನಾಂಕ 30–12–2008 (ಸ್ವಿಮರ 199)

3) ಸರ್ಕಾರದ ಆದೇಶ ಸಂಖ್ಯೆ : ಇಡಿ 172 ಯೋಸಕಾ: 2008, ಬೆಂಗಳೂರು ದಿನಾಂಕ 09–01–2009 (ಸ್ವಿಮರ 137)

4) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಕಾಶಿಇ 19 ಯೋಜನೆ 2008–09 ದಿನಾಂಕ 31–10–2009.

ಪ್ರಸ್ತಾವನೆ:

ಮೇಲೆ (1)(2) ಮತ್ತು (3)ರ ಸರ್ಕಾರದ ಆದೇಶದಲ್ಲಿ ಆರ್.ಐ.ಡಿ.ಎಫ್–13 ಅಡಿ ಹಾಗೂ 4202 ಅಡಿ 2008–09ನೇ ಸಾಲಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ನಿರ್ಮಾಣ ಮಾಡಲು ಅನುದಾನ ಹಂಚಿಕೆ ಮಾಡಿ ಸದರಿ ಕಾಮಗಾರಿಗಳನ್ನು ರೈಟ್ಸ್ ಸಂಸ್ಥೆ, ಬೆಂಗಳೂರು ಇವರಿಗೆ ಕಾರ್ಯಕ್ರಮ ಅನುಷ್ಠಾನಗೊಳಿಸಲು ಅನುಮತಿ ನೀಡಲಾಗಿದೆ.

ಓದಲಾದ (4)ರ ಪತ್ರದಲ್ಲಿ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಈ ಕೆಳಕಾಣಿಸಿದ 15 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಅಂದಾಜು ಮೊತ್ತ	2008–09 ಒದಗಿಸಿರುವ ಅನುದಾನ	ಅನುದಾನ ಒದಗಿಸಲಾದ ಮೂಲ
01	ಮೂಡಿಗೆರೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಟ್ಟಡ ನಿರ್ಮಾಣ	10.00	05.67	4202

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಅಂದಾಜು ಮೊತ್ತ	2008–09 ಒದಗಿಸಿರುವ ಅನುದಾನ	ಅನುದಾನ ಒದಗಿಸಲಾದ ಮೂಲ
02	ನರಸಿಂಹರಾಜಪುರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಟ್ಟಡ ನಿರ್ಮಾಣ	30.00	17.00	4202
03	ಕಡೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಟ್ಟಡ ನಿರ್ಮಾಣ	150.00	88.04	4202
04	ಗಜೇಂದ್ರಗಡ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಟ್ಟಡ ನಿರ್ಮಾಣ	50.00	35.70	RIDF-13
05	ಹುಲಿಕೋಟೆ, ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ ನಿರ್ಮಾಣ	100.00	71.60	RIDF-13
06	ಕುದೂರು, ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ ನಿರ್ಮಾಣ	25.00	17.88	RIDF-13
07	ರಾಮನಗರ(ಮ) ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ ನಿರ್ಮಾಣ	75.00	43.52	4202
08	ರಾಮನಗರ (ಕಾ) ಸರ್ಕಾರಿ ಪ್ರಥಮದರ್ಜೆ ಕಟ್ಟಡ ಕಾಮಗಾರಿ	100.00	56.69	4202
09	ಕಂಪ್ಲಿ ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ ನಿರ್ಮಾಣ	25.00	17.88	RIDF-13
10	ಹೊಸಪೇಟೆ, ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ ನಿರ್ಮಾಣ	75.00	42.52	4202
11	ಹೂವಿನಹಡಗಲಿ, ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ	75.00	42.52	4202
12	ತೆಕ್ಕಲಿಕೋಟೆ, ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ	100.00	71.45	RIDF-13
13	ಹೆಸರಘಟ್ಟ, ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ	25.00	17.88	RIDF-13
14	ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ	75.00	42.52	4202
15	ತ್ಯಾಮಗೊಂಡ್ಲು. ಪ್ರ.ದ. ಕಾಲೇಜು ಕಟ್ಟಡ	200.00	143.20	RIDF-13

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 455 ಯೋಯೋಕ 2009, ಬೆಂಗಳೂರು, ದಿನಾಂಕ: 3ನೇ ಡಿಸೆಂಬರ್ 2009

2008–09ನೇ ಸಾಲಿಗೆ ಆರ್.ಐ.ಡಿ.ಎಫ್.13 ಮತ್ತು 4202 ಅಡಿ ಒದಗಿಸಿರುವ ಅನುದಾನದಲ್ಲಿ ಈ ಕೆಳಕಾಣಿಸಿದ 15 ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ಕಾಮಗಾರಿಗಳಿಗೆ ಅವುಗಳ ಮುಂದೆ ತೋರಿಸಿರುವ ಅಂದಾಜು ಮೊತ್ತಕ್ಕೆ ಕೆಲವು ಷರತ್ತುಗಳನ್ನು ವಿಧಿಸಿ, ಆಡಳಿತಾತ್ಮಕ ಅನುಮೋದನೆ ನೀಡಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಲಾಗಿದೆ.

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಅಂದಾಜು ಮೊತ್ತ	2008–09 ಒದಗಿಸಿರುವ ಅನುದಾನ	ಅನುದಾನ ಒದಗಿಸಲಾದ ಮೂಲ
01	ಮೂಡಿಗೆರೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಟ್ಟಡ ನಿರ್ಮಾಣ	10.00	05.67	4202
02	ನರಸಿಂಹರಾಜಪುರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಟ್ಟಡ ನಿರ್ಮಾಣ	30.00	17.00	4202
03	ಕಡೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಟ್ಟಡ ನಿರ್ಮಾಣ	150.00	88.04	4202
04	ಗಜೇಂದ್ರಗಡ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಟ್ಟಡ ನಿರ್ಮಾಣ	50.00	35.75	RIDF-13
05	ಹುಲಿಕೋಟೆ, ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ ನಿರ್ಮಾಣ	100.00	71.60	RIDF-13
06	ಕುದೂರು, ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ ನಿರ್ಮಾಣ	25.00	17.88	RIDF-13

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಅಂದಾಜು ಮೊತ್ತ	2008–09 ಒದಗಿಸಿರುವ ಅನುದಾನ	ಅನುದಾನ ಒದಗಿಸಲಾದ ಮೂಲ
07	ರಾಮನಗರ(ಮ) ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ ನಿರ್ಮಾಣ	75.00	43.52	4202
08	ರಾಮನಗರ (ಕಾ) ಸರ್ಕಾರಿ ಪ್ರಥಮದರ್ಜೆ ಕಾಲೇಜ್ ಕಟ್ಟಡ ನಿರ್ಮಾಣ	100.00	56.69	4202
09	ಕಂಪ್ಲಿ ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ ನಿರ್ಮಾಣ	25.00	17.88	RIDF-13
10	ಹೊಸಪೇಟೆ, ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ ನಿರ್ಮಾಣ	75.00	42.52	4202
11	ಹೂವಿನಹಡಗಲಿ, ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ ನಿರ್ಮಾಣ	75.00	42.52	4202
12	ತೆಕ್ಕಲಿಕೋಟೆ, ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ ನಿರ್ಮಾಣ	100.00	71.45	RIDF-13
13	ಹೆಸರಘಟ್ಟ, ಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ ನಿರ್ಮಾಣ	25.00	17.88	RIDF-13
14	ಹೆಚ್.ಎಸ್.ಆರ್. ಲೇಔಟ್, ಬೆಂಗಳೂರುಸರ್ಕಾರಿ ಪ್ರಥಮದರ್ಜೆ ಕಾಲೇಜು ಕಟ್ಟಡ ನಿರ್ಮಾಣ	75.00	42.52	4202
15	ತ್ಯಾಮಗೊಂಡ್ಲು. ಸರ್ಕಾರಿ ಪ್ರ.ದ. ಕಾಲೇಜು ಕಟ್ಟಡ ನಿರ್ಮಾಣ	200.00	143.20	RIDF-13

ಷರತ್ತುಗಳು:–

- ಸದರಿ ಕಾಮಗಾರಿಯನ್ನು ಈಗಾಗಲೇ ನಿಗದಿಯಾಗಿರುವ ಆಯವ್ಯಯದ ಮಿತಿಯಲ್ಲಿಯೇ ಪೂರ್ಣಗೊಳಿಸಲು ಸೂಚಿಸಿದೆ. ನಬಾರ್ಡ್ ಕಾಮಗಾರಿಗಳಿಗೆ ನಕ್ಷೆ ಬದಲಾಯಿಸಬೇಕಾದಲ್ಲಿ ನಬಾರ್ಡ್ ನಿಗದಿಪಡಿಸಿದ ಅಂದಾಜಿನಲ್ಲಿಯೇ ಸಲ್ಲಿಸಿ ನಬಾರ್ಡ್ ಅನುಮತಿ ಪಡೆಯತಕ್ಕದ್ದು.
- ಸದರಿ ಕಾಮಗಾರಿಗಳಿಗೆ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆದು 2008–09ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಬಳಸಿಕೊಂಡು ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮವಹಿಸುವಂತೆ ಸೂಚಿಸುವುದು.
- ಕಟ್ಟಡ ನಿರ್ಮಾಣದ ಗುಣಮಟ್ಟದ ಬಗ್ಗೆ ನಿಗಾ ವಹಿಸಲು ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಕ್ತ ನಿರ್ದೇಶನ ನೀಡತಕ್ಕದ್ದು.
- ಕೇಂದ್ರ ಕಛೇರಿಯಿಂದ ತಿಂಗಳಿಗೊಮ್ಮೆ ಕಟ್ಟಡ ನಿರ್ಮಾಣದ ಕಾಮಗಾರಿ ಅಭಿವೃದ್ಧಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು.
- ಕಟ್ಟಡ ನಿರ್ಮಾಣ ಕಾಮಗಾರಿಯನ್ನು ವಹಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
- ಕಟ್ಟಡವನ್ನು ಪೂರ್ಣಗೊಳಿಸಿ ಕಾಲೇಜಿಗೆ ಹಸ್ತಾಂತರಿಸಿದ ನಂತರ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಪ್ರಮಾಣ ಪತ್ರವನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಅವರಿಗೆ ಸೂಚನೆ ನೀಡುವುದು.
- ಪ್ರತಿ ಮಾಹೆಯ ಕಾಮಗಾರಿಯ ಪ್ರಗತಿ ವರದಿಯನ್ನು ಆಯಾ ಮಾಹೆಯ ಎಂ.ಎಂ.ಆರ್. ವರದಿಯಲ್ಲಿ ನಮೂದಿಸತಕ್ಕದ್ದು.
- ಕಾಮಗಾರಿಯ ಪ್ರಗತಿಯನ್ನು ಆಧರಿಸಿ ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡಲು ಸೂಚಿಸಿದೆ.

ಈ ಆದೇಶವನ್ನು ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ : ಶಿಇ 2974 ಐಎಫ್ (ಬಿ&ಎ) 2009 ದಿನಾಂಕ 27–11–2009ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಐ.ಎಫ್.ಮಾಗಿ

ವಿಶೇಷಾಧಿಕಾರಿ ಮತ್ತು ಪದನಿಮಿತ್ತ,

ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ಯೋಜನೆ)

ಪಿ.ಆರ್. 2805

HORTICULTURE SECRETARIAT

Sub: Implementation of "Scheme for Integrated Farming in Coconut for Productivity/ Improvement with Coconut Development Board Assistance (100% CDB)" – Issue of Additional Administrative Approval reg.

Read: 1) GO.NO. AHD 53 HPP 2009, dated 24.06.2009.
2) GO.NO. AHD 53 HPP 2009, dated 17.08.2009.
3) GO.NO. AHD 53 HPP 2009, dated 09.10.2009.
4) Director of Horticulture letter No. DH/PC/AHO-2/1/09-10-1523 dated 20.10.2009.

Preamble:

1. State Level Administrative Approval for implementing the Coconut Development Board Programmes for the components to be implemented by the Department of Horticulture has been accorded during the year 2009-10 vide Government Orders as below;

Sl. NO.	Government Order and date	Amount (Rs. In Lakhs)	Read above
1	GO.No. AHD 53 HPP 2009, dated 24.06.2009	303.03	1
2	GO.No. AHD 53 HPP 2009, dated 17.08.2009	32.33	2
3	GO.No. AHD 53 HPP 2009, dated 09.10.2009	211.75	3
	TOTAL	**547.11**	

2. However, Coconut Development Board has indicated a total allocation of 635.33 lakhs for Karnataka State during 2009-10. Out of this Rs. 3.125 lakhs State share will be met under the Head of Account 2401-00-119-4-05-139.

3. The Director of Horticulture vide letter read at (4) above has requested to issue additional administrative approval for the remaining amount of Rs. 88.22 lakhs (635.33-547.11) in order to implement the component of maintenance of old plots.

4. The proposal of Director of Horticulture has been examined and hence this Order.

Government Order No. AHD 53 HPP 2009, Bangalore, Dated: 4th December 2009

1. Government is pleased to accord State Level Administrative Approval for implementing the Coconut Development Programmes with an additional allocation of Rs. 88.22 lakhs (Rupees Eighty Eight Lakhs and Twenty Two Thousands Only) during the year 2009-10. This will be implemented by the Department of Horticulture for the maintenance of 504 hectares of old demonstration plots with 100% CDB share.

2. The Coconut Development Board share of Rs. 88.22 lakhs will be met under the State Plan scheme namely, "Scheme for Integrated Farming in Coconut for productivity/Improvement with Coconut Development Board Assistance (100% CDB)" Head of Account 2401-00-108-2-35-100 (Financial Assistance/Relief).

3. Budget will be released as and when Coconut Development Board provides funds.

4. This order issues with the concurrence of Finance Department vide its Note No.ಆಇ 417 ವೆ4/ 2008 dated 11.08.2009.

By Order and in the Name of the Governor of Karnataka

S. RAJU

Under Secretary to Government, Horticulture Department.

P.R. 2806

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 597 ಸಅಸೇ 2009, ಬೆಂಗಳೂರು, ದಿನಾಂಕ 8ನೇ ಡಿಸೆಂಬರ್ 2009.

ವಿಷಯ: ಮುಖ್ಯಮಂತ್ರಿಯವರ ಸಚಿವಾಲಯದಲ್ಲಿ ಮುಖ್ಯಮಂತ್ರಿಯವರ ಕಾರ್ಯದರ್ಶಿ ಹುದ್ದೆಯನ್ನು ಸೃಜಿಸುವ ಬಗ್ಗೆ.

ಮುಖ್ಯಮಂತ್ರಿಗಳ ಸಚಿವಾಲಯದಲ್ಲಿ ಮುಖ್ಯಮಂತ್ರಿಯವರ ಕಾರ್ಯದರ್ಶಿಯ ಒಂದು ಹುದ್ದೆಯನ್ನು ವೇತನ ಶ್ರೇಣಿ Pay Band-4 Rs. 37400 – 67000 Plus Grade Pay Rs. 10000 ರಲ್ಲಿ ದಿನಾಂಕ 6–11–2009ರಿಂದ ಅನ್ವಯವಾಗುವಂತೆ ಹಾಗೂ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಈ ಮೂಲಕ ಸೃಜಿಸಲಾಗಿದೆ.

2) ಈ ಆದೇಶವನ್ನು ಆರ್ಥಿಕ ಇಲಾಖೆಯೊಡನೆ ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 2178 : ಸೇವೆಗಳು–3:2009, ದಿನಾಂಕ 3–12–2009ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎಸ್. ಶಿವರಾಮ್

ಪಿ.ಆರ್. 2807

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ವಿಷಯ: ಶ್ರೀ ಎಂ. ನಾಗರಾಜ, ಕೆಎಎಸ್ (ಕಿರಿಯ ಶ್ರೇಣಿ) ಅಧಿಕಾರಿ, ಶ್ರೀ ಕೆ.ಎಂ. ಶಂಕರಯ್ಯ, ಉಪ ತಹಶೀಲ್ದಾರ್, ಶ್ರೀ ಬಿ.ಎಂ. ಶಿವಲಿಂಗಸ್ವಾಮಿ, ಪ್ರಥಮ ದರ್ಜೆ ಸಹಾಯಕ, ಶ್ರೀ ಎಸ್ ದೇವಯ್ಯ, ನಿವೃತ್ತ ಕಛೇರಿ ಸಹಾಯಕ ಇವರುಗಳ ವಿರುದ್ಧ ಜಂಟೀ ಇಲಾಖಾ ವಿಚಾರಣೆ– ಅಂತಿಮ ಆದೇಶ.

ಓದಲಾಗಿದೆ: 1) ದಿನಾಂಕ: 07–10–06ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 105 ಎಸ್‌ಇಎನ್ 05

2) ಶ್ರೀ ಟಿ.ಎಸ್. ಪಾಲನೇತ್ರ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು ಇವರ ವಿಚಾರಣಾ ವರದಿ ದಿನಾಂಕ: 27–09–07

3) ದಿನಾಂಕ: 03–01–08ರ ನೋಟೀಸು ಸಂಖ್ಯೆ: ಸಿಆಸುಇ 052 ಕೆಇವಿ 07

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಶ್ರೀ ಎಂ. ನಾಗರಾಜ್, ಕೆಎಎಸ್ (ಕಿರಿಯ ಶ್ರೇಣಿ) ಅಧಿಕಾರಿ, ಅಂದಿನ ಚಾಮರಾಜನಗರ ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಶ್ರೀ ಕೆ.ಎಂ. ಶಂಕರಯ್ಯ ಉಪ ತಹಶೀಲ್ದಾರ್, ಶ್ರೀ ಬಿ.ಎಂ. ಶಿವಲಿಂಗಸ್ವಾಮಿ, ಪ್ರಥಮ ದರ್ಜೆ ಸಹಾಯಕ ಮತ್ತು ಶ್ರೀ ಎಸ್ ದೇವಯ್ಯ, ನಿವೃತ್ತ ಕಛೇರಿ ಸಹಾಯಕ, ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ ಇವರುಗಳ ವಿರುದ್ಧ ಚಾಮರಾಜನಗರ ಜಿಲ್ಲೆಯ ಕಂದಾಯ ಘಟಕದಲ್ಲಿ ಯಾವುದೇ ನೇಮಕಾತಿ ಮಾಡದಿದ್ದರೂ ಹಾಗೂ ಬ್ಯಾಕ್ ಲಾಗ್ ಹುದ್ದೆಗಳು ಸೃಷ್ಟಿಯಾಗಿಲ್ಲದಿದ್ದರೂ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿ ಭರ್ತಿ ಮಾಡದ ಖಾಲಿ ಹುದ್ದೆಗಳ ವಿಶೇಷ ನೇಮಕಾತಿ ನಿಯಮ 2001 ರನ್ವಯ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಿ ಅಕ್ರಮವಾಗಿ ಅಧಿಸೂಚನೆ ಹೊರಡಿಸಿ ಅನರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಕಾರಣರಾಗಿರುವ ಆರೋಪದ ಸತ್ಯಾಸತ್ಯತೆಯನ್ನು ತಿಳಿಯುವ ಸಲುವಾಗಿ ಜಂಟಿ ಇಲಾಖಾ ವಿಚಾರಣೆ ಮುಂದುವರಿಸಿ, ಶ್ರೀ ಟಿ.ಎಸ್. ಪಾಲನೇತ್ರ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಸರ್ಕಾರವು ನೇಮಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ಇದರಂತೆ (1) ಶ್ರೀ ಎಂ ನಾಗರಾಜ, ಕೆಎಎಸ್ ಅಧಿಕಾರಿಯು ಚಾಮರಾಜನಗರ ಜಿಲ್ಲೆಯ ಕಂದಾಯ ಘಟಕದಲ್ಲಿ ಯಾವುದೇ ಬ್ಯಾಕ್‌ಲಾಗ್ ಹುದ್ದೆಗಳು ಸೃಷ್ಟಿಯಾಗಿಲ್ಲದಿದ್ದರೂ ಕೆಳಹಂತದ ಅಧಿಕಾರಿಗಳು ಸಲ್ಲಿಸಿದ ಪ್ರಸ್ತಾವನೆಯನ್ನು ಜಾರಿಯಲ್ಲಿರುವ ನಿಯಮಾವಳಿಗಳನ್ವಯ ತಮ್ಮ ಹಂತದಲ್ಲಿ ಪರಿಶೀಲಿಸದೆ, ನಿಯಮಾವಳಿಗಳು ಜಾರಿಗೆ ಬಂದ ದಿನಾಂಕದಿಂದ ಖಾಲಿ ಹುದ್ದೆಗಳ ಲೆಕ್ಕ ಹಾಕುವ ಬದಲು ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಲೆಕ್ಕ ಹಾಕುವ ಮೂಲಕ ಹುದ್ದೆಗಳು ಖಾಲಿ ಇಲ್ಲದಿದ್ದರೂ ನೇಮಕಾತಿಗೆ ಅಧಿಸೂಚನೆ ಹೊರಡಿಸಲು ಜಿಲ್ಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವ ಮೂಲಕ ಅನರ್ಹ ಅಭ್ಯರ್ಥಿಗಳು ಆಯ್ಕೆಗೊಳ್ಳಲು ಕಾರಣಕರ್ತರಾಗಿದ್ದು, ಇವರ ವಿರುದ್ಧದ ಆರೋಪವು ಸಾಬೀತಾಗಿರುತ್ತದೆ. (2) ಶ್ರೀ ಕೆ ಎಂ ಶಂಕರಯ್ಯ, ಇವರಿಗೆ ಅಧಿಸೂಚನೆ ಹೊರಡಿಸುವ ಹಂತದವರೆಗಿನ ಎಲ್ಲ ವಿದ್ಯಮಾನಗಳು ತಿಳಿದಿದ್ದರೂ ಕೆಳಹಂತದಿಂದ ಮಂಡಿಸಲಾದ ಕಛೇರಿ ಟಿಪ್ಪಣಿಯನ್ನು ವಿವೇಚನೆಯಿಂದ ಪರಿಶೀಲಿಸಿ ವಾಸ್ತವಿಕತೆ ಬಗ್ಗೆ ತಮ್ಮ ಟಿಪ್ಪಣಿಯ ಸಹಿತ ಮೇಲಧಿಕಾರಿಗಳಿಗೆ ಸಲ್ಲಿಸುವಲ್ಲಿ ವಿಫಲರಾಗುವ ಮೂಲಕ ಇವರ ವಿರುದ್ಧದ ಆರೋಪವು ಸಾಬೀತಾಗಿರುತ್ತದೆ. (3) ಶ್ರೀ ದೇವಯ್ಯ ಇವರು ಅಧಿಸೂಚನೆ ಪ್ರಕಟಣೆ ಹೊರಡಿಸಲು ಟಿಪ್ಪಣಿಯಲ್ಲಿ ಸ್ಪಷ್ಟವಾಗಿ ತಮ್ಮ ಅಭಿಪ್ರಾಯ ದಾಖಲಿಸಿ ತಪ್ಪು ಮಾರ್ಗದರ್ಶನ ನೀಡುವ ಮೂಲಕ ಇವರ ವಿರುದ್ಧದ ಆರೋಪವು ಸಾಬೀತಾಗಿರುತ್ತದೆ. (4) ಶ್ರೀ ಬಿ.ಎಸ್. ಶಿವಲಿಂಗಸ್ವಾಮಿ ಇವರು ಅಧಿಸೂಚನೆ

ಪ್ರಕಟಿಸುವ ಸಂಬಂಧ ಪೂರ್ಣ ಕಛೇರಿ ಟಿಪ್ಪಣಿಯನ್ನು ಸಿದ್ಧಪಡಿಸಿರುತ್ತಾರೆ. ಚಾಲ್ತಿ ನೀತಿ/ನಿಯಮಾವಳಿಗಳನ್ನು ಟಿಪ್ಪಣಿಯ ಸ್ಪಷ್ಟವಾಗಿ ನಮೂದಿಸಿರುವುದಿಲ್ಲ ನೇಮಕಾತಿ ಪ್ರಕ್ರಿಯೆ ಕುರಿತಂತೆ ಯಾವುದೇ ತೃಪ್ತಿದಾಯಕವಾದ ಸಾಕ್ಷ್ಯಾಧಾರಗಳ ಒದಗಿಸುವಲ್ಲಿ ವಿಫಲರಾಗುವ ಮೂಲಕ ಇವರ ವಿರುದ್ಧದ ಆರೋಪವು ಸಾಬೀತಾಗಿರುತ್ತದೆ.

ವಿಚಾರಣಾ ವರದಿಯನ್ನು ಪರಿಶೀಲಿಸಿ ಸರ್ಕಾರವು ಅಂಗೀಕರಿಸುತ್ತಾ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ವಿಚಾರಣಾ ವರದಿಯ ಬಗ್ಗೆ ಶ್ರೀ ಎಂ. ನಾಗರಾಜ, ಶ್ರೀ ಬಿ.ಎಸ್. ಶಿವಲಿಂಗಸ್ವಾಮಿ, ಶ್ರೀ ಎಸ್. ದೇವಯ್ಯ ಮತ್ತು ಶ್ರೀ ಕೆ.ಎಂ ಶಂಕರಯ್ಯ ರವರುಗಳು ಸಲ್ಲಿಸಿದ ಲಿಖಿತ ಅಹವಾಲು ಯಾವುದೇ ಸಮರ್ಥನೆಯಿಂದ ಕೂಡಿರುವುದಿಲ್ಲವೆಂದು ಪರಿಗಣಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 052 ಕೆಇವಿ 07, ಬೆಂಗಳೂರು, ದಿನಾಂಕ: 8ನೇ ಡಿಸೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ

1. ನಿಯಮ 8 (ii) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎಂ. ನಾಗರಾಜು, ಕೆಎಎಸ್ (ಕಿರಿಯ ಶ್ರೇಣಿ ಅಂದಿನ ಕೇಂದ್ರ ಸ್ಥಾನಿಕ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗ (ಹಾಲಿ ಉಪ ವಿಭಾಗಾಧಿಕಾರಿ, ರಾಮನಗರ ಉಪ ವಿಭಾಗ, ರಾಮನಗರ) ಇವರಿಗೆ ವಾಗ್ದಂಡನೆ ವಿಧಿಸಿದೆ.
2. ನಿಯಮ 8 (iv-a) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಬಿ.ಎಸ್. ಶಿವಲಿಂಗಸ್ವಾಮಿ, ಅಂದಿ ಪ್ರಥಮ ದರ್ಜೆ ಸಹಾಯಕ, ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇವರಿ ಇವರ ವೇತನವನ್ನು ದಿನಾಂಕ: 30–04–2010 ರವರೆಗೆ ಒಂದು ಹಂತ ಕೆಳಕ್ಕಿಳಿಸುವ ಮತ್ತು ದಂಡನೆಯ ಅವ ಮುಗಿದ ನಂತರ ಇವರ ವೇತನವು ಪೂರ್ವಸ್ಥಿತಿಗೆ ಬರುವ ದಂಡನೆ ವಿಧಿಸಿದೆ.
3. ನಿಯಮ 8 (iii) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಕೆ.ಎಂ. ಶಂಕರಯ್ಯ ಅಂದಿನ ಶಿರಸ್ತೇದಾರ ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇವರಿಗೆ ಇವರ ಮುಂದಿನ ಒಂದ ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಬೀರದಂತೆ ತಡೆಹಿಡಿಯುವ ದಂಡನೆ ವಿಧಿಸಿದೆ.

ಶ್ರೀ ಎಸ್ ದೇವಯ್ಯರವರು ಸೇವೆಯಿಂದ ನಿವೃತ್ತರಾಗಿರುವುದರಿಂದ, ಇವರಿಗೆ ದಂಡನೆ ವಿಧಿಸುವ ಆದೇಶವನ ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–2)

ಪಿ.ಆರ್. 2808

COMMERCE AND INDUSTRIES SECRETARIAT

No. CI 59 SPI 2009, Bangalore, Dated: 4th December 2009

AMENDMENT

Sub: The Project Proposal of M/S Narayana Health Academy Pvt. Ltd, Bangalore to establis an "Education City" at Henagara – Hosahalli Village, Bangalore Urban District Chang of Survey numbers reg

Read: 1) G.O. No. CI 119 SPI 2008, Bangalore dated 7-05-2008.

2) Proceedings of the 17th State High Level Clearance, Committee (SHLCC) meetin held on 28-1-2009.

3) Letter No. KUM/SHLCC/AD/409/(06-07)/2008-09 Dated 07-03-2009..

The Survey Numbers indicated in the Annexure of the Government Order No. CI 119 SPI 200 Bangalore dated 07-05-2008 are substituted by new survey Numbers indicated below.

Sy. Nos. 2 to 8,9,10,40,42& 43 in 30 acres of land in Henagara, Hosahalli Village. Anekal Talu Bangalore and Project Proponents to bring Consent for a minimum of 80% of the extent for KIADB to g for consent acquisition.

By Order and in the name of the Governor of Karnataka

APARNA PAVATE

Desk Officer (Technical Cell)

Commerce & Industries Department

P.R. 2809

ಸಹಕಾರ ಸಚಿವಾಲಯ

ವಿಷಯ: ಅಖಿಲ ವೀರಶೈವ ಮಂಡಳಿ, ನಂಜನಗೂಡು, ಈ ಸಂಘಕ್ಕೆ ಆಡಳಿತಾಧಿಕಾರಿಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ: 1) ಸಹಕಾರ ಸಂಘಗಳ ನಿಬಂಧಕರವರ ಪತ್ರ ಸಂಖ್ಯೆ: ಆರ್‌ಸಿಎಸ್/ಎಡಿಎಂ/299/ಎಸ್‌ಓಆರ್/2008-09 ದಿನಾಂಕ: 31-01-2009.

2) ಕಾರಣ ಕೇಳುವ ನೋಟೀಸ್ ದಿನಾಂಕ: 09/ 11-03-2009.

3) ಕಾರ್ಯದರ್ಶಿ ಅಖಿಲ ವೀರಶೈವ ಮಂಡಳಿ, ನಂಜನಗೂಡು, ಇವರು ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಉತ್ತರ ದಿನಾಂಕ: ಇಲ್ಲ

4) ಸಹಕಾರ ಸಂಘಗಳ ನಿಬಂಧಕರ ಕಛೇರಿ ಬೆಂಗಳೂರು ಇವರ ಪತ್ರ ಸಂಖ್ಯೆ ಆರ್‌ಸಿಎಸ್/ಎಡಿಎಂ/299/ಎಸ್‌ಓಆರ್/2008-09 ದಿನಾಂಕ:03/ 10-11-2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ದಿನಾಂಕ: 31-01-2009 ರ ಪತ್ರದಲ್ಲಿ ಅಖಿಲ ವೀರಶೈವ ಮಂಡಳಿ, ನಂಜನಗೂಡು, ಈ ಸಂಘದಲ್ಲಿ ಕಾಯ್ದೆ ಬದ್ಧವಾಗಿ ಆಡಳಿತ ಮಂಡಳಿ ಆಯ್ಕೆಯಾಗಿಲ್ಲದೇ ಕಾನೂನು ಬಾಹಿರವಾಗಿ ಮುಂದುವರಿಯುತ್ತಿರುವುದರಿಂದ, ಸಾರ್ವಜನಿಕ ಹಿತದೃಷ್ಟಿಯಿಂದ ಸಂಘಕ್ಕೆ ಕರ್ನಾಟಕ ಸಂಘಗಳ ಕಾಯ್ದೆ 1960ರ ಕಲಂ 27 (ಎ) 1 (ಬಿ)ರ ಮೇರೆಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲು ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ಜಿಲ್ಲೆ, ಮೈಸೂರು ರವರ ಪ್ರಸ್ತಾವನೆಯಂತೆ ಸಂಘದ ವ್ಯವಹಾರದ ಬಗ್ಗೆ ನಡೆಸಲಾದ ವಿಚಾರಣಾ ವರದಿಯಲ್ಲಿ ಸಾರ್ವಜನಿಕರ ಹಣ ದುರುಪಯೋಗ ಮಾಡಿಕೊಂಡಿರುವುದು ಕಂಡು ಬಂದಿದೆ ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27 (ಎ) 1 (ಬಿ)ರ ಪ್ರಕಾರ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ ಆದೇಶ ಹೊರಡಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರಲ್ಲಿ ಅಧ್ಯಕ್ಷರು/ಕಾರ್ಯದರ್ಶಿಗಳು ಅಖಿಲ ವೀರಶೈವ ಮಂಡಳಿ, ನಂಜನಗೂಡು ರವರಿಗೆ ಕಾರಣ ಕೇಳುವ ಸೂಚನಾ ಪತ್ರವನ್ನು ಕಳುಹಿಸಿ ಸಾರ್ವಜನಿಕರ ಹಣ ದುರುಪಯೋಗ ಮಾಡಿಕೊಂಡಿರುವುದು ಕಂಡು ಬಂದಿದ್ದು, ನೋಂದಾಣಿ ಕಾಯ್ದೆಯ ಕಲಂ 11, 12 ಮತ್ತು 13ನ್ನು ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ಕಲಂ 27 (ಎ) ಪ್ರಕಾರ ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬಾರದು ಎಂಬ ಬಗ್ಗೆ ಲಿಖಿತ ಹೇಳಿಕೆಯನ್ನು ಸೂಚನಾ ಪತ್ರ ತಲುಪಿದ 15 ದಿವಸಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿ ಪತ್ರವನ್ನು ಹೊರಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರಲ್ಲಿ ಕಾರ್ಯದರ್ಶಿ, ಅಖಿಲ ವೀರಶೈವ ಮಂಡಳಿ, ನಂಜನಗೂಡು ರವರು ಸರ್ಕಾರಕ್ಕೆ ಕಾರಣ ಕೇಳುವ ಸೂಚನಾ ಪತ್ರಕ್ಕೆ ಉತ್ತರ ನೀಡುತ್ತಾ ವಿಚಾರಣಾಧಿಕಾರಿಗಳವರ ಅಭಿಪ್ರಾಯದ ವರದಿಯನ್ನು ತಿರಸ್ಕರಿಸಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂತಲೂ ಅಥವಾ ಮರು ಪರಿಶೀಲನೆಗಾಗಿ ವಿಚಾರಣೆ ಮಾಡಲು ಸಂಬಂಧಿಸಿದ ಇಲಾಖೆಯ ನಿರ್ದೇಶನ ನೀಡಬೇಕೆಂದು ಕೋರಿಕೊಂಡಿರುತ್ತಾರೆ. ಸದರಿ ಉತ್ತರವನ್ನು ಸಹಕಾರ ಸಂಘಗಳ ನಿಬಂಧಕರಿಗೆ ಕಳುಹಿಸಿಕೊಡುತ್ತಾ ಹೇಳಿಕೆಯನ್ನು ಪರಿಶೀಲಿಸಿ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ನೀಡಲು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (4)ರಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು, ಹಾಗೂ ಸಂಘ ಸಂಸ್ಥೆಗಳ ಜಿಲ್ಲಾ ನೋಂದಣಾಧಿಕಾರಿಗಳು ಮೈಸೂರು ರವರ ವರದಿಯನ್ನು ಪರಿಶೀಲಿಸಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ಕಲಂ 25ರನ್ವಯ ನಡೆಸಿರುವ ವಿಚಾರಣಾ ವರದಿಯನ್ವಯ ಸದರಿ ಸಂಸ್ಥೆಗೆ ಜರೂರಾಗಿ ಆಡಳಿತಾಧಿಕಾರಿಯನ್ನು ನೇಮಿಸಿ ಸಂಘದ ಹಣಕಾಸು ವಸ್ತು ಸ್ಥಿತಿಯನ್ನು ಹಾಗೂ ಹಣದುರುಪಯೋಗ ತಡೆಯಲು ಸ್ಥಿರ ಮತ್ತು ಚರಾಸ್ತಿಗಳನ್ನು ರಕ್ಷಿಸಲು ಮತ್ತು ಚುನಾವಣೆಯ ಮೂಲಕ ಹೊಸ ಪದಾಧಿಕಾರಿಗಳನ್ನು ನೇಮಕಗೊಳ್ಳುವಂತೆ ಸಮಿತಿಗೆ ಸಹಾಯ ಮಾಡಲು ಆಡಳಿತಾಧಿಕಾರಿಯವರನ್ನು ನೇಮಿಸುವುದು ಸೂಕ್ತವೆಂದು ಸಹಕಾರ ಸಂಘಗಳ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 37 ಸಿಎಸ್‌ಅರ್ 2009, ಬೆಂಗಳೂರು, ದಿನಾಂಕ: 30ನೇ ನವೆಂಬರ್ 2009

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಅಖಿಲ ವೀರಶೈವ ಮಂಡಳಿ, ನಂಜನಗೂಡು ಈ ಸಂಘದ ಹಣಕಾಸು ವಸ್ತು ಸ್ಥಿತಿಯನ್ನು ಹಾಗೂ ಹಣದುರುಪಯೋಗ ತಡೆದು ಸ್ಥಿರ ಮತ್ತು ಚರಾಸ್ಥಿಗಳನ್ನು ರಕ್ಷಿಸಲು ಹಾಗೂ ಚುನಾವಣೆಯ ಮೂಲಕ ಹೊಸ ಪದಾಧಿಕಾರಿಗಳನ್ನು ನೇಮಿಸಬೇಕಾಗಿರುವುದರಿಂದ ಈ ಸಂಸ್ಥೆಯ ಹಿತದೃಷ್ಟಿಯಿಂದ ಈ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಾಣಿ ಕಾಯ್ದೆ 1960 ಕಲಂ 27 (ಎ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಇವರನ್ನು ಆಡಳಿತಾಧಿಕಾರಿಯನ್ನಾಗಿ ಆರು (6) ತಿಂಗಳ ಅವಧಿಗೆ

ಅಥವಾ ಸದರಿ ಸಂಸ್ಥೆಗೆ ಚುನಾವಣೆ ನಡೆಸಿ ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಸಂಘದಲ್ಲಿ ಹಾಲಿ ನೋಂದಾಯಿತವಾಗಿರುವ ಸದಸ್ಯರುಗಳಿಂದ ಚುನಾವಣೆ ನಡೆಸಿ ಹೊಸ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ನಂಜುಂಡಪ್ಪ

ಪಿ.ಆರ್. 2810

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ.

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಪಿ. ನಾಗರಾಜು, ಎ.ಸಿ.ಪಿ., ಸಿ.ಎ.ಆರ್. ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ: ಸಿಬಿ(5)14/2008-09 ದಿನಾಂಕ: 28-01-2009

2) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ: 28-03-09

3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(5)14/2008-09 ದಿನಾಂಕ: 04-06-2009

4) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 98 ಸಿಎನ್‌ಎಸ್ 09 ದಿನಾಂಕ:20.10.09

ಪ್ರಸ್ತಾವನೆ:

ಶ್ರೀ ಪಿ. ನಾಗರಾಜು, ಎ.ಸಿ.ಪಿ., ಸಿ.ಎ.ಆರ್. ಬೆಂಗಳೂರು, ಇವರು ರಿಸರ್ವ್ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಭದ್ರಾವತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಚ್ಯುತಿ, ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

ಶ್ರೀ ಪಿ. ನಾಗರಾಜು, ಎ.ಸಿ.ಪಿ., ಸಿ.ಎ.ಆರ್. ಉತ್ತರ, ಬೆಂಗಳೂರು, ಆದ ನೀವು ಹಿಂದೆ 2000 ರಿಂದ 2004 ರವರೆಗೆ ಆರ್.ಪಿ.ಐ., ಆಗಿ ಭದ್ರಾವತಿ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಹಣ ಪಾವತಿಸಿದ ಅಕ್ವಿಟೆನ್ಸ್‌ಗಳನ್ನು ಸರಿಯಾಗಿ ಪರಿಶೀಲಿಸದೆ, ಕೆಲವು ಅಕ್ವಿಟೆನ್ಸ್‌ಗಳ ಕೊನೆಯಲ್ಲಿ ಸಹಿ ಮಾಡದೇ ಡಿ.ಪಿ.ಓ.ಗೆ ಕಳುಹಿಸಿಕೊಟ್ಟು, ಕರ್ತವ್ಯಲೋಪ ಎಸಗಿರುವುದಲ್ಲದೆ. ದಿ: 26-02-2005ರಂದು ಶ್ರೀ ಎಂ.ಎಸ್. ನಿತ್ಯಾನಂದ, ಎ.ಪಿ.ಸಿ., 132, ರವರಿಂದ ತಪ್ಪೊಪ್ಪಿಗೆ ಪತ್ರವನ್ನು ಬರೆಯಿಸಿಕೊಂಡು, ವಿಚಾರಣೆ ಕಾಲದಲ್ಲಿ ಹಾಜರುಪಡಿಸಿರುತ್ತೀರಿ. ತಪ್ಪೊಪ್ಪಿಗೆ ಪತ್ರ ಬರೆಸಿಕೊಳ್ಳುವ ಬದಲು, ಆ ವೇಳೆಯಲ್ಲಿ ಸಂಬಂಧಪಟ್ಟ ಅವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳುವಂತೆ ನಿಮ್ಮ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವುದು ನಿಮ್ಮ ಆದ್ಯ ಕರ್ತವ್ಯವಾಗಿತ್ತು. ಆದರೆ, ಹಾಗೆ ಮಾಡುವ ಬದಲು, ತಪ್ಪೊಪ್ಪಿಗೆ ಪತ್ರವನ್ನು ಶ್ರೀ ಎಂ.ಎಸ್. ನಿತ್ಯಾನಂದ, ಎ.ಪಿ.ಸಿ.-132, ರವರ ಮೇಲಿನ ಇಲಾಖಾ ವಿಚಾರಣೆ ಕಾಲದಲ್ಲಿ ಹಾಜರುಪಡಿಸುವ ಮೂಲಕ ನಿಮ್ಮ ಕರ್ತವ್ಯದಲ್ಲಿ ಕರ್ತವ್ಯಚ್ಯುತಿ, ಬೇಜವಾಬ್ದಾರಿತನ ಹಾಗೂ ಅಧಿಕಾರ ದುರುಪಯೋಗ ಪಡಿಸಿಕೊಂಡಿರುತ್ತೀರಿ".

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಡಿ.ಜಿ ಮತ್ತು ಐ.ಜಿ.ಪಿ ಬೆಂಗಳೂರು ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ: 28-01-09ರ ಆದೇಶದಲ್ಲಿ "ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಎರಡು ವರ್ಷಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ".

ಈ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಘಟನೆಯಲ್ಲಿ ಅರ್ಜಿದಾರರ ಪಾತ್ರವನ್ನು ಗಮನಿಸಿದಲ್ಲಿ ದಂಡನೆಯು ಆರೋಪಕ್ಕೆ ಅನುಗುಣವಾಗಿಲ್ಲವೆಂದು ಸರ್ಕಾರವು ತೀರ್ಮಾನಿಸಿ, ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 80 ಪೊಸಿಅ 2009, ಬೆಂಗಳೂರು, ದಿನಾಂಕ: 4ನೇ ಡಿಸೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಪಿ. ನಾಗರಾಜು, ಎ.ಸಿ.ಪಿ., ಸಿ.ಎ.ಆರ್. ಬೆಂಗಳೂರು, ಇವರಿಗೆ ಶಿಸ್ತು ಪ್ರಾಧಿಕಾರವು ದಿನಾಂಕ: 28-01-09ರ ಆದೇಶದಲ್ಲಿ ವಿಧಿಸಿದ ದಂಡನೆಯನ್ನು ಮಾರ್ಪಡಿಸಿ "ವಾಗ್ದಂಡನೆ"ಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 2811

ವಿಷಯ: ಶ್ರೀ ತಿಮ್ಮಯ್ಯ, ಎ.ಎಸ್.ಐ ವಿಧಾನ ಸೌಧ, ಪೊಲೀಸ್ ಠಾಣೆ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಉಪ ಪೊಲೀಸ್ ಆಯುಕ್ತರು, (ಕಾ.ಸು) ಬೆಂಗಳೂರು, ಇವರ ಆದೇಶ ಸಂಖ್ಯೆ: 50/ಡಿಇ/ಆರ್6/86/ ದಿನಾಂಕ: 04-12-87
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಡಿಷನಲ್ ಪೊಲೀಸ್ ಕಮೀಷನರ್, ಬೆಂಗಳೂರು, ಇವರ ಆದೇಶ ಸಂಖ್ಯೆ: ಅಪೀಲು/15/88-89 ಓ.ಬಿ: 41/88/ ದಿ: 16-06-88
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ: 22-03-06
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು (2)53/2006-07 ದಿನಾಂಕ: 19-11-2006
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 26 ಸಿಎನ್‌ಎಸ್ 09 ದಿನಾಂಕ:20.10.09

ಪ್ರಸ್ತಾವನೆ:

ಶ್ರೀ ತಿಮ್ಮಯ್ಯ, ಎ.ಎಸ್.ಐ ವಿಧಾನ ಸೌಧ, ಬೆಂಗಳೂರು, ಇವರು ರಾಜಾಜಿನಗರ ಪೊಲೀಸ್ ಠಾಣೆ ಬೆಂಗಳೂರು, ಪೊಲೀಸ್ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ದಿನಾಂಕ: 03-05-1986ರ ರಾತ್ರಿ ಸಮಯ 12-15 ಘಂಟೆಯಲ್ಲಿ ಆಟೋ ಚಾಲಕರಾದ ಶ್ರೀ ಕೆ.ಎನ್. ಮಧುಸೂದನ್ ಮತ್ತು ಶ್ರೀ ವಿ.ಆರ್. ಗಂಗಾಧರ್ ಎಂಬುವವರನ್ನು ಮಧ್ಯದ ಅಮಲಿನಲ್ಲಿ ಹೊಡೆದಿರುವುದು".

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿರುವುದಿಲ್ಲವೆಂದು ಸಲ್ಲಿಸಿದ ವರದಿಯನ್ನು ಶಿಸ್ತು ಪ್ರಾಧಿಕಾರವು ಒಪ್ಪದೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪದ ಶಿಸ್ತುಪ್ರಾಧಿಕಾರಿ ಹಾಗೂ ಉಪ ಪೊಲೀಸ್ ಆಯುಕ್ತರು, (ಕಾ.ಸು) ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 04-12-87ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಐದು ವರ್ಷಗಳ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ದಕ್ಕೆಯಾಗುವಂತೆ ಮುಂದೂಡಿದ್ದಾರೆ. ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಡಿಷನಲ್ ಪೊಲೀಸ್ ಕಮೀಷನರ್, ಬೆಂಗಳೂರು ಇವರು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ: 16-06-88ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಪರಿಶೀಲಿಸಲಾಗಿದೆ. ದಂಡನೆಯು ಆರೋಪಕ್ಕೆ ಅನುಗುಣವಾಗಿಲ್ಲವೆಂದು ಪರಿಗಣಿಸಿ, ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಲು ಆಗಿರುವ ವಿಳಂಬವನ್ನು ಮನ್ನಾ ಮಾಡಿ ಶಿಸ್ತು ಪ್ರಾಧಿಕಾರದ ದಂಡನೆಯನ್ನು ಭಾಗಶಃ ಪುರಸ್ಕರಿಸುವ ಕುರಿತು ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 505 ಪೊಸಿಅ 2006, ಬೆಂಗಳೂರು, ದಿನಾಂಕ: 4ನೇ ಡಿಸೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ತಿಮ್ಮಯ್ಯ, ಎ.ಎಸ್.ಐ ವಿಧಾನ ಸೌಧ, ಪೊಲಿ ಠಾಣೆ, ಬೆಂಗಳೂರು, ಇವರಿಗೆ ಶಿಸ್ತು ಪ್ರಾಧಿಕಾರವು ದಿನಾಂಕ: 04-12-87ರ ಆದೇಶದಲ್ಲಿ ವಿಧಿಸಿದ ದಂಡನೆಯ ಮಾರ್ಪಡಿಸಿ ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಒಂ ವರ್ಷ ಕಾಲ ಮುಂದೂಡಿ ಆದೇಶಿಸಿದೆ. ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನ

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 2812

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ: ಕರ್ನಾಟಕ ರಾಜ್ಯ ಮಟ್ಟದ ಅಡ್ವೋಕೇಟ್ ಕ್ಲರ್ಕ್ಸ್ ಕ್ಷೇಮಾಭಿವೃದ್ಧಿ ನಿಧಿಗಾಗಿ ಪ್ರಾರಂಭಿಕ ಠೇವಣಿಯ ಸಹಾಯಾನುದಾನ ಬಿಡುಗಡೆ ಕುರಿತು.

ಓದಲಾಗಿದೆ: 1) ರಿಟ್ ಅರ್ಜಿ ಸಂಖ್ಯೆ 20740/2005ರ ಮೇಲೆ ಉಚ್ಚ ನ್ಯಾಯಾಲಯದ ದಿನಾಂಕ: 09-07-200 ಆದೇಶ.

2) ಅಧಿಸೂಚನೆ ಸಂಖ್ಯೆ ಲಾ 208 ಎಲ್‌ಸಿಎಲ್ 2005(P) ದಿನಾಂಕ: 18-07-2009 (ವಕೀ ಗುಮಾಸ್ತರ ಕ್ಷೇಮಾಭಿವೃದ್ಧಿ ನಿಯಮಗಳು)

ಪ್ರಸ್ತಾವನೆ:

ಅಧ್ಯಕ್ಷರು, ಕರ್ನಾಟಕ ರಾಜ್ಯ ಮಟ್ಟದ ಅಡ್ವೋಕೇಟ್ ಕ್ಲರ್ಕ್ಸ್ ಸಂಘರವರು ಕರ್ನಾಟಕ ವಕೀಲರ ಕ್ಷೇಮಾಭಿವ ಅಧಿನಿಯಮ 1983ರ (1985ರ ಕರ್ನಾಟಕ ಆಕ್ಟ್ ನಂ.2) ಸೆಕ್ಷನ್ 27ರನ್ವಯ ವಕೀಲರ ಸಹಾಯಕರ ಕ್ಷೇಮಾಭಿವ ನಿಧಿಯನ್ನು ಅವರ ನಿವೃತ್ತಿ ಸೌಲಭ್ಯಗಳಿಗಾಗಿ ಸ್ಥಾಪಿಸಿ ನಿಯಮಗಳನ್ನು ರಚಿಸುವ ಸಲುವಾಗಿ ಸರ್ಕಾರ ಹಾಗೂ ವಕೀ ಪರಿಷತ್ತನ್ನು ಪ್ರತಿವಾದಿಗಳನ್ನಾಗಿ ಮಾಡಿ ರಿಟ್ ಪಿಟಿಷನ್ ಸಂಖ್ಯೆ 20740/2005ನ್ನು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು.

ವಕೀಲರು ಅವರ ಕೆಲಸಗಳಿಗಾಗಿ ವಕೀಲರ ಸಹಾಯಕರನ್ನು ನೇಮಿಸಿಕೊಂಡಿದ್ದು ಸರ್ಕಾ ನೇಮಕಾತಿಗೊಳಿಸಿರುವುದಿಲ್ಲವಾದ್ದರಿಂದ ಅವರ ಸೇವೆಯು ಕೆ.ಸಿ.ಎಸ್.ಆರ್ ನಿಯಮಗಳ ವ್ಯಾಪ್ತಿಗೊಳಪಡುವುದಿಲ್ಲವಾದ್ದರಿ ವಕೀಲರ ಪರಿಷತ್ತು ವಕೀಲರ ಕ್ಷೇಮಾಭಿವೃದ್ಧಿ ನಿಧಿ ನಿರ್ವಹಿಸುತ್ತಿರುವಂತೆ ವಕೀಲರಿಗಾಗಿ ದುಡಿಯುತ್ತಿರುವ ವಕೀ ಸಹಾಯಕರ ಕ್ಷೇಮಾಭಿವೃದ್ಧಿ ನಿಧಿಯನ್ನು ಸ್ಥಾಪಿಸಿ ನಿರ್ವಹಿಸಲು ಮುಂದೆ ಬಂದಲ್ಲಿ ನಿಯಮಗಳನ್ನು ರಚಿಸಲು ಸರ್ಕಾರದ ಯಾವುದೇ ವಿರೋಧವಿರುವುದಿಲ್ಲವೆಂದು ಉಚ್ಚ ನ್ಯಾಯಾಲಯಕ್ಕೆ ತಿಳಿಸಿ, ಕರಡು ನಿಯಮಗಳ ಪ್ರತಿಯನ್ನು ಒದಗಿಸಲಾಗಿ ಅದರಂತೆ, ಉಚ್ಚ ನ್ಯಾಯಾಲಯವು ಉಲ್ಲೇಖಿತ (1)ರ ದಿನಾಂಕ: 09-07-2009ರ ಆದೇಶದಲ್ಲಿ, ನೀಡಿದ ನಿರ್ದೇಶನದ ಪುನಃ ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಅಡ್ವೋಕೇಟ್ ಜನರಲ್ ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ವಕೀಲರ ಸಹಾಯಕರ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳೊಂದಿಗೆ ಹಲ ಬಾರಿ ಸಭೆ ನಡೆಸಿ ಒಮ್ಮತಕ್ಕೆ ಬಂದು ಕರಡು ನಿಯಮಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದರಿಂದ ವಕೀಲರು ನೇಮಿಸಿಕೊ ಗುಮಾಸ್ತರು ಅವರಿಗಾಗಿಯೇ ಕೆಲಸ ನಿರ್ವಹಿಸುವುದರಿಂದ ನಿಧಿ ಕ್ರೂಢೀಕರಣಕ್ಕೆ ಪರಿಷತ್ತಿನ ವಕೀಲರೆಲ್ಲರೂ ಸಹಕ ನೀಡುವಂತೆ, ಹಾಗೂ ವಕೀಲರ ಗುಮಾಸ್ತರ ಸಂಘವು ನಿಶ್ಚಿತ ಹಾಗೂ ಎಸ್.ಬಿ. ಖಾತೆಯಲ್ಲಿಟ್ಟಿರುವ ಒಟ್ಟು ರೂ.1. ಲಕ್ಷಗಳನ್ನು ಅವರ ಕಲ್ಯಾಣ ನಿಧಿಗಾಗಿ ವಕೀಲರ ಪರಿಷತ್ತಿನ ಅಧ್ಯಕ್ಷತೆ ನಿಯಮಗಳ ರಚನೆ ನಂತರ ಹಸ್ತಾಂತರಿಸಲು ಮ ಇತರ ಮೂಲಗಳಿಂದ ಕಲ್ಯಾಣ ನಿಧಿ ಸಂಗ್ರಹಿಸಿ ನಿಧಿಯನ್ನು ವಕೀಲರ ಪರಿಷತ್ತಿಗೆ ನೀಡಲು ನಿಧಿ ಸಂಗ್ರಹ ಹೆಚ್ಚಿಸಿಕೊಳ್ ಮತ್ತು ಈ ಉದ್ದೇಶಕ್ಕಾಗಿ ಸರ್ಕಾರವು ವಕೀಲರ ಗುಮಾಸ್ತರ ಸಂಘವು ಪ್ರಾಥಮಿಕವಾಗಿ ನೀಡುವ ಮೊತ್ತಕ್ಕೆ ಅನುಗುಣವ ಸರ್ಕಾರದಿಂದ ಒಂದು ಬಾರಿಯ ಅನುದಾನವನ್ನಾಗಿ (One time grant) ನೀಡಲು ತೀರ್ಮಾನಿಸಲಾಯಿತು. ಅದರ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗಿ 2009-10ನೇ ಸಾಲಿನ ಆಯವ್ಯಯದಲ್ಲಿ ವಕೀಲರ ಕ್ಷೇಮಾಭಿವೃದ್ಧಿಗಾಗಿ ಶೀರ್ಷಿಕೆ 2014-00-114-0-03-104 (ಯೋಜನೆ) ಅಡಿ ರೂ. 10.00 ಲಕ್ಷಗಳನ್ನು ಒದಗಿಸಿದ್ದು, ಅದರಿಂದ ವಕೀ ಗುಮಾಸ್ತರ ಕ್ಷೇಮಾಭಿವೃದ್ಧಿ ನಿಧಿಗೆ ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಸಹಮತಿಸಿದೆ. ಮತ್ತು ಉಲ್ಲೇಖಿತ (2 ದಿನಾಂಕ: 18-07-2009ರ ಅಧಿಸೂಚನೆಯಲ್ಲಿ ವಕೀಲರ ಗುಮಾಸ್ತರ ಕ್ಷೇಮಾಭಿವೃದ್ಧಿ ನಿಯಮಗಳನ್ನು ರಚಿಸಲಾಗಿದೆ.

ಅದರಂತೆ, ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಲಾ 208 ಎಲ್‌ಸಿಎಲ್ 2005, ಬೆಂಗಳೂರು, ದಿನಾಂಕ: 9ನೇ ಡಿಸೆಂಬರ್ 2009

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರದಿಂದ ಕರ್ನಾಟಕ ವಕೀಲರ ಕ್ಲರ್ಕ್ಸ್ ವೆಲ್‌ಫೇರ್ ಫಂಡ್ ನಿಧಿಗೆ ರೂ. 10.00 ಲಕ್ಷಗಳನ್ನು (ರೂಪಾಯಿ ಹತ್ತು ಲಕ್ಷಗಳು ಮಾತ್ರ) ಒಂದು ಬಾರಿಯ ಅನುದಾನವನ್ನಾಗಿ ವಕೀಲರ ಪರಿಷತ್ತಿಗೆ ಕೆಳಕಂಡ ಷರತ್ತಿನೊಂದಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

1. ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ನಿಯಮಾನುಸಾರ ಬಳಸತಕ್ಕದ್ದು.
2. ಬಳಕೆ ಪ್ರಮಾಣ ಪತ್ರವನ್ನು ಅಡ್ವೋಕೇಟ್ ಜನರಲ್‌ರವರ ಮೂಲಕ ಅಂಕಿ ಅಂಶಗಳ ಸಹಿತ ಕಾಲಮಿತಿಯಲ್ಲಿ ನಿಯಮಾನುಸಾರ ಸಲ್ಲಿಸತಕ್ಕದ್ದು.
3. ವಕೀಲರ ಗುಮಾಸ್ತರ ಸಂಘದಿಂದ ಪ್ರಸ್ತಾವನೆಯಲ್ಲಿ ತಿಳಿಸಿರುವ ಪ್ರಾರಂಭಿಕ ಮೊತ್ತ ಪಡೆದು ನಿಧಿಯ ಲೆಕ್ಕಕ್ಕೆ ನಿಯಮಾನುಸಾರ ತೆಗೆದುಕೊಳ್ಳತಕ್ಕದ್ದು.

ಸದರಿ ಮೊತ್ತವನ್ನು ಲೆಕ್ಕ ಶೀರ್ಷಿಕೆ 2014-00-114-0-03-104 (ಯೋಜನೆ) ಅಡಿ ಭರಿಸತಕ್ಕದ್ದು. ಈ ಹಣವನ್ನು ವಕೀಲರ ಸಂಘಗಳಿಗೆ ಸಹಾಯಾನುದಾನ ನಿಯಮಾವಳಿಗಳು ಹಾಗೂ ಅಗಿಂದಾಗ್ಗೆ ಹೊರಡಿಸಿರುವ ತಿದ್ದುಪಡಿ ನಿಯಮಗಳಲ್ಲಿ ಸ್ಪಷ್ಟಪಡಿಸಿರುವಂತೆ ಅಡ್ವೋಕೇಟ್ ಜನರಲ್, ಕರ್ನಾಟಕ, ಬೆಂಗಳೂರವರಿಗೆ ಬಿಲ್ಲನ್ನು ಸಲ್ಲಿಸಿ ಹಣ ಪಾವತಿಸಿಕೊಳ್ಳಬಹುದಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 303 ವೆಚ್ಚ-10 2009 ದಿನಾಂಕ: 16-06-2009ರಲ್ಲಿ ನೀಡಿರುವ ಸಹಮತಿ ಹಾಗೂ ಕಾರ್ಯದರ್ಶಿಗಳಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ: 16-05-2008ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಶಕುಂತಲ ಹೆಚ್.ಆರ್

ಪಿ.ಆರ್. 2813

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2)

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಸಮಾಜ ಕಲ್ಯಾಣ ಸಚಿವಾಲಯ

ವಿಷಯ: ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಕುಟುಂಬಗಳ ಸಮೀಕ್ಷೆ ನಡೆಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ:ಸಕಇ 11 ಎಸ್‌ಎಡಿ 2007, ದಿನಾಂಕ: 23-08-2007

2) ಅರೆ ಸರ್ಕಾರಿ ಪತ್ರ ಸಂಖ್ಯೆ: ಕರಾ/ನ್ಯಾಸವಿಆ/ಸಿಆರ್-7/ 2009-10, ದಿನಾಂಕ: 29-08-2009.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಆದೇಶದ ಪ್ರಕಾರ ನ್ಯಾಯಮೂರ್ತಿ ಎ.ಜೆ.ಸದಾಶಿವ ವಿಚಾರಣಾ ಆಯೋಗವು ರಾಜ್ಯದಲ್ಲಿನ ಪರಿಶಿಷ್ಟ ಜಾತಿ ಜನರ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಅರಿಯಲು ಹಾಗೂ ಸಂವಿಧಾನವು ಪರಿಶಿಷ್ಟ ಜಾತಿಯವರಿಗೆ ನೀಡಿರುವ ಸೌಲಭ್ಯಗಳು ಪರಿಶಿಷ್ಟ ಜಾತಿಯ ಉಪ ಜಾತಿಗಳಿಗೆ ತಲುಪಿವೆಯೇ ಎಂಬುದರ ಸಮೀಕ್ಷೆ ಹಾಗೂ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಹಿಂದುಳಿದ ಜಾತಿಗಳಿಗೆ ಸಂಬಂಧಿಸಿದಂತೆ ನಡೆಸುವ ಸಮೀಕ್ಷೆ ಇವುಗಳನ್ನು ಜಂಟಿಯಾಗಿ ನಡೆಸಬೇಕಾಗಿರುತ್ತದೆ.

ಕಾರ್ಯದರ್ಶಿ, ನ್ಯಾಯಮೂರ್ತಿ ಎ.ಜೆ. ಸದಾಶಿವ ವಿಚಾರಣಾ ಆಯೋಗ ಇವರು ಮೇಲೆ (2)ರಲ್ಲಿ ಓದಲಾದ ಪತ್ರ ಬರೆಯುತ್ತಾ ಪರಿಶಿಷ್ಟ ಜಾತಿ ಜನರಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸಮೀಕ್ಷೆ ನಡೆಸಲು ಸರ್ಕಾರದ ಅನುಮತಿ ನೀಡುವಂತೆ ಕೋರಿರುತ್ತಾರೆ.

ಹಿಂದುಳಿದ ವರ್ಗಗಳ ವ್ಯಾಪ್ತಿಗೆ ಬರುವ ಜಾತಿಗಳಿಗೆ ಸಂಬಂಧಿಸಿದಂತೆ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸಮೀಕ್ಷೆ ಪ್ರಾರಂಭಿಕ ಹಂತದಲ್ಲಿರುತ್ತದೆ. ಅದಲ್ಲದೆ, ಈ ಆಯೋಗಗಳು ಸಮೀಕ್ಷೆಗೆ ಅಳವಡಿಸಿಕೊಂಡಿರುವ ನಮೂನೆಗಳು ಭಿನ್ನವಾಗಿದ್ದು ಸಮೀಕ್ಷೆ ಉದ್ದೇಶವು ಬೇರೆ ಬೇರೆಯಾಗಿರುತ್ತವೆ.

ಈ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಕಇ 11 ಎಸ್‌ಎಡಿ 2007, ಬೆಂಗಳೂರು, ದಿನಾಂಕ: 3ನೇ ಡಿಸೆಂಬರ್ 2009

ದಿನಾಂಕ: 23-08-2007ರ ಉಲ್ಲೇಖಿತ ಸರ್ಕಾರಿ ಆದೇಶವನ್ನು ಭಾಗಶಃ ಮಾರ್ಪಡಿಸಿ ನ್ಯಾಯಮೂರ್ತಿ ಎ.ಜೆ.ಸದಾಶಿವ ವಿಚಾರಣಾ ಆಯೋಗವು ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳ ಜನರಿಗೆ ಸಂಬಂಧಿಸಿದಂತೆ ನಡೆಸಲು ಉದ್ದೇಶಿಸಿರುವ ಸಮೀಕ್ಷೆಯನ್ನು ಪ್ರತ್ಯೇಕವಾಗಿ ನಡೆಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ದಿನಾಂಕ:23.08.2007ರ ಆದೇಶಕ್ಕೆ ಬೇರೆ ಯಾವುದೇ ಬದಲಾವಣೆ ತರಲಾಗಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಲೋಕನಾಥರಾವ್

ಪಿ.ಆರ್. 2815

ಸರ್ಕಾರದ ಅಧೀನ ಕಾರ್ಯದರ್ಶಿ-2, ಸಮಾಜ ಕಲ್ಯಾಣ ಇಲಾಖೆ.

ಕಂದಾಯ ಸಚಿವಾಲಯ

ವಿಷಯ: ಶ್ರೀ ಎಂ.ಎ. ಹಾಜಿಬಾಯಿ, ತಹಶೀಲ್ದಾರ್ ಮಾನ್ವಿ ತಾಲ್ಲೂಕು ಇವರ ವಿರುದ್ಧ ಶಿಸ್ತು ಕ್ರಮ ಕುರಿತು.

ಓದಲಾಗಿದೆ: ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರ ಪತ್ರಸಂಖ್ಯೆ: ಕಂಇರಾ/ಸಿಬ್ಬಂದಿ/2009–10 ದಿನಾಂಕ:7.12.2009.

ಪ್ರಸ್ತಾವನೆ:

ಶ್ರೀ ಎಂ.ಎ. ಹಾಜಿಬಾಯಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ ತಹಶೀಲ್ದಾರ್‌ರಾಗಿ ದಿನಾಂಕ:21–11–2008ರಿಂದ ಕಾರ್ಯನಿರ್ವಹಿಸುತ್ತಿದ್ದು ಅವರ ಅವ್ಯವಹಾರಗಳ ಕುರಿತು ಸಲ್ಲಿಸಲಾದ ಮನವಿ ಪತ್ರಗಳ ಪ್ರತಿಗಳನ್ನು ಲಗತ್ತಿಸಿ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿರುತ್ತಾರೆ. ಜಿಲ್ಲಾಧಿಕಾರಿಗಳು ಲಗತ್ತಿಸಿರುವ ಮನವಿ ಪತ್ರಗಳು ಈ ಕೆಳಕಂಡಂತೆ ಇರುತ್ತವೆ.

1. ದಲಿತ ಸಂಘರ್ಷ ಸಮಿತಿ, ತಾಲ್ಲೂಕು ಸಮಿತಿ ರಾಯಚೂರು ಇವರ ಮನವಿ
2. ಅಡವಿ ಖಾನಾಪುರ ಗ್ರಾಮದ ನಿವಾಸಿಗಳ ಮನವಿ
3. ಶ್ರೀ ಬಸವನಗೌಡ ಬ್ಯಾಗವಾಟ, ಅಧ್ಯಕ್ಷರು ಕಾಡಾ–ಟಿಬಿಪಿ ಹಾಗೂ ಮಾಜಿ ಶಾಸಕರು ಮಾನ್ವಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರಾ ಯೋಜನೆ ಇವರ ಮನವಿ.
4. ಬಹುಜನ ಸಮಾಜ ಪಕ್ಷ ರಾಯಚೂರು ಜಿಲ್ಲೆ ಇವರ ಮನವಿ
5. ಶ್ರೀ ಪ್ರತಾಪಗೌಡ ಪಾಟೀಲ್, ವಿಧಾನ ಸಭಾ ಸದಸ್ಯರು ಮಸ್ಕಿ ಕ್ಷೇತ್ರ ರಾಯಚೂರು ಜಿಲ್ಲೆ ಇವರ ಮನವಿ.

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ರಿ) ರಾಯಚೂರು ಇವರು ದಿನಾಂಕ: 25–11–2009ರಂದು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ ಮಾನ್ವಿ ತಾಲ್ಲೂಕಿನ ತಹಶೀಲ್ದಾರರು ಸುಳ್ಳು ಮಾಹಿತಿಯನ್ನು ಕೊಟ್ಟು ನಷ್ಟ ಪರಿಹಾರವನ್ನು ಇಂದು ನಾಳೆ ಕೊಡುತ್ತೇನೆಂದು ಹೀಗೆ ದಿನಗಳನ್ನು ಕಳೆಯುತ್ತಿದ್ದಾರೆ. ಅರ್ನಹಳ್ಳಿ ಗ್ರಾಮದಲ್ಲಿ 350 ಚೆಕ್ಕುಗಳನ್ನು ಬರೆಸಿದ್ದು ಆದರೆ ತಹಶೀಲ್ದಾರರು 250 ಚೆಕ್ಕುಗಳನ್ನು ಮಾತ್ರ ನೀಡಿರುತ್ತಾರೆ. ಇನ್ನುಳಿದ 100 ಚೆಕ್ಕುಗಳನ್ನು ಕೈಬಿಟ್ಟಿರುತ್ತಾರೆ. ಆದುದರಿಂದ ಎಲ್ಲಾ ಸಂತ್ರಸ್ಥರಿಗೆ ಸರಿಯಾದ ರೀತಿಯಲ್ಲಿ ಚೆಕ್ಕು ವಿತರಣೆ ಮಾಡಬೇಕೆಂದು ಕೋರಿರುತ್ತಾರೆ. ಅರ್ನಹಳ್ಳಿ ಗ್ರಾಮದಲ್ಲಿ ಸುಮಾರು 120ಕ್ಕಿಂತ ಹೆಚ್ಚು ಮನೆಗಳು ನೆರೆಯಲ್ಲಿ ಮುಳುಗಿದ್ದ ಮನೆಗಳನ್ನು ಡ್ಯಾಮೇಜ್ ಎಂದು ತೋರಿಸಿರುತ್ತಾರೆ. ಆದರೆ ಇಲ್ಲಿ ಎಲ್ಲಾ ಮನೆಗಳು ಸಂಪೂರ್ಣವಾಗಿ ಬಿದ್ದು ಮನೆಯ ಸಾಮಗ್ರಿಗಳು ಕೊಚ್ಚಿಕೊಂಡು ಹೋಗಿರುತ್ತವೆ. ಆದುದರಿಂದ ಪುನಃ ಸಮೀಕ್ಷೆ ಮಾಡಿ ಸರಿಯಾದ ರೀತಿಯಲ್ಲಿ 350 ಜನರಿಗೆ ಸೂಕ್ತ ಪರಿಹಾರ ತಲುಪುವ ವ್ಯವಸ್ಥೆ ಮಾಡಬೇಕೆಂದು ಹಾಗೂ ರಾಯಚೂರು ಜಿಲ್ಲೆಯಲ್ಲಿ ನೆರೆ ಹಾವಳಿಯಲ್ಲಿ ತಹಶೀಲ್ದಾರರು, ಕಂದಾಯ ಅಧಿಕಾರಿಗಳು ಹಾಗೂ ಗ್ರಾಮ ಲೆಕ್ಕಿಗರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

ಶ್ರೀ ಎಂ.ಅನಿಲ್‌ಕುಮಾರ್, ಪ್ರಧಾನ ಕಾರ್ಯದರ್ಶಿಗಳು ಮಾನ್ವಿ ತಾಲ್ಲೂಕು ಬಿ.ಜೆ.ಪಿ ಇವರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಮಾನ್ವಿ ತಾಲ್ಲೂಕಿನ ಅಧಿಕಾರಿಗಳು ಪರಿಹಾರ ಹಂಚಿಕೆಯಲ್ಲಿ ವಿಳಂಬ ನೀತಿ, ಭ್ರಷ್ಟಾಚಾರ ಎಸಗಿರುವ. ಸೂಕ್ತ ಸಂತ್ರಸ್ಥರನ್ನು ಗುರುತಿಸುವಲ್ಲಿ ವಿಫಲರಾಗಿ ಅನ್ಯಾಯ ಸರ್ಕಾರಿ ನೌಕರರಿಗೆ ಸಲ್ಲದ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಇದು ಅಲ್ಲದೆ ಈ ಹಿಂದೆ ಇವರು ವಿಶೇಷ ತಹಶೀಲ್ದಾರ್, ಯಡ್ರಾಮಿ, ಜೇವರ್ಗಿ ತಾಲ್ಲೂಕು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಇವರು ಚುನಾವಣೆಯಂತಹ ಮಹತ್ವದ ಕೆಲಸಗಳನ್ನು ನಿರ್ವಹಿಸುವಲ್ಲಿ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನ ತೋರಿಸಿದ್ದಕ್ಕಾಗಿ ಅವರನ್ನು ದಿನಾಂಕ: 12–05–2008ರಲ್ಲಿ ಜಿಲ್ಲಾಧಿಕಾರಿಗಳು ಗುಲ್ಬರ್ಗ ಜಿಲ್ಲೆ ಇವರು ಅಮಾನತ್ತುಗೊಳಿಸಿರುವುದು ಸಹ ಇವರ ಕರ್ತವ್ಯಲೋಪಕ್ಕೆ ಸಾಕ್ಷಿಯಾಗಿರುತ್ತದೆ. ಇವರು ತಾಲ್ಲೂಕು ತಹಶೀಲ್ದಾರ್‌ಗಾಗಿ ಕಾರ್ಯನಿರ್ವಹಿಸಲು ಅಸಮರ್ಥತೆ, ನಿರ್ಲಕ್ಷತನ, ಬೇಜವಾಬ್ದಾರಿತನ, ಸರ್ಕಾರದ ಹಣ ದುರುಪಯೋಗದಂತಹ ಆಪಾದನೆಗಳನ್ನು ಎಸಗಿರುವುದರಿಂದ ಇವರ ವಿರುದ್ಧ ಶಿಸ್ತು ಕ್ರಮಕೈಗೊಳ್ಳುವುದು ಅನಿವಾರ್ಯವಾಗಿರುವುದರಿಂದ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ ಸಂಖ್ಯೆ: ಕಂಇ 35 ಎಡಿಇ 2009, ಬೆಂಗಳೂರು, ದಿನಾಂಕ: 8ನೇ ಡಿಸೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 10(1)(ಡಿ) ಮತ್ತು 10(3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎಂ.ಎ. ಹಾಜಿಬಾಯಿ, ತಹಶೀಲ್ದಾರ್ ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರನ್ನು ಅವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಬಾಕಿಯಿರಿಸಿ ಅಮಾನತ್ತಿನಲ್ಲಿರಿಸಿದೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ ೯೮ರನ್ವಯ ಜೀವನಾಧಾರ ಭತ್ಯೆ ಪಡೆಯಲು ಅರ್ಹರಿರುತ್ತಾರೆ. ಅಮಾನತ್ತಿನ ಅವಧಿಯಲ್ಲಿ ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರ ಅನುಮತಿ ಪಡೆಯದೇ ಕೇಂದ್ರಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2816

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, (ಸೇವೆಗಳು-3)

ವಿಷಯ: ಶ್ರೀ ಆರ್.ಕೆ. ಬೋರ್ಕರ್, ಹಿಂದಿನ ತಹಶೀಲ್ದಾರ್, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇವರು ಕೆ.ಸಿ.ಎಸ್ (ಸಿಸಿಎ) ನಿಯಮಾವಳಿಗಳು 1957ರ ನಿಯಮ 18ರಡಿಯಲ್ಲಿ ಗೌರವಾನ್ವಿತ ರಾಜ್ಯಪಾಲರಿಗೆ ಸಲ್ಲಿಸಿರುವ ಮೇಲ್ಮನವಿ.

ಓದಲಾಗಿದೆ: 1) ಸರ್ಕಾರದ ಆದೇಶ ಸಂ: ಆರ್‌ಡಿ 7 ಎಡಿಇ 2002, ದಿನಾಂಕ: 25-08-2006.

2) ಶ್ರೀ ಆರ್.ಕೆ. ಬೋರ್ಕರ್, ಹಿಂದಿನ ತಹಶೀಲ್ದಾರ್ ಇವರು ಘನತೆವೆತ್ತ ರಾಜ್ಯಪಾಲರಿಗೆ ಸಲ್ಲಿಸಿರುವ ಮೇಲ್ಮನವಿ ದಿನಾಂಕ: 05-12-2006.

ಪ್ರಸ್ತಾವನೆ:

ಶ್ರೀ ಆರ್.ಕೆ. ಬೋರ್ಕರ್, ಹಿಂದಿನ ತಹಶೀಲ್ದಾರ್, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇವರು ಕೆ.ಸಿ.ಎಸ್ (ಸಿಸಿಎ) ನಿಯಮಾವಳಿಗಳು 1957ರ ನಿಯಮ 18(2)(ಬಿ)ರಡಿಯಲ್ಲಿ ಸರ್ಕಾರದ ಆದೇಶ ಸಂ: ಆರ್‌ಡಿ 7 ಎಡಿಇ 2002, ದಿನಾಂಕ: 25-08-2006ರ ವಿರುದ್ಧ ಗೌರವಾನ್ವಿತ ರಾಜ್ಯಪಾಲರಿಗೆ ಮೇಲ್ಮನವಿ ಸಲ್ಲಿಸಿರುತ್ತಾರೆ. ಮೇಲ್ಮನವಿ ಪ್ರಕರಣದ ವಿವರಗಳು ಈ ಕೆಳಕಂಡಂತೆ ಇದೆ.

ಶ್ರೀ ಆರ್.ಕೆ. ಬೋರ್ಕರ್, ಹಿಂದಿನ ತಹಶೀಲ್ದಾರ್ ತರೀಕೆರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಸರ್ಕಾರಿ ಕೆಲಸ ನಿರ್ವಹಿಸುವಲ್ಲಿ ಕರ್ತವ್ಯ ಲೋಪ ದುರ್ನಡತೆ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಈ ಕೆಳಕಂಡ ಆರೋಪಗಳನ್ನು ಮಾಡಲಾಗಿದೆ.

ಶ್ರೀ ಆರ್.ಕೆ. ಬೋರ್ಕರ್, ಹಿಂದಿನ ತಹಶೀಲ್ದಾರ್, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಹಾಲಿ ನಿವೃತ್ತರು ಇವರು ಸದರಿ ತಾಲ್ಲೂಕಿನ ಅಮೃತಪುರ ಹೋಬಳಿ ಲಕ್ಕೇನಹಳ್ಳಿ ಗ್ರಾಮದ ಸ.ನಂ.3ರಲ್ಲಿ ಹಾದಿಕೆರೆ ಪಶ್ಚಿಮ ಮನ್ನಾ ಜಂಗ್ಲಿಗೆ ಸೇರಿದ 314-32 ಎಕರೆ ಜಾಗದಲ್ಲಿ ಅರಣ್ಯ ಇಲಾಖೆಗೆ ಸೇರಿದ 240-00 ಎಕರೆ ಹಾಗೂ ಕಂದಾಯ ಇಲಾಖೆಯದೆಂದು ಹೇಳಲಾದ 74-32ಎಕರೆ ಜಾಗ ಗುರುತಿಸದೇ ಕಂದಾಯ ಇಲಾಖೆಯ ವಶಕ್ಕೆ ಪಡೆಯದೇ ಇರುವ ಪ್ರದೇಶದಲ್ಲಿ ಶ್ರೀ ತಮ್ಮಣ್ಣ ಬಿನ್ ರಂಗಪ್ಪ ಮತ್ತು ಇತರ 11 ಜನರಿಗೆ ತಲಾ 4-38 ಎಕರೆಯಂತೆ ದರಖಾಸ್ತು ಮಂಜೂರಾತಿ ಕೋರಿ 1990 ರಲ್ಲಿ ಸಲ್ಲಿಸಿದ್ದ ಅರ್ಜಿಗಳ ಆಧಾರದ ಮೇಲೆ ಮಂಜೂರಾತಿಗೆ ಅವಕಾಶವಿಲ್ಲದಿದ್ದರೂ ಅರಣ್ಯ ಇಲಾಖೆಯ ಒಪ್ಪಿಗೆಯನ್ನು ಪಡೆಯದೇ ಭೂ ಮಂಜೂರಾತಿ ನಿಯಮಗಳ ನಿಯಮ 3,4,5 ಮತ್ತು 6ನ್ನು ಪಾಲಿಸದೇ ನಿಯಮ ಬಾಹಿರವಾಗಿ ಜಮೀನನ್ನು ಮಂಜೂರು ಮಾಡಿದ್ದು, ಈ ಪೈಕಿ 4 ಜನ ಅರ್ಜಿದಾರರು ಮೃತರಾಗಿದ್ದು, ಮೃತ ಹೆಸರಿನಲ್ಲಿ ಬೇರೆಯವರ ಸಹಿ ಪಡೆದು ಅವರ ಹೆಸರಿನ ಸಾಗುವಳಿ ಚೀಟಿ ವಿತರಿಸಿರುವುದು ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಸೆಕ್ಷನ್ 2ನ್ನು ಹಾಗೂ ಸರ್ವೋಚ್ಛ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಕರ್ತವ್ಯ ಲೋಪ ಎಸಗಿರುವುದು.

ಅದರಂತೆ ಸರ್ಕಾರದ ಆದೇಶ ಸಂ: ಆರ್‌ಡಿ 7 ಎಡಿಎ 2002, ದಿನಾಂಕ: 12-07-04ರ ಆದೇಶದಲ್ಲಿ ಶ್ರೀ ಆರ್.ಕೆ. ಬೋರ್ಕರ್ ಮೇಲೆ ಇಲಾಖಾ ವಿಚಾರಣೆ ನಡೆಸಲು ಟಿ.ಜೆ. ಮರಿಯಪ್ಪ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿತ್ತು. ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ, ವಿಚಾರಣಾ ವರದಿಯಲ್ಲಿ ಆರೋಪಿತರ ವಿರುದ್ಧ ಆರೋಪಗಳು ಸಾಬೀತಾಗಿರುತ್ತದೆ ಎಂದು ವಿಚಾರಣಾಧಿಕಾರಿಗಳು ವರದಿ ನೀಡಿರುತ್ತಾರೆ. ಸದರಿ ವಿಚಾರಣಾ ವರದಿಯನ್ನು ಪರಿಶೀಲಿಸಿ ಆರೋಪಿತರ ಕರ್ತವ್ಯ ಚ್ಯುತಿ ಎಸಗಿರುವುದು ಸಾಬೀತಾಗಿರುವ ಹಿನ್ನೆಲೆಯಲ್ಲಿ ಸದರಿಯವರ ನಿವೃತ್ತಿ ವೇತನದಿಂದ ಶೇಕಡ 50ರಷ್ಟು ನಿವೃತ್ತಿ ವೇತನವನ್ನು ಶಾಶ್ವತವಾಗಿ ಕಡಿತಗೊಳಿಸುವ ದಂಡನೆ ವಿಧಿಸಿ ಮೇಲೆ ಕ್ರ.ಸಂ. (1)ರಲ್ಲಿ ಓದಲಾದ ದಿನಾಂಕ: 25-08-2006ರಲ್ಲಿ ಆದೇಶಿಸಲಾಗಿತ್ತು.

ಸರ್ಕಾರದ ಈ ಆದೇಶದ ವಿರುದ್ಧ ನಿವೃತ್ತ ಆರೋಪಿತ ಅಧಿಕಾರಿ ಕೆ.ಸಿ.ಎಸ್.ಆರ್ (ಸಿಸಿಎ) ನಿಯಮಾವಳಿಗಳು 1957ರ ನಿಯಮ 18ರಡಿಯಲ್ಲಿ ಗೌರವಾನ್ವಿತ ರಾಜ್ಯಪಾಲರಿಗೆ ಮೇಲೆ ಕ್ರ.ಸಂ. (2)ರಲ್ಲಿ ಓದಲಾದ ದಿನಾಂಕ: 05-12-2006 ರಂದು ಮೇಲ್ಮನವಿ, ಸಲ್ಲಿಸಿ, ಸರ್ಕಾರವು ಅವರಿಗೆ ವಿಧಿಸಿರುವ ದಂಡನಾದೇಶವನ್ನು ರದ್ದುಗೊಳಿಸಿ, ಅವರ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ.

ಮೇಲ್ಮನವಿಯಲ್ಲಿ ಎತ್ತಿರುವ ಅಂಶಗಳನ್ನು ಸರ್ಕಾರವು ಮರುಪರಿಶೀಲಿಸಿ, ಆಪಾದಿತ ನಿವೃತ್ತ ಅಧಿಕಾರಿಯು ಅಕ್ರಮವಾಗಿ ಮಂಜೂರು ಮಾಡಿದ ಜಮೀನನ್ನು ಸಹಾಯಕ ಆಯುಕ್ತರು ರದ್ದುಗೊಳಿಸಿದ್ದರಿಂದ, ಜಮೀನು ಸರ್ಕಾರದ

ವಶವಲ್ಲಿರುವುದನ್ನು ಪರಿಗಣಿಸಿ, ಆಪಾದಿತರ ನಿವೃತ್ತಿ ವೇತನದಲ್ಲಿ 50% ರಷ್ಟು ಕಡಿತಗೊಳಿಸಿರುವುದನ್ನು ಕಡಿಮೆ ಮಾಡಿ, ಶೇಕಡ 25% ರಷ್ಟಕ್ಕೆ ಕಡಿತಗೊಳಿಸಲು ಘನತೆವೆತ್ತ ರಾಜ್ಯಪಾಲರಿಗೆ ಶಿಫಾರಸ್ಸು ಮಾಡಲಾಗಿತ್ತು. ಘನತೆವೆತ್ತ ರಾಜ್ಯಪಾಲರು ಈ ಕೆಳಕಂಡಂತೆ ಆದೇಶಿಸಿರುತ್ತಾರೆ.

I have Considered the appeal petition Submitted under rule 18 of KCS (C;C&A) Rules 1957 by Sri R.K. Borker, Retired Tahsildar against the Government Order No. RD 07 ADE 2002 dt: 25th August 2006 imposing the penalty of reduction of 50% of pension permanently, in the light of the contentions raised in the appeal petition and also perused the connected enquiry and appeal records.

Apparently the charge of granting Government lands to twelve persons including four deceased persons, without demarcation as forest and revenue lands and issuing saguvali chits has been proved in the enquiry.

However, in view of the fact that the land said to have been granted illegally has been regained by Government and no financial impropriety is imputed on the AGO, much less proved, I concur with the recommendation of the Government and modify the penalty to that of withholding 25% of the pension permanently.

ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂ: ಆರ್‌ಡಿ 05 ಎಡಿಇ 2007, ಬೆಂಗಳೂರು, ದಿನಾಂಕ: 21ನೇ ನವೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಆರ್.ಕೆ. ಬೋರ್ಕರ್, ನಿವೃತ್ತ ತಹಶೀಲ್ದಾರ್, ಇವರಿಗೆ ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 7 ಎಡಿಇ 2002, ದಿನಾಂಕ: 25-8-2006ರ ಆದೇಶದಲ್ಲಿ ನಿವೃತ್ತಿ ವೇತನದಲ್ಲಿ ಶೇ. 50/- ರಷ್ಟನ್ನು ಶಾಶ್ವತವಾಗಿ ಕಡಿತಗೊಳಿಸುವ ದಂಡನೆ ವಿಧಿಸಿದ ಆದೇಶವನ್ನು ಮಾರ್ಪಡಿಸಿ ಶೇ. 25/- ರಷ್ಟನ್ನು ಶಾಶ್ವತವಾಗಿ ಕಡಿತಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2817 **ಎಸ್.ಬಿ. ಸಸಾಲಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, (ಸೇವೆಗಳು-3)

ವಿಷಯ: ಕಾರ್ಕಳ ತಾಲ್ಲೂಕು, ಹೆಬ್ರಿ ಗ್ರಾಮದ ಸ.ನಂ: 214/1ರಲ್ಲಿ ರಿಸರ್ವ್ ಫಾರೆಸ್ಟ್ ಜಮೀನನ್ನು ಅಕ್ರಮವಾಗಿ ಮಂಜೂರು ಮಾಡಿದ ಅಧಿಕಾರಿ/ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಕುರಿತು ದಂಡನೆ ವಿಧಿಸುವ ಬಗ್ಗೆ.

ಓದಲಾಗಿದೆ: 1) ಉಡುಪಿ ಜಿಲ್ಲಾಧಿಕಾರಿಗಳ ಪತ್ರ ಸಂ: ಇಎಸ್‌ಟಿ (1): ಸಿಆರ್: 4: 2004-05, ದಿನಾಂಕ: 26-08-2005.

2) ಶ್ರೀ ಶಾಂತಾರಾಂ ಚಿಪಳೂಣ್‌ಕರ್, ಹಿಂದಿನ ತಹಶೀಲ್ದಾರ್ ಮತ್ತಿತರಿಗೆ ನೀಡಿರುವ ಕಾರಣ ಕೇಳುವ ನೋಟಿಸ್ ಸಂ: ಕಂಇ: 7: ಎಡಿಇ:2005, ದಿನಾಂಕ: 20-12-2005.

3) ಅಧಿಕಾರಿ/ನೌಕರರು ನೀಡಿರುವ ಲಿಖಿತ ಹೇಳಿಕೆ :

ಅ) ಶ್ರೀ ಶಾಂತಾರಾವ್, ಚಿಪಳೂಣ್‌ಕರ್, ತಹಶೀಲ್ದಾರ್ ದಿನಾಂಕ: 11-01-2006.

ಆ) ಶ್ರೀ ಸದಾಶಿವ ಕಲ್ಯಾಣಪುರ, ಉಪತಹಶೀಲ್ದಾರ್, ದಿನಾಂಕ: 10-02-2006.

ಇ) ಶ್ರೀ ಕೆ. ಭಾಸ್ಕರ್ ಪ್ರ.ದ.ಸ. ದಿನಾಂಕ: 10-02-2006.

4) ಸರ್ಕಾರದ ಆದೇಶ ಸಂ: ಆರ್‌ಡಿ 44 ಎಡಿಇ 2004, ಬೆಂಗಳೂರು ದಿನಾಂಕ: 06-10-2006.

5) ಸರ್ಕಾರದ ತಿದ್ದೋಲೆ ದಿನಾಂಕ: 10-11-2006.

6) ಸರ್ಕಾರದ ಆದೇಶ ಸಂ: ಆರ್‌ಡಿ 07 ಎಡಿಇ 2005, ದಿನಾಂಕ: 10-04-2007.

7) ವಿಚಾರಣಾಧಿಕಾರಿಗಳ ವರದಿ ದಿನಾಂಕ: 27-09-2007.

8) ಎರಡನೇ ಕಾರಣ ಕೇಳುವ ನೋಟೀಸು ದಿನಾಂಕ: 03-03-2008.

9) ಲಿಖಿತ ಸಮಜಾಯಿಷಿ:

1) ಶ್ರೀ ಕೆ.ಭಾಸ್ಕರ್, ಹಿಂದಿನ ದ್ವಿತೀಯ ದರ್ಜೆ ಸಹಾಯಕರು, ದಿನಾಂಕ: 24-04-2008.

2) ಶ್ರೀ ಶಾಂತರಾಮ ಚಿಪಳೂಣಕರ್, ನಿವೃತ್ತ ತಹಶೀಲ್ದಾರ್, ದಿನಾಂಕ: 15-05-2008.

3) ಶ್ರೀ ಸದಾಶಿವ ಕಲ್ಯಾಣಪುರ, ನಿವೃತ್ತ ಶಿರಸ್ತೇದಾರ್, ದಿನಾಂಕ: 12-11-2008.

10) ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು ಇವರ ಪತ್ರ ಸಂ: ಪಿಎಸ್‌ಸಿ 64 ಸಿಎನ್‌ಎಸ್ 09, ದಿನಾಂಕ: 21-07-2009.

ಪ್ರಸ್ತಾವನೆ:

ಕಾರ್ಕಳ ತಾಲ್ಲೂಕು ಹೆಬ್ರಿ ಗ್ರಾಮದ ಸ.ನಂ.214:1 ರಲ್ಲಿನ ಅರಣ್ಯ ಜಮೀನು ಅಕ್ರಮ ಸಕ್ರಮದಡಿ ಕಾನೂನು ಬಾಹಿರವಾಗಿ ಮಂಜೂರು ಮಾಡಿರುವ ಸಂಬಂಧ ಹಿಂದಿನ ತಹಸೀಲ್ದಾರರಾದ ಶ್ರೀ ಶಾಂತಾರಾವ್ ಚಿಪಳೂಣ್‌ಕರ್ ಮತ್ತಿತರ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಇವರುಗಳ ವಿರುದ್ಧ ಕರಡು ದೋಷಾರೋಪಗಳನ್ನು ತಯಾರಿಸಿ ಮೇಲೆ ಕ್ರ.ಸಂ(1)ರಲ್ಲಿ ಓದಲಾದ ದಿ: 26–08–2005ರ ಪತ್ರದಲ್ಲಿ ಉಡುಪಿ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 13ರಡಿಯಲ್ಲಿ ದೋಷಾರೋಪಗಳನ್ನು (ಅನುಬಂಧ 1 ರಿಂದ 4ರ ವರೆಗೆ) ಆರೋಪಿತ ಅಧಿಕಾರಿ: ನೌಕರರುಗಳಿಗೆ ಜಾರಿ ಮಾಡಿ ಆರೋಪಗಳ ಬಗ್ಗೆ ಲಿಖಿತ ಹೇಳಿಕೆ ಸಲ್ಲಿಸಲು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ: 20–12–2005ರ ಕಾರಣ ಕೇಳುವ ನೋಟೀಸು ಮೂಲಕ ತಿಳುವಳಿಕೆ ಪತ್ರ ನೀಡಲಾಗಿತ್ತು.

ಆಪಾದಿತ ಅಧಿಕಾರಿ: ನೌಕರರಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಹೇಳಲಾಗಿರುವ ಅಧಿಕಾರಿ: ನೌಕರರು ತಮ್ಮ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿ ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗೆಳೆಯುತ್ತಾ ಇಲಾಖಾ ವಿಚಾರಣೆಯನ್ನು ಕೈಬಿಡುವಂತೆ ಕೋರಿರುತ್ತಾರೆ. ಆರೋಪಿತರ ವಿರುದ್ಧದ ಆರೋಪಗಳು ಹಾಗೂ ಅವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿದ ಸರ್ಕಾರವು ಈ ಪ್ರಕರಣದ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ನಿರ್ಧರಿಸಿ ಅವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ಜರುಗಿಸಲಾಗುವುದು ಸೂಕ್ತವೆಂದು ಭಾವಿಸಿ ಮೇಲೆ ಓದಲಾದ ಕ್ರ.ಸಂ (4) ದಿನಾಂಕ: 06–10–2006ರಲ್ಲಿ ಶ್ರೀ ಬಿ. ಶಂಕರನಾರಾಯಣ ಭಟ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಕ್ಷಿಣ ಕನ್ನಡ ಜಿಲ್ಲೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಕೇಂದ್ರ ಸ್ಥಾನಿಕ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ಉಡುಪಿ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಸದರಿ ಸರ್ಕಾರಿ ಆದೇಶದಲ್ಲಿ ಆದೇಶ ಸಂಖ್ಯೆ ತಪ್ಪಾಗಿದ್ದರಿಂದ ಮೇಲೆ ಓದಲಾದ ಕ್ರ.ಸಂ (5) ದಿನಾಂಕ: 10–11–2006ರಲ್ಲಿ ತಿದ್ದೋಲೆಯನ್ನು ಹೊರಡಿಸಲಾಗಿರುತ್ತದೆ. ನಂತರ ವಿಚಾರಣಾಧಿಕಾರಿಗಳಾದ ಶ್ರೀ ಬಿ. ಶಂಕರನಾರಾಯಣ ಭಟ್, ಇವರು ತಮಗೆ ಆರೋಗ್ಯ ಸರಿಯಿಲ್ಲದ ಕಾರಣ ಇಲಾಖಾ ವಿಚಾರಣೆಯನ್ನು ನಡೆಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದರಿಂದ ಮೇಲೆ ಓದಲಾದ ಕ್ರ.ಸಂ. (6) ದಿನಾಂಕ: 10–04–2007ರಲ್ಲಿ ಶ್ರೀ ಬಿ. ಶಂಕರನಾರಾಯಣ ಭಟ್ ಇವರ ಬದಲಾಗಿ ಶ್ರೀ ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ ಸತ್ರ ನ್ಯಾಯಾಧೀಶರು ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿರುತ್ತದೆ. ಅದರಂತೆ ವಿಚಾರಣಾಧಿಕಾರಿಗಳು ದಿನಾಂಕ: 27–09–2007ರಲ್ಲಿ ವಿಚಾರಣಾ ವರದಿಯನ್ನು ಸಲ್ಲಿಸಿ, ಸದರಿ ವಿಚಾರಣಾ ವರದಿಯಲ್ಲಿ ಆರೋಪಿತ ಅಧಿಕಾರಿ/ನೌಕರರ ವಿರುದ್ಧ ಆರೋಪಗಳ ಕುರಿತು ನಿರ್ಣಯಿಸಿರುತ್ತಾರೆ.

1. ಆರೋಪ–1: ರುಜುವಾತು ಆಗಿಲ್ಲ.
2. ಆರೋಪ–2: ರುಜುವಾತು ಆಗಿದೆ.
3. ಆರೋಪ–3: ರುಜುವಾತು ಆಗಿದೆ.
4. ಆರೋಪ–4: ಭಾಗಶಃ ರುಜುವಾತಾಗಿದೆ.

ವಿಚಾರಣಾ ವರದಿಯಲ್ಲಿ ಆರೋಪಿತ ಅಧಿಕಾರಿ/ನೌಕರರ ವಿರುದ್ಧ ಆರೋಪಗಳ ಕುರಿತು ತಹಶೀಲ್ದಾರರಂತಹ ಜವಾಬ್ದಾರಿಯುತ ಅಧಿಕಾರಿ/ಆ ಕಡತವನ್ನಾಗಲೀ, ಟಿಪ್ಪಣಿಯಲ್ಲಿ ಹೇಳಿದಂತಹ ಜಿಲ್ಲಾಧಿಕಾರಿಗಳ ಆದೇಶವನ್ನಾಗಲೀ ಪರಿಶೀಲಿಸವೆ ಹೇಗೆ ಅನುಮತಿ ಕೊಟ್ಟರು, ಅದು ಕರ್ತವ್ಯ ನಿರ್ಲಕ್ಷ್ಯವೇ ಅಥವಾ ಉದ್ದೇಶಪೂರ್ವಕವಾಗಿ ಆದುದೇ? ಹೀಗೆ ಸುಳ್ಳು ಷರಾ ಬರೆದು ನಿಯಮಗಳನ್ನು ನಿರ್ಲಕ್ಷಿಸಿ, ಅಕ್ರಮ ಸಕ್ರಮ ಸಮಿತಿಯನ್ನು ದಾರಿ ತಪ್ಪಿಸಿ ಅರ್ಜಿದಾರರಿಗೆ ಅನುಕೂಲವಾಗುವಂತಹ ಆದೇಶ ಪಡೆದು ಆಪಾದಿತರು ಕರ್ತವ್ಯ ನಿಷ್ಠೆ ಇಲ್ಲದಿರುವುದನ್ನು ತೋರ್ಪಡಿಸಿರುತ್ತಾರೆಂದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ. ಇಲ್ಲದ ಆದೇಶ ಪ್ರಸ್ತಾಪ ಮಾಡಿ ಸುಳ್ಳು ಟಿಪ್ಪಣಿ ಬರೆದಿದ್ದು, ಈ ಸಂದರ್ಭದಲ್ಲಿ ಆಪಾದಿತರು ನೀಡುವ ಯಾವುದೇ ವಿವರಣೆಗಳು ನಂಬಲು ಸಾಧ್ಯವಿಲ್ಲ. ಅದು ದುರುದ್ದೇಶದಿಂದ ಮಾಡಿದ ಅಕೃತ್ಯ. ರಕ್ಷಿತ ಅರಣ್ಯದಲ್ಲಿ ಜಮೀನು ಮಂಜೂರು ಮಾಡಬೇಕಾಗುತ್ತದೆ ಎಂದು ಅವರಿಗೆ ತಿಳಿದಿತ್ತು. ಅರಣ್ಯ ಗಡಿ ಗುರ್ತಿಸಲು ದಾಖಲೆಗಳು ಇಲ್ಲವೆಂದಿದ್ದಾರೆ. ಗಡಿ ಗುರ್ತಿಸಲು ಸಾಧ್ಯವಾಗದಿದ್ದಲ್ಲಿ, ಅರಣ್ಯ ಇಲಾಖೆಗೆ ತಿಳಿಸಿ, ಅವರ ಮುಂದೆ ಕಾನೂನು ಪ್ರಕಾರ ಅಳತೆ ಮಾಡಿಸಿ, ಗಡಿ ನಿರ್ಣಯಿಸಬೇಕಿತ್ತು. ಕನಿಷ್ಠವೆಂದರೆ ಆ ರೀತಿ ಟಿಪ್ಪಣಿಯನ್ನಾದರೂ ಬರೆಯಬೇಕಿತ್ತು. ಈಗ ತಮ್ಮ ಅಕೃತ್ಯವನ್ನು ಮುಚ್ಚಿಟ್ಟುಕೊಳ್ಳಲು, ಗಡಿ ಬಗ್ಗೆ ದಾಖಲೆಗಳಿಲ್ಲ ಎಂದು ಇನ್ನೊಂದು ಸುಳ್ಳು ಹೇಳಲಾಗಿದೆ. ಕಂದಾಯ ದಾಖಲೆ ಪ್ರಕಾರ ಎಷ್ಟು ಎಕರೆ ರಿಜರ್ವ್ ಫಾರೆಸ್ಟ್ ಅಂತ ಸ್ಪಷ್ಟವಾಗಿ ನಮೂದಿಸಲಾಗಿದೆ. ಅರಣ್ಯಾಧಿಕಾರಿಗಳಿಗೆ ಬರೆದ ಪತ್ರವನ್ನು ಕಳಿಸದೇ ಇರುವುದೂ, ಉದ್ದೇಶಪೂರ್ವಕವಾಗಿ ನಡೆಸಿದ ಒಳಸಂಚೆಂದು ತೀರ್ಮಾನಿಸಬಹುದಾಗಿದೆ. ಹೆಕ್ಟೇರಿಗೆ 25ಕ್ಕಿಂತ ಹೆಚ್ಚಿನ ಮರಗಳಿದ್ದರೂ ಸ್ಥಳ ಮಂಜೂರು ಮಾಡಲು ಶಿಫಾರಸ್ಸು ಮಾಡುತ್ತಿದ್ದೀರಿ, ಪತ್ರದಲ್ಲಿ ಹೇಳಿರುವ ವಿಷಯವನ್ನು ಗಮನದಲ್ಲಿಟ್ಟುಕೊಂಡು ನಿಖರ ಅಭಿಪ್ರಾಯ ತಿಳಿಸಿ ಅಂತ ಅರಣ್ಯ ಸಂರಕ್ಷಣಾಧಿಕಾರಿಗಳು ತಮ್ಮ ತಮ್ಮ ವಲಯ ಅರಣ್ಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಅದರಲ್ಲಿ ತಿಳಿಸಿದ್ದಕ್ಕಿಂತ ಕಡಿಮೆ ಮರಗಳಿದ್ದಲ್ಲಿ ತಾಲ್ಲೂಕು ಕಛೇರಿಯವರು ತಮಗೆ ತಿಳಿಸದೇ ಮುಂದುವರಿಯಬಹುದೆಂಬ ಅರ್ಥವಲ್ಲ, ಅಲ್ಲದೆ ಆಪಾದಿತರ ಪ್ರಕಾರ ಅದು ಕಂದಾಯ ಜಮೀನಿಗೆ ಸಂಬಂಧಿಸಿದ್ದು, ಕಾಯ್ದಿರಿಸಿದ ಅರಣ್ಯ ಜಮೀನು ಬಗ್ಗೆ ಅಲ್ಲ. ಸರಿಯಾದ ಡಿಮಾರ್ಕೇಷನ್ ಇಲ್ಲದಿರುವಾಗ ಅದು ಅರಣ್ಯ ಜಮೀನು ಅಲ್ಲ, ಕಂದಾಯ ಜಮೀನು ಎನ್ನುವ ನಿರ್ಣಯಕ್ಕೆ ಆಪಾದಿತರು ಹೇಗೆ ಬಂದರು? ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಅಪೀಲು ಇರುವುದು ಮಂಜೂರಾತಿ ಬಗ್ಗೆ ಮಾತ್ರ, ಇಲ್ಲಿ ಇರುವುದು ಸುಳ್ಳು ಟಿಪ್ಪಣಿ ಹಾಕಿ, ತಪ್ಪು ಮಾಹಿತಿ ನೀಡಿ ಆದೇಶ ಪಡೆದುಕೊಂಡದಾಗಿರುತ್ತದೆ ಎಂದು ವಿಚಾರಣಾಧಿಕಾರಿಗಳು ಅಭಿಪ್ರಾಯ ಪಟ್ಟಿರುತ್ತಾರೆ.

ಆರೋಪಗಳು ಸಾಬೀತಾಗಿದ್ದರಿಂದ ಸದರಿಯವರುಗಳಿಗೆ ಮೇಲೆ ಓದಲಾದ ಕ್ರಸಂ. (8)ರ ದಿನಾಂಕ: 03-03-2008ರಲ್ಲಿ ವಿಚಾರಣಾ ವರದಿಯೊಂದಿಗೆ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿರುತ್ತದೆ. ಅದರಂತೆ, ಅಧಿಕಾರಿ/ನೌಕರರ ತಮ್ಮಗಳ ಲಿಖಿತ ಸಮಜಾಯಿಷಿಗಳನ್ನು ಸಲ್ಲಿಸಿ, ತಮ್ಮಗಳ ವಿರುದ್ಧದ ಆರೋಪಗಳನ್ನು ಅಲ್ಲಗೆಳೆದಿರುತ್ತಾರೆ. ಇಲಾಖಾ ವಿಚಾರಣೆಯಲ್ಲಿ ಆಪಾದನೆಗಳು ಸಾಕ್ಷಿ ಹಾಗೂ ದಾಖಲೆಗಳ ಸಮೇತ ಸಾಬೀತಾಗಿರುವುದರಿಂದ, ಆರೋಪಿತ ಅಧಿಕಾರಿ/ನೌಕರರ ಲಿಖಿತ ಸಮಜಾಯಿಷಿಗಳು ಒಪ್ಪಲು ಸಾಧ್ಯವಾಗುವುದಿಲ್ಲವಾದ್ದರಿಂದ ಶ್ರೀ ಶಾಚಿತಾರಾಮ್ ಚಿಪಳೂಣ್‌ಕರ್, ನಿವೃತ್ತ ತಹಶೀಲ್ದಾರ್, ಶ್ರೀ ಸದಾಶಿವ ಕಲ್ಯಾಣಪುರ, ನಿವೃತ್ತ ಉಪತಹಶೀಲ್ದಾರ್ ಹಾಗೂ ಶ್ರೀ ಕೆ. ಭಾಸ್ಕರ್, ಹಿಂದಿನ ದ್ವಿದ.ಸ, ಪ್ರಸ್ತುತ ಸೇವೆಯಲ್ಲಿದ್ದು, ಇವರುಗಳ ವಿರುದ್ಧ ದಂಡನೆ ವಿಧಿಸಲು ನಿರ್ಧರಿಸಿ, ಆಯೋಗದ ಸಹಮತಿಯನ್ನು ಕೋರಲಾಗಿತ್ತು. ಅದರಂತೆ, ಮೇಲೆ ಓದಲಾದ ಕ್ರಸಂ. (10) ದಿನಾಂಕ: 21-07-2009ರಲ್ಲಿ ಆಯೋಗವು ಸರ್ಕಾರವು ಉದ್ದೇಶಿಸಿರುವ ದಂಡನೆಗೆ ಸಹಮತಿಯನ್ನು ನೀಡಿರುವ್ಯದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂ: ಆರ್‌ಡಿ 07 ಎಡಿಇ 2005, ಬೆಂಗಳೂರು, ದಿನಾಂಕ: 2ನೇ ಡಿಸೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಒಪ್ಪಿ, ಈ ಪ್ರಕರಣದಲ್ಲಿ ಭಾಗಿಯಾಗಿರುವ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಆರೋಪಗಳು ಸಾಬೀತಾಗಿದ್ದರಿಂದ ಅವರುಗಳಿಗೆ ದಂಡನೆಯನ್ನು ವಿಧಿಸಿ ಆದೇಶಿಸಿದೆ.

1. ಶ್ರೀ ಶಾಚಿತಾರಾಮ್ ಚಿಪಳೂಣ್‌ಕರ್, ಹಿಂದಿನ ತಹಶೀಲ್ದಾರ್, ಕಾರ್ಕಳ ತಾಲ್ಲೂಕು, ಪ್ರಸ್ತುತ ನಿವೃತ್ತ ತಹಶೀಲ್ದಾರ್–ಇವರಿಗೆ ನಿವೃತ್ತಿ ವೇತನದಿಂದ ಶಾಶ್ವತವಾಗಿ ಶೇ. 25ರಷ್ಟನ್ನು ಕಡಿತಗೊಳಿಸುವ ದಂಡನೆ.
2. ಶ್ರೀ ಸದಾಶಿವ ಕಲ್ಯಾಣಪುರ, ಹಿಂದಿನ ಉಪತಹಶೀಲ್ದಾರ್ ಕಾರ್ಕಳ ತಾಲ್ಲೂಕು, ಕಛೇರಿ, ಪ್ರಸ್ತುತ ನಿವೃತ್ತ – ಇವರಿಗೆ ನಿವೃತ್ತಿ ವೇತನದಿಂದ ಶಾಶ್ವತವಾಗಿ ಶೇ. 25ರಷ್ಟನ್ನು ಕಡಿತಗೊಳಿಸುವ ದಂಡನೆ.
3. ಶ್ರೀ ಕೆ.ಭಾಸ್ಕರ್, ಹಿಂದಿನ ದ್ವಿದ.ಸ. ಕಾರ್ಕಳ ತಾಲ್ಲೂಕು, ಕಛೇರಿ, ಪ್ರಸ್ತುತ ಸೇವೆಯಲ್ಲಿದ್ದು– ಇವರಿಗೆ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ದಂಡನೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2818

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, (ಸೇವೆಗಳು–3)

ವಿಷಯ: ಶ್ರೀ ರುದ್ರೇಶ್ವರಯ್ಯ, ಹಿಂದಿನ ತಹಶೀಲ್ದಾರ್, ನಂಜನಗೂಡು, ಪ್ರಸ್ತುತ ನಿವೃತ್ತ ತಹಶೀಲ್ದಾರ್ ಇವರ ವಿರುದ್ಧ ಇಲಾಖಾ ವಿಚಾರಣೆ–ದಂಡನೆ ವಿಧಿಸುವ ಬಗ್ಗೆ.

ಓದಲಾಗಿದೆ:
1) ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಇವರ ಪ್ರಸ್ತಾವನೆ ದಿನಾಂಕ: 04-02-2006.
2) ಸರ್ಕಾರದ ಆದೇಶ ಸಂ: ಆರ್‌ಡಿ 44 ಎಡಿಇ 2005, ದಿನಾಂಕ: 05-09-2005
3) ಕಾರಣ ಕೇಳುವ ನೋಟೀಸ್ ದಿನಾಂಕ: 03-03-2006.
4) ಸರ್ಕಾರದ ಆದೇಶ ಸಂ: ಆರ್‌ಡಿ 44 ಎಡಿಇ 2005, ದಿನಾಂಕ: 22-04-2006.
5) ಶ್ರೀ ರುದ್ರೇಶ್ವರಯ್ಯ, ಇವರ ಲಿಖಿತ ಸಮಜಾಯಿಷಿ ದಿನಾಂಕ: 03-03-2006 (ದಿ:16-3-2006 ರಂದು ಸ್ವೀಕೃತವಾಗಿದೆ).
6) ಸರ್ಕಾರದ ಆದೇಶ ಸಂ: ಆರ್‌ಡಿ 44 ಎಡಿಇ 2005, ದಿನಾಂಕ: 09-02-2007.
7) ಶ್ರೀ ಎನ್. ಸುಬ್ಬರಾವ್ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರ ವಿಚಾರಣಾ ವರದಿ ದಿನಾಂಕ: 26-12-2007.
8) ಎರಡನೇ ಕಾರಣ ಕೇಳುವ ನೋಟೀಸು ದಿನಾಂಕ: 23-01-08.
9) ಶ್ರೀ ರುದ್ರೇಶ್ವರಯ್ಯ, ನಿವೃತ್ತ ತಹಶೀಲ್ದಾರ್, ಇವರ ಲಿಖಿತ ಸಮಜಾಯಿಷಿ ದಿನಾಂಕ: 04-08-2008.
10) ಸರ್ಕಾರದ ಪತ್ರ ಸಂ: ಆರ್‌ಡಿ 44 ಎಡಿಇ 2005, ದಿನಾಂಕ: 02-02-2009.

11) ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ ಬೆಂಗಳೂರು ಇವರ ಪತ್ರ ಸಂ: ಪಿಎಸ್‌ಸಿ 211 ಸಿಎನ್‌ಎಸ್ 2008, ದಿನಾಂಕ: 13-05-2009.

12) ಸರ್ಕಾರದ ಪತ್ರ ಸಂ: ಆರ್‌ಡಿ 44 ಎಡಿಇ 2005, ದಿನಾಂಕ: 07-09-2009.

13) ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ ಬೆಂಗಳೂರು ಇವರ ಪತ್ರ ಸಂ: ಪಿಎಸ್‌ಸಿ 211 ಸಿಎನ್‌ಎಸ್ 08, ದಿನಾಂಕ: 20-10-2009.

ಪ್ರಸ್ತಾವನೆ:

ಶ್ರೀ ರುದ್ರೇಶ್ವರಯ್ಯ, ಹಿಂದಿನ ತಹಶೀಲ್ದಾರ್, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ, ಇವರು ನಂಜನಗೂಡಿನಲ್ಲಿ ತಹಶೀಲ್ದಾರರಾಗಿ ಕರ್ತವ್ಯ ಸಲ್ಲಿಸುತ್ತಿದ್ದ ಅವಧಿಯಲ್ಲಿ (1)ಶ್ರೀ ವಿನೋದ್‌ಕುಮಾರ್ ಬಿನ್ ಕೆ. ವಸಂತಕುಮಾರ್ ಇವರಿಗೆ ಕೃಷಿ ಕಾರ್ಮಿಕರ ದೃಢೀಕರಣ ಪತ್ರವನ್ನು ನೀಡಿರುವ ಬಗ್ಗೆ (2) ಶ್ರೀ ಮಹದೇವಯ್ಯ ಬಿನ್ ಮಾದಯ್ಯ ಇವರಿಗೆ ಸಣ್ಣ ಹಿಡುವಳಿದಾರ ಪ್ರಮಾಣ ಪತ್ರ ನೀಡಿರುವ ಬಗ್ಗೆ, (3) ಶ್ರೀ ಹೆಚ್. ಪುಂಡಲೀಕರಾವ್ ಬಿನ್ ಚಿದಾನಂದರಾವ್ ಇವರಿಗೆ ಖಾತೆ ವರ್ಗಾವಣೆ ಮಾಡಲು ಆದೇಶ ನೀಡಿರುವ ಬಗ್ಗೆ. (4) ಚುನಾವಣಾ ಆಯೋಗವು ನೀಡಲಾಗಿದ್ದ ಮಾರ್ಗಸೂಚಿಗಳನ್ವಯ ಯಾವುದೇ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಾರದೆಂದು ಕಟ್ಟುನಿಟ್ಟಾಗಿ ಆದೇಶಿಸಿದ್ದರೂ ಸಹ ಅಕ್ರಮ ಸಕ್ರಮ ಸಮಿತಿಯ ಸಭೆಯನ್ನು ಕರೆದು, ನಂಜನಗೂಡು ತಾಲ್ಲೂಕು, ಹರತಿಲೆ ಗ್ರಾಮದ ಸ.ನಂ: 179 ರಲ್ಲಿ 0-38 ಗುಂಟೆ ಜಮೀನನ್ನು ಶ್ರೀಮತಿ ಮಾದಮ್ಮ ಕೋಂ ಕಾಳೇಗೌಡ ಎಂಬುವವರಿಗೆ ಮಂಜೂರು ಮಾಡಲು ಕಾರಣರಾಗಿರುವ ಕುರಿತು ಕರ್ತವ್ಯ ಲೋಪ ಎಸಗುವ ಮೂಲಕ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966ರ ನಿಯಮ 3(1) (i) (ii) (iii) ಅನ್ನು ಉಲ್ಲಂಘಿಸಿರುತ್ತಾರೆ. ಎಂಬ ಆರೋಪದ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಮೇಲೆ ಓದಲಾದ ಕ್ರ.ಸಂ/ 1ರ ದಿನಾಂಕ: 4-2-2006ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಸರ್ಕಾರವು ಮೇಲೆ ಓದಲಾದ ಕ್ರ.ಸಂ 2ರ ದಿನಾಂಕ:5.9.2005ರ ಆದೇಶದಲ್ಲಿ ಶ್ರೀ ರುದ್ರೇಶ್ವರಯ್ಯ, ಹಿಂದಿನ ತಹಶೀಲ್ದಾರ್, ನಂಜನಗೂಡು ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿರುತ್ತದೆ. ತದನಂತರ, ಸರ್ಕಾರವು ಇಲಾಖಾ ವಿಚಾರಣೆಯನ್ನು ಬಾಕಿಯಿಟ್ಟು, ಮೇಲೆ ಓದಲಾದ ಕ್ರ.ಸಂ. (4)ರ ದಿನಾಂಕ: 22-4-2006ರ ಆದೇಶದಲ್ಲಿ ಅಮಾನತ್ತಿನಿಂದ ಬಿಡುಗಡೆಗೊಳಿಸಲಾಗಿರುತ್ತದೆ. 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ,ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 11ರಡಿಯಲ್ಲಿ ದೋಷಾರೋಪಣೆಯನ್ನು (ಅನುಬಂಧ 1ರಿಂದ 4 ರವರೆಗೆ) ಶ್ರೀ ರುದ್ರೇಶ್ವರಯ್ಯ, ಹಿಂದಿನ ತಹಶೀಲ್ದಾರ್ ನಂಜನಗೂಡು ಇವರಿಗೆ ಜಾರಿ ಮಾಡಿ ಆರೋಪಗಳ ಬಗ್ಗೆ ಲಿಖಿತ ಹೇಳಿಕೆ ಸಲ್ಲಿಸಲು ಮೇಲೆ ಕ್ರ.ಸಂ. (3)ರಲ್ಲಿ ಓದಲಾದ ದಿ: 3-3-2006ರ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. (5) ರಲ್ಲಿ ಶ್ರೀ ರುದ್ರೇಶ್ವರಯ್ಯ, ಇವರು ತಮ್ಮ ಲಿಖಿತ ಉತ್ತರ ಸಲ್ಲಿಸಿ ಆರೋಪಗಳನ್ನು ಅಲ್ಲಗೆಳೆಯುತ್ತಾ ಇಲಾಖಾ ವಿಚಾರಣೆಯನ್ನು ಕೈಬಿಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (6) ರಲ್ಲಿ ದಿನಾಂಕ: 09-02-2007ರ ಆದೇಶದಲ್ಲಿ ಶ್ರೀ ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಕೇಂದ್ರ ಸ್ಥಾನಿಕ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿರುತ್ತದೆ. ಅದರಂತೆ, ವಿಚಾರಣಾಧಿಕಾರಿಗಳು ಈ ಪ್ರಕರಣದ ಕುರಿತು ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ಮೇಲೆ ಓದಲಾದ ಕ್ರ.ಸಂ. (7) ದಿನಾಂಕ: 26-12-2007ರಲ್ಲಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯಲ್ಲಿ ವಿಚಾರಣಾಧಿಕಾರಿಗಳು ಶ್ರೀ ರುದ್ರೇಶ್ವರಯ್ಯ, ನಿವೃತ್ತ ತಹಶೀಲ್ದಾರ್ ಇವರ ವಿರುದ್ಧದ ಆರೋಪಗಳ ಕುರಿತು ಈ ಕೆಳಕಂಡಂತೆ ನಿರ್ಣಯಿಸಿ ವರದಿ ನೀಡಿರುತ್ತಾರೆ.

ಆರೋಪ : 1 – ರುಜುವಾತಾಗಿರುತ್ತದೆ.

ಆರೋಪ : 2 – ರುಜುವಾತಾಗಿರುವುದಿಲ್ಲ.

ಆರೋಪ : 3 – ರುಜುವಾತಾಗಿರುತ್ತದೆ.

ಆರೋಪ : 4 – ರುಜುವಾತಾಗಿರುವುದಿಲ್ಲ.

ಆದ್ದರಿಂದ ವಿಚಾರಣಾ ವರದಿಯಲ್ಲಿ ಶ್ರೀ ರುದ್ರೇಶ್ವರಯ್ಯ, ನಿವೃತ್ತ ತಹಶೀಲ್ದಾರ್ ಇವರ ವಿರುದ್ಧ ಎರಡು ಆರೋಪಗಳು ಸಾಬೀತಾಗಿದ್ದರಿಂದ ಶ್ರೀಯುತರಿಗೆ ಮೇಲೆ ಓದಲಾದ ಕ್ರ.ಸಂ. (8)ರಲ್ಲಿ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು. ಅದರಂತೆ, ಶ್ರೀ ರುದ್ರೇಶ್ವರಯ್ಯ, ನಿವೃತ್ತ ತಹಶೀಲ್ದಾರ್ ಇವರು ಈ ಕೆಳಕಂಡಂತೆ ಲಿಖಿತ ಸಮಜಾಯಿಷಿಯನ್ನು ನೀಡಿರುತ್ತಾರೆ.

ಆರೋಪ: 1 – ಕರ್ನಾಟಕ ಭೂ ಸುಧಾರಣಾ ಕಾಯಿದೆ ಕಲಂ 80ರ ಪ್ರಕಾರ ವ್ಯವಸಾಯದ ಜಮೀನನ್ನು ಖರೀದಿಸುವ ಬಗ್ಗೆ ಅನುಮತಿ ನೀಡುವ ಅಧಿಕಾರ ಉಪವಿಭಾಗಾಧಿಕಾರಿಗಳಿಗೆ ನೀಡಿರುವ ಬಗ್ಗೆ ತಿಳಿಸುತ್ತದೆಯೇ ವಿನಾಃ ಕೃಷಿ ಕಾರ್ಮಿಕರ ದೃಢೀಕರಣ ನೀಡುವ ಅಧಿಕಾರ ತಹಶೀಲ್ದಾರರಿಗೆ ಇರುವುದಿಲ್ಲವೆಂಬ ಬಗ್ಗೆ ತಿಳಿಸುವುದಿಲ್ಲವೆಂದು ತಮ್ಮ ವಿರುದ್ಧದ ಆರೋಪವನ್ನು ಕೈಬಿಡುವಂತೆ ಕೋರಿರುತ್ತಾರೆ.

ಆರೋಪ: 3 – ಶ್ರೀಮತಿ ದೇವಮ್ಮ, ಶ್ರೀ ಪುಂಡಲೀಕರಾವ್‌ರವರು ಭೂ ನ್ಯಾಯ ಮಂಡಳಿಯ ಆದೇಶದಂತೆ, ಖಾತೆ ಕೋರಿದ್ದು ಅದರಂತೆ ಗಣಕ ಯಂತ್ರಕ್ಕೆ ಅಳವಡಿಸಿ, ಸಂಬಂಧಪಟ್ಟ ರಾಜಸ್ವ ನಿರೀಕ್ಷಕರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದ್ದು, ರಾಜಸ್ವ ನಿರೀಕ್ಷಕರು ದಾಖಲೆಗಳು ಸರಿ ಇಲ್ಲವೆಂದು ಖಾತೆಯನ್ನು ವಜಾ ಮಾಡಿರುತ್ತಾರೆ. ಅದರಂತೆ, ಅರ್ಜಿದಾರರಿಗೆ ಅರ್ಜಿಯನ್ನು ವಿಲೇ ಇಟ್ಟಿರುವ ಬಗ್ಗೆ ಹಿಂಬರಹ ಕೊಡಲಾಗಿದೆ ಎಂದು ತಿಳಿಸುತ್ತಾ ಆರೋಪದಿಂದ ಮುಕ್ತಗೊಳಿಸುವಂತೆ ಕೋರಿರುತ್ತಾರೆ.

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ. ಆಪಾದಿತರ ವಿರುದ್ಧ ಆಪಾದನೆ ಸಾಬೀತಾದ ಬಗ್ಗೆ ವಿಚಾರಣಾಧಿಕಾರಿಗಳು ಭೂ ಸುಧಾರಣೆ ಕಾಯ್ದೆ ಕಲಂ 79(ಎ) ಮತ್ತು (ಬಿ) ರೀತ್ಯಾ ಜಮೀನು ಕ್ರಯಕ್ಕೆ ಪಡೆದುಕೊಳ್ಳಲು ಉಪ ವಿಭಾಗಾಧಿಕಾರಿಗಳ ಅನುಮತಿ ಪಡೆಯಬೇಕಾಗಿರುತ್ತದೆ ಎಂದು ನಮೂದಿಸಿದ್ದರೂ, ತಹಶೀಲ್ದಾರರು ಅದನ್ನು ನಿರ್ಲಕ್ಷಿಸಿ ರಾಜಸ್ವ ನಿರೀಕ್ಷಕರ ವರದಿಯಂತೆ ದೃಢೀಕರಣ ಪತ್ರ ನೀಡಲು ಆದೇಶಿಸಿರುತ್ತಾರೆ. ಜಮೀನು ಖರೀದಿಸಲು ನಿಯಮ 80ರಂತೆ ಉಪವಿಭಾಗಾಧಿಕಾರಿಗಳಿಗೆ ಮಾತ್ರ ಇರುತ್ತದೆ. ಅದನ್ನು ತಹಶೀಲ್ದಾರರಿಗೆ ಕೊಟ್ಟಿಲ್ಲ. ಆದರೂ ಸದರಿ ಅಧಿಕಾರಿಯವರು ಅವರಿಗಿಲ್ಲದ ಅಧಿಕಾರವನ್ನು ಅವರೇ ವಹಿಸಿಕೊಂಡು ದೃಢ ಪತ್ರ ನೀಡಿರುತ್ತಾರೆ. ಇದರಿಂದ ಆಪಾದಿತರು ಅಧಿಕಾರ ದುರುಪಯೋಗ ಮಾಡಿಕೊಂಡಿರುವ ಆಪಾದನೆ ರುಜುವಾತಾಗಿದೆಯೆಂದು ತಿಳಿಸಿರುತ್ತಾರೆ. 3ನೇ ಆಪಾದನೆ ಬಗ್ಗೆ ವಿಚಾರಣಾಧಿಕಾರಿಗಳು ಭೂ ನ್ಯಾಯ ಮಂಡಳಿಯ ಆದೇಶವಿರದೇವರಪುರ ಗ್ರಾಮದ ಸರ್ವೆ ನಂ.123 ಪಿ ಗೆ ಆಗಿದ್ದು 124/7ಕ್ಕೆ ಆದೇಶವಾಗಿಲ್ಲ/ ಆದರೂ ಆಪಾದಿತರು 124/7ನೇ ಜಮೀನನ್ನು ಸ್ಥಳ ತನಿಖೆ ಮಾಡಿ ಖಾತೆ ಮಾಡಲು ಆದೇಶ ಮಾಡಿದ್ದಾರೆಂದು ಕಾಣಿಸಲಾಗಿದೆ. ನ್ಯಾಯ ಮಂಡಳಿ ತಪ್ಪಿದ್ದಲ್ಲಿ ನ್ಯಾಯ ಮಂಡಳಿಯ ಮುಂದೆ ಪ್ರಕರಣ ಇಟ್ಟು ತಿದ್ದುಪಡಿ ಆದೇಶ ಪಡೆದುಕೊಳ್ಳಬೇಕಾದದ್ದು. ಆಪಾದಿತರ ಕರ್ತವ್ಯವಾಗಿತ್ತು. ಆ ರೀತಿ ಮಾಡದೇ ತಾವೇ ಆದೇಶ ಮಾಡಿ ಕರ್ತವ್ಯ ಲೋಪವೆಸಗಿದ್ದಾರೆಂದು ಆದುದರಿಂದ 3ನೇ ಆಪಾದನೆ ರುಜುವಾತಾಗಿದೆಯೆಂದು ತೀರ್ಮಾನಿಸಿರುತ್ತಾರೆ.

ಶ್ರೀ ರುದ್ರೇಶ್ವರಯ್ಯ, ನಿವೃತ್ತ ತಹಶೀಲ್ದಾರ್ ಇವರು ಸಲ್ಲಿಸಿದ್ದ ಲಿಖಿತ ಸಮಜಾಯಿಷಿಯನ್ನು ಪರಿಶೀಲಿಸಿ, ಇಲಾಖಾ ವಿಚಾರಣೆಯಲ್ಲಿ ಆಪಾದನೆಗಳು ಸಾಬೀತಾಗಿರುವುದರಿಂದ, ಕೆ.ಸಿ.ಎಸ್.ಆರ್. ನಿಯಮ 214ರಡಿಯಲ್ಲಿ ಅವರ ನಿವೃತ್ತಿ ವೇತನದಲ್ಲಿ ಶೇಕಡ 10 ರಷ್ಟನ್ನು ಕಡಿತಗೊಳಿಸುವ ದಂಡನೆಯನ್ನು ವಿಧಿಸಲು ತೀರ್ಮಾನಿಸಿ ಮೇಲೆ ಓದಲಾದ ಕ್ರ.ಸಂ. (10)ರಲ್ಲಿ ದಿನಾಂಕ: 02–02–2009ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಕೋರಲಾಗಿತ್ತು. ಅದರಂತೆ, ಮೇಲೆ ಓದಲಾದ ಕ್ರ.ಸಂ. (11)ರಲ್ಲಿ ದಿನಾಂಕ: 13–05–2009ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಶ್ರೀ ರುದ್ರೇಶ್ವರಯ್ಯ, ತಹಶೀಲ್ದಾರ್ (ನಿವೃತ್ತ) ಇವರ ನಿವೃತ್ತಿ ವೇತನದಿಂದ ಶೇಕಡ 10ರಷ್ಟನ್ನು ಶಾಶ್ವತವಾಗಿ ಕಡಿತಗೊಳಿಸುವ ದಂಡನೆ ವಿಧಿಸಲು ತೀರ್ಮಾನಿಸಿರುವ ಸರ್ಕಾರದ ಪ್ರಸ್ತಾವನೆಗೆ ಸಹಮತಿಯನ್ನು ನೀಡಿತ್ತು. ಆದರೆ ಈ ಬಗ್ಗೆ ಸರ್ಕಾರವು ಶ್ರೀಯುತರ ನಿವೃತ್ತಿ ವೇತನದಿಂದ ದಂಡನೆಯನ್ನು ಶೇಕಡ 10 ರಷ್ಟರಿಂದ ಶೇಕಡ 2 ರಷ್ಟನ್ನು ಕಡಿತಗೊಳಿಸುವಂತೆ ಪರಿಷ್ಕರಿಸಿ ವಿಧಿಸಲು ತೀರ್ಮಾನಿಸಿ ಅದರಂತೆ ಮೇಲೆ ಓದಲಾದ ಕ್ರ.ಸಂ. (12) ರಲ್ಲಿ ದಿನಾಂಕ: 07–09–2009ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಕೋರಲಾಗಿತ್ತು. ಮೇಲೆ ಓದಲಾದ ಕ್ರ.ಸಂ. (13) ರಲ್ಲಿ ದಿನಾಂಕ: 20–10–2009ರ ಕರ್ನಾಟಕ ಲೋಕಸೇವಾ ಆಯೋಗವು ಶ್ರೀ ರುದ್ರೇಶ್ವರಯ್ಯ ತಹಶೀಲ್ದಾರ್ ನಿವೃತ್ತ ಇವರ ನಿವೃತ್ತಿ ವೇತನದಲ್ಲಿ ಶೇ. 2 ರಷ್ಟನ್ನು ಶಾಶ್ವತವಾಗಿ ಕಡಿತಗೊಳಿಸುವ ಪರಿಷ್ಕೃತ ದಂಡನೆ ವಿಧಿಸಲು ತೀರ್ಮಾನಿಸಿರುವ ಸರ್ಕಾರದ ಪ್ರಸ್ತಾವನೆಗೆ ಸಹಮತಿಯನ್ನು ನೀಡಿರುತ್ತದೆ.

ಆದ್ದರಿಂದ ಶ್ರೀ ರುದ್ರೇಶ್ವರಯ್ಯ ಹಿಂದಿನ ತಹಶೀಲ್ದಾರ್ ನಂಜನಗೂಡು ಪ್ರಸ್ತುತ ನಿವೃತ್ತ ತಹಶೀಲ್ದಾರ್ ಇವರ ನಿವೃತ್ತಿ ವೇತನದಿಂದ ಶೇಕಡ 2ರಷ್ಟನ್ನು ಶಾಶ್ವತವಾಗಿ ಕಡಿತಗೊಳಿಸುವ ದಂಡನೆಯನ್ನು ವಿಧಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ: ಆರ್‌ಡಿ 44 ಎಡಿಇ 2005, ಬೆಂಗಳೂರು, ದಿನಾಂಕ: 7ನೇ ಡಿಸೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ರುದ್ರೇಶ್ವರಯ್ಯ, ಹಿಂದಿನ ತಹಶೀಲ್ದಾರ್ ನಂಜನಗೂಡು, ಪ್ರಸ್ತುತ ನಿವೃತ್ತ ತಹಶೀಲ್ದಾರ್ ಇವರ ವಿರುದ್ಧ ಆರೋಪಗಳು ಸಾಬೀತಾಗಿದ್ದರಿಂದ ಕೆಸಿಎಸ್‌ಆರ್ ನಿಯಮ 214ರಡಿಯಲ್ಲಿ ಅವರ ನಿವೃತ್ತಿ ವೇತನದಿಂದ ಶೇಕಡ 2% ರಷ್ಟನ್ನು ಶಾಶ್ವತವಾಗಿ ಕಡಿತಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಪಿ.ಆರ್. 2819

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, (ಸೇವೆಗಳು–3)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ: ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅಡಿ 2009–10ನೇ ಸಾಲಿಗೆ ಮೊದಲನೇ ಕಂತಿನ ಅನುದಾನವನ್ನು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂ. ಗ್ರಾಅಪ.4.ಡಬ್ಲ್ಯೂಜಿಪಿ. 09 ದಿನಾಂಕ: 13–04–2009.

2) ಯೋಜನಾ ಆಯೋಗ (ಪಶ್ಚಿಮ ಘಟ್ಟಗಳ ಸಚಿವಾಲಯ), ಭಾರತ ಸರ್ಕಾರ, ನವದೆಹಲಿ ಇವರ ಪತ್ರ ಸಂ.ಪಿ.ಸಿ.(ಪಿ) 19/125/ಕೆಎಆರ್/2009– ಡಬ್ಲ್ಯೂಜಿಎಸ್ ದಿನಾಂಕ: 6–11–2009.

3) ಯೋಜನಾ ಆಯೋಗ (ಪಶ್ಚಿಮ ಘಟ್ಟಗಳ ಸಚಿವಾಲಯ), ಭಾರತ ಸರ್ಕಾರ, ನವದೆಹಲಿ ಇವರ ಪತ್ರ ಸಂ.ಪಿ.ಸಿ.(ಪಿ) 19/320/ಸಿಎಎಸ್ 2009– ಡಬ್ಲ್ಯೂಜಿಎಸ್ ದಿನಾಂಕ: 11–11–2009.

4) ಆರ್ಥಿಕ ಇಲಾಖೆಯ ಜಮಾ ಧೃಢೀಕರಣ ಪತ್ರ CCS No. FD 13. BGL-2009. ದಿನಾಂಕ:20–11–2009.

ಪ್ರಸ್ತಾವನೆ:

ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನವನ್ನು ಮೇಲೆ ಓದಲಾದ ಪತ್ರ (1) ರಂತೆ 2009–10ನೇ ಸಾಲಿನಲ್ಲಿ ಮುಂದುವರೆಸಲಾಗಿದೆ. ಭಾರತ ಸರ್ಕಾರದ ಯೋಜನಾ ಆಯೋಗದ ಪಶ್ಚಿಮ ಘಟ್ಟಗಳ ಸಚಿವಾಲಯವು ಮೇಲೆ ಓದಲಾದ ಪತ್ರ (2)ರಲ್ಲಿ ಈ ಕಾರ್ಯಕ್ರಮದ ಅನುಷ್ಠಾನ ಕಾರ್ಯವನ್ನು 2009–10ನೇ ಸಾಲಿನಲ್ಲಿ ಮುಂದುವರೆಸುವ ಸಲುವಾಗಿ ರಾಜ್ಯಕ್ಕೆ ಹಂಚಿಕೆ ಮಾಡಿರುವ ವಿಶೇಷ ಕೇಂದ್ರ ಅನುದಾನ ರೂ. 2924.00 ಲಕ್ಷಗಳ ವಾರ್ಷಿಕ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುತ್ತದೆ. ಇದರಲ್ಲಿ ಶೇ. 90 ಭಾಗ ಅಂದರೆ ರೂ. 2631.60 ಲಕ್ಷ ಕೇಂದ್ರ ಸರ್ಕಾರ ಬಿಡುಗಡೆ ಮಾಡಲಿರುವ ನಿಧಿ ರೂಪದ್ದಾಗಿದ್ದು, ಉಳಿಕೆ ಶೇ. 10 ಭಾಗ ಅಂದರೆ ರೂ. 292.40 ಲಕ್ಷ ರಾಜ್ಯದ ಪಾಲಾಗಿರುತ್ತದೆ. ಆ ಸಚಿವಾಲಯವು ಮೇಲೆ ಓದಲಾದ ಪತ್ರ (3)ರಲ್ಲಿ ಪ್ರಸಕ್ತ ಸಾಲಿನ ಒಟ್ಟಾರೆ ಅನುದಾನ ರೂ. 2924.00 ಲಕ್ಷ ಪೈಕಿ ಶೇ. 90 ರಷ್ಟು ಅಂದರೆ ರೂ. 2631.60 ಲಕ್ಷ ಆಗಲಿದ್ದು, ಅದರಲ್ಲಿ ವಿಶೇಷ ಕೇಂದ್ರ ಅನುದಾನದ ನಿಧಿ ಭಾಗದ ಮೊತ್ತವಾದ ರೂ. 1973.70 ಲಕ್ಷಗಳಲ್ಲಿ 2007–2008ನೇ ಸಾಲಿನ ಖರ್ಚಾಗದೇ ಉಳಿದ ಅನುದಾನ ರೂ. 186.37 ಲಕ್ಷಗಳನ್ನು ಕಡಿತಗೊಳಿಸಿ ಉಳಿಕೆ ರೂ. 1787.33 ಲಕ್ಷಗಳನ್ನು ಮೊದಲನೇ ಕಂತಿನ ಅನುದಾನವಾಗಿ ರಾಜ್ಯಕ್ಕೆ ಬಿಡುಗಡೆ ಮಾಡಿದೆ. ಈ ಅನುದಾನವು ರಾಜ್ಯ ಸರ್ಕಾರದ ಖಾತೆಗೆ ಜಮಾ ಆಗಿರುವ ಬಗ್ಗೆ ಆರ್ಥಿಕ ಇಲಾಖೆಯು ಮೇಲೆ ಓದಲಾದ ಪತ್ರ (5)ರಂತೆ ಜಮಾ ಧೃಢೀಕರಣ ಪತ್ರವನ್ನು ನೀಡಿರುತ್ತದೆ. ಈ ಅನುದಾನದ ಜೊತೆಗೆ ರಾಜ್ಯದ ಪಾಲಿನ ಶೇ.10 ಅನುದಾನವಾದ ರೂ. 178.73 ಲಕ್ಷಗಳನ್ನೂ ಸೇರಿಸಿ ರಾಜ್ಯದ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ.

ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂ: ಗ್ರಾಅಪ.1. ಪಘಯೋ.2009(ಭಾಗ–1) ಬೆಂಗಳೂರು, ದಿನಾಂಕ: 2ನೇ ಡಿಸೆಂಬರ್ 2009

ಕೇಂದ್ರ ಪುರಸ್ಕೃತ ಕಾರ್ಯಕ್ರಮವಾದ ಪಶ್ಚಿಮಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮವನ್ನು 2009–10ನೇ ಸಾಲಿನಲ್ಲಿ ಅನುಮೋದಿತ ಕ್ರಿಯಾ ಯೋಜನೆಯ ಅನ್ವಯ ಅನುಷ್ಠಾನಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಮೊದಲನೇ ಕಂತಿನ ವಿಶೇಷ ಅನುದಾನ ರೂ. 1787.33 ಲಕ್ಷ ಮತ್ತು ರಾಜ್ಯದ ಪಾಲಿನ ಶೇ. 10 ಅನುದಾನವಾದ ರೂ. 178.73 ಲಕ್ಷಗಳನ್ನೂ ಸೇರಿಸಿ ಒಟ್ಟಾರೆ ರೂ. 1966.06 ಲಕ್ಷಗಳ ಪೈಕಿ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಯೋಜನಾ ಕೋಶಕ್ಕೆ ರೂ. 20.18ಲಕ್ಷ ಅನುದಾನ ಹೊಂದಾಣಿಕೆ ಮಾಡಿಕೊಂಡು ಬಾಕಿ ಉಳಿದ ಅನುದಾನ ರೂ. 1945.88 ಲಕ್ಷಗಳನ್ನು (ರೂ. ಹತ್ತೊಂಬತ್ತು ಕೋಟಿ ನಲವತ್ತೈದು ಲಕ್ಷ ಎಂಭತ್ತೆಂಟು ಸಾವಿರ ರೂಪಾಯಿಗಳು ಮಾತ್ರ) ರಾಜ್ಯದ 11 ಜಿಲ್ಲಾ ಪಂಚಾಯತಿಗಳಿಗೆ ಅನುಬಂಧ–1 ರಲ್ಲಿ ತೋರಿಸಿರುವಂತೆ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಬಿಡುಗಡೆ ಮಾಡಲಾಗಿದೆ.

1. 2009–10ನೇ ಸಾಲಿನಲ್ಲಿ ನಿಮ್ಮ ಜಿಲ್ಲೆಯ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಸಮೂದಿಸಿರುವ ಕಾರ್ಯಕ್ರಮಗಳನ್ನು ಮಾತ್ರ ನಿಮ್ಮ ಜಿಲ್ಲೆಗೆ ನಿಗದಿಪಡಿಸಿರುವ ಅನುದಾನಕ್ಕೊಳಪಟ್ಟು ಅನುಷ್ಠಾನಗೊಳಿಸುವುದು.
2. ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಹೊರಡಿಸುತ್ತಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸುವುದು.
3. ಒಂದು ವಲಯಕ್ಕೆ ನಿಗದಿಪಡಿಸಿರುವ ಅನುದಾನವನ್ನು ಇನ್ನೊಂದು ವಲಯಕ್ಕೆ ಯಾವುದೇ ಕಾರಣಕ್ಕೂ ವರ್ಗಾಯಿಸಬಾರದು.
4. ಹಾಲಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಅನುಮೋದಿತ ಕ್ರಿಯಾ ಯೋಜನೆಯಲ್ಲಿನ ಮುಂದುವರೆದ ಅಪೂರ್ಣ ಕಾಮಗಾರಿಗಳಿಗೆ ಪ್ರಥಮ ಆದ್ಯತೆ ನೀಡಿ ಪೂರ್ಣಗೊಳಿಸತಕ್ಕದ್ದು. ಆನಂತರ ತೋಟಗಾರಿಕೆ ಹಾಗೂ

ಅರಣ್ಯೀಕರಣ ಕಾಮಗಾರಿಗಳಿಗೆ ಆದ್ಯತೆ ನೀಡಿ ಅನುಮೋದನೆಯಾಗಿರುವ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸುವುದು.

5. ಸಾಂಬಾರು ಮಂಡಳಿಯ ಕಾರ್ಯಕ್ರಮಗಳಿಗೆ ಪ್ರಸ್ತುತ ಕಂತಿನಲ್ಲಿ ಒದಗಿಸಿರುವ ಅನುದಾನ ರೂ. 14.85 ಲಕ್ಷಗಳನ್ನು ಆ ಮಂಡಳಿಗೆ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಯು ಬಿಡುಗಡೆ ಮಾಡುವುದು.
6. 2008–09ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಅನುದಾನದಲ್ಲಿ ಖರ್ಚಾಗದೇ ಉಳಿದ ಅನುದಾನವನ್ನು 2009–10ನೇ ಸಾಲಿಗೆ ನಿಮ್ಮ ಜಿಲ್ಲೆಯ ಅನುಮೋದಿತ ಅನುದಾನದಲ್ಲಿ ಎರಡನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡುವ ಸಮಯದಲ್ಲಿ ಹೊಂದಾಣಿಕೆ ಮಾಡಲಾಗುವುದು ಹಾಗೂ ಪ್ರಸಕ್ತ ಸಾಲಿನ ಮೊದಲನೇ ಕಂತಿನ ಅನುದಾನದಲ್ಲಿ ಶೇಕಡ 60ಕ್ಕಿಂತ ಹೆಚ್ಚಾಗಿ ಖರ್ಚು ಮಾಡಿದಲ್ಲಿ ಮಾತ್ರ ಎರಡನೇ ಕಂತಿನ ಅನುದಾನ ಈ ಸಾಲಿನಲ್ಲಿ ಕೇಂದ್ರದಿಂದ ಬಿಡುಗಡೆಯಾಗಲಿದೆ ಎಂಬ ಅಂಶವನ್ನು ಮುಖ್ಯವಾಗಿ ಗಮನಿಸುವುದು.
7. ಕೇಂದ್ರ ಸರ್ಕಾರವು ನಿಗದಿಪಡಿಸಿದ ನಮೂನೆಯಲ್ಲೇ ಪ್ರತಿ ತ್ರೈಮಾಸಿಕ ವರದಿಯನ್ನು ಸಕಾಲದಲ್ಲಿ ತಪ್ಪದೇ ಸರ್ಕಾರಕ್ಕೆ ಸಲ್ಲಿಸುವುದು. (Statement-I-Financial, Statement-II-Physical, verification report for beneficiary oriented schemes, verification report for schemes relating to Construction works)
8. ಜಿಲ್ಲಾ ಪಂಚಾಯತಿಯ ಮುಖ್ಯ ಲೆಕ್ಕಾಧಿಕಾರಿಗಳು ಸಹಾಯಾನುದಾನದ ಬಿಲ್ಲಿನ ಮೇಲೆ ನಿಯಮಗಳ ಪ್ರಕಾರ ಅನುದಾನವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಯಲ್ಲಿ ಖಜಾನೆಯಿಂದ ಪಡೆದು, ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡುವುದು.

2551–ಗುಡ್ಡಗಾಡು ಪ್ರದೇಶಗಳು01–ಪಶ್ಚಿಮಘಟ್ಟಗಳು–001–ನಿರ್ದೇಶನ ಮತ್ತು ಆಡಳಿತ–0–01–ಯೋಜನಾಕೋಶ–059–ಇತರೆ ಖರ್ಚು (ಯೋಜನೆ) (2551-01-001-0-01-059)

ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂ.ಗ್ರಾಅಪ:309: ಪಿಬಿಎಸ್.2009ರ ದಿನಾಂಕ: 02–12–2009ರಲ್ಲಿ ಸಹಮತಿಸಿದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಡಾ: ಪಿ.ಸಿ. ಜಾಫರ್

ನಿರ್ದೇಶಕರು, ಯೋಜನೆ, ಸಮನ್ವಯ ಹಾಗೂ ಮೇಲ್ವಿಚಾರಣಾ ಘಟಕ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್.

ಅನುಬಂಧ–1

ಸರ್ಕಾರದ ಆದೇಶದ ಸಂ.ಗ್ರಾಅಪ. 1 ಪಘಯೋ.2009(ಭಾಗ–1) ಬೆಂಗಳೂರು, ದಿನಾಂಕ: 2–12–09
ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅಡಿ 2009–10 ನೇ ಸಾಲಿನ ಜಿಲ್ಲಾವಾರು ಮೊದಲನೇ ಕಂತಿನ ಅನುದಾನ ಬಿಡುಗಡೆ ತಃಖ್ತೆ

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	2009–10ನೇ ಸಾಲಿನ ಜಿಲ್ಲಾವಾರು ಅನುದಾನ ಹಂಚಿಕೆ	ವಿಶೇಷ ಕೇಂದ್ರ	ರಾಜ್ಯ ಪಾಲಿನ ಶೇ.10 ಅನುದಾನ	ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುತ್ತಿರುವ ಮೊದಲನೇ ಕಂತಿನ ಒಟ್ಟು ಅನುದಾನ (ಕೇಂದ್ರ+ರಾಜ್ಯ)	ಕಾಲಂ 6ರ ಪೈಕಿ ಸಾಂಬಾರು ಮಂಡಳಿಗೆ ಬಿಡುಗಡೆ ಆಗಿರುವ ಅನುದಾನ
1	ಬೆಳಗಾಂ	467.75	285.92	28.59	314.51	–
2	ಚಾಮರಾಜನಗರ	86.20	52.69	5.27	57.96	–
3	ಚಿಕ್ಕಮಗಳೂರು	276.35	168.92	16.89	185.81	3.09
4	ದಕ್ಷಿಣ ಕನ್ನಡ	206.30	126.10	12.61	138.71	–
5	ಧಾರವಾಡ	67.20	41.08	4.11	45.19	–
6	ಹಾಸನ	221.65	135.49	13.55	149.04	2.78

ಕ್ರ ಸಂ.	ಜಿಲ್ಲೆಯ ಹೆಸರು	2009-10ನೇ ಸಾಲಿನ ಜಿಲ್ಲಾವಾರು ಅನುದಾನ ಹಂಚಿಕೆ	ವಿಶೇಷ ಕೇಂದ್ರ	ರಾಜ್ಯ ಪಾಲಿನ ಶೇ.10 ಅನುದಾನ	ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುತ್ತಿರುವ ಮೊದಲನೇ ಕಂತಿನ ಒಟ್ಟು ಅನುದಾನ (ಕೇಂದ್ರ+ರಾಜ್ಯ)	ಕಾಲಂ 6ರ ಪೈಕಿ ಸಾಂಬಾರು ಮಂಡಳಿಗೆ ಬಿಡುಗಡೆ ಆಗಿರುವ ಅನುದಾನ
7	ಕೊಡಗು	247.90	151.53	15.15	166.68	2.25
8	ಮೈಸೂರು	96.95	59.26	5.93	65.19	-
9	ಶಿವಮೊಗ್ಗ	410.45	250.89	25.09	275.98	3.81
10	ಉಡುಪಿ	296.85	181.45	18.14	199.59	-
11	ಉತ್ತರ ಕನ್ನಡ	516.40	315.66	31.56	347.22	2.92
	ಒಟ್ಟು :	**2900.00**	**1768.99**	**176.89**	**1945.88**	**14.85**
12	ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮ ಯೋಜನಾ ಕೋಶ	30.00	18.34	1.84	20.18	-
	ಜುಮ್ಲಾ	**2924.00**	**1787.33**	**178.73**	**1966.06**	**14.85**

ಡಾ: ಪಿ.ಸಿ. ಜಾಫರ್

ನಿರ್ದೇಶಕರು, ಯೋಜನೆ, ಸಮನ್ವಯ ಹಾಗೂ ಮೇಲ್ವಿಚಾರಣಾ ಘಟಕ

ಪಿ.ಆರ್. 2820 ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್.

ವಿಷಯ: 2009-10 ನೇ ಸಾಲಿಗೆ ಎಸ್‌ಜಿಎಸ್‌ವೈ ಎರಡನೇ ಕಂತಿನ ರಾಜ್ಯದ ಪಾಲಿನ ಅನುದಾನವನ್ನು ರಾಜ್ಯದ ಬಾಗಲಕೋಟೆ, ಬೆಂಗಳೂರು (ಗ್ರಾ) ಮತ್ತು ಬಿಜಾಪುರ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1) ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ. ಜೆ 12022/1/2009 ಎಸ್‌ಜಿಎಸ್‌ವೈ-I (10) ದಿನಾಂಕ: 16-04-09 ಮತ್ತು (42) ದಿನಾಂಕ: 07-08-09.

2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 7 ಎಸ್‌ಜೆವೈ 2009, ಬೆಂಗಳೂರು, ದಿನಾಂಕ: 20-05-09 ಮತ್ತು 25-09-09.

3) ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ. ಜೆ 12022/1/2009 ಎಸ್‌ಜಿಎಸ್‌ವೈ-I (72) ದಿನಾಂಕ: 03-11-09 ಮತ್ತು (73) ದಿನಾಂಕ: 12-11-09.

ಪ್ರಸ್ತಾವನೆ:

2009-10ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ಓದಲಾಗಿದೆ (1) ರಲ್ಲಿ ಒಂದನೇ ಕಂತಿನ ಅನುದಾನ ರೂ. 41,10,50,000ಗಳನ್ನು ರಾಜ್ಯದ ಎಲ್ಲಾ 29 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿತ್ತು. ಇದಕ್ಕನುಗುಣವಾಗಿ ರಾಜ್ಯ ಸರ್ಕಾರವು ಓದಲಾಗಿದೆ (2) ರಲ್ಲಿ ಮೊದಲನೇ ಕಂತಿನ ಅನುದಾನ ರೂ. 13,70,16,000 ಬಿಡುಗಡೆ ಮಾಡಬೇಕಿತ್ತು. ಆದರೆ ರಾಜ್ಯದ 2009-10ನೇ ಸಾಲಿನ ಆಯವ್ಯಯದಲ್ಲಿ ಕೆಲವೊಂದು ಜಿಲ್ಲಾ ಪಂಚಾಯತಿಗಳಿಗೆ ಒದಗಿಸಿರುವ ಅನುದಾನದಲ್ಲಿ ಕೊರತೆಯಿರುವುದರಿಂದ, ಆಯವ್ಯಯದ ಲಭ್ಯತೆಗೆ ಅನುಸಾರ ರೂ. 13.45,20,000ಗಳನ್ನು 29 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆಗೊಳಿಸಲಾಗಿದೆ. ಉಲ್ಲೇಖಿತ (3)ರ ಪತ್ರಗಳಲ್ಲಿ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಜ್ಯದ ಬಾಗಲಕೋಟೆ, ಬೆಂಗಳೂರು (ಗ್ರಾ) ಮತ್ತು ಬಿಜಾಪುರ ಜಿಲ್ಲಾ ಪಂಚಾಯತಿಗಳಿಗೆ ಎರಡನೇ ಕಂತಿನ ಅನುದಾನ ರೂ.

3,08,64,000ಗಳನ್ನು ಬಿಡುಗಡೆ ಮಾಡಿದ್ದು, ಇದರನ್ವಯ ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನ ರೂ. 1,02,88,000ಗಳನ್ನು ಬಿಡುಗಡೆ ಮಾಡಬೇಕಾಗಿದೆ. ಆದರೆ ರಾಜ್ಯದ 2009-10ನೇ ಸಾಲಿನ ಆಯವ್ಯಯದಲ್ಲಿ ಜಿಲ್ಲಾ ಪಂಚಾಯತಿಗಳಿಗೆ ಒದಗಿಸಿರುವ ಅನುದಾನದಲ್ಲಿ ಕೊರತೆಯಿರುವುದರಿಂದ, ಜಿಲ್ಲೆಯ ಆಯವ್ಯಯದ ಲಭ್ಯತೆಗೆ ಅನುಸಾರ ರೂ. 67.43,000ಗಳನ್ನು ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ ಮತ್ತು ಬಿಜಾಪುರ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆಗೊಳಿಸಬೇಕಾದುದರಿಂದ,

ಈ ಆದೇಶ:

ಸರ್ಕಾರದ ಆದೇಶ ಸಂ: ಗ್ರಾಅಪ. 7 ಎಸ್‌ಜಿವೈ 2009, ಬೆಂಗಳೂರು, ದಿನಾಂಕ: 8ನೇ ಡಿಸೆಂಬರ್ 2009

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ರಾಜ್ಯ ಸರ್ಕಾರದ 2009-10ನೇ ಸಾಲಿನ ಆಯವ್ಯಯದಲ್ಲಿ ಜಿಲ್ಲೆಗೆ ಒದಗಿಸಿದ ಅನುದಾನದ ಲಭ್ಯತೆಗೆ ಅನುಸಾರವಾಗಿ ಎರಡನೇ ಕಂತಿನ ಅನುದಾನ ರೂ. 67,43,000ಗಳನ್ನು (ರೂ. ಅರವತ್ತೇಳು ಲಕ್ಷದ ನಲವತ್ತ ಮೂರು ಸಾವಿರ ಮಾತ್ರ) ಲಗತ್ತಿಸಿರುವ ಅನುಬಂಧದಲ್ಲಿ ತೋರಿಸಿರುವಂತೆ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಷರತ್ತುಗಳು :

1999ಮೇ ತಿಂಗಳ ಎಸ್‌ಜಿಎಸ್‌ವೈ ಕೈಪಿಡಿಯ ಮಾರ್ಗಸೂಚಿಯಂತೆ ಹಣವನ್ನು ಉಪಯೋಗಿಸುವುದು. ಅನುಷ್ಠಾನ ಏಜೆನ್ಸಿಗಳಿಗೆ ಸರ್ಕಾರಿ ಆದೇಶ ತಲುಪಿದ 15 ದಿವಸದೊಳಗೆ ಬಿಡುಗಡೆ ಮಾಡತಕ್ಕದ್ದು.

ನಿಧಿಯ ಮಾದರಿ ಕೇಂದ್ರ ಮತ್ತು ರಾಜ್ಯದ ನಡುವೆ 75:25 ರ ಅನುಪಾತದಲ್ಲಿ ನೀಡಲಾಗುವುದು.

ಯೋಜನೆಯ ವೆಚ್ಚವನ್ನು ಪ್ರಧಾನ ಲೆಕ್ಕಶೀರ್ಷಿಕೆ "2501 ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು 01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು-198-ಗ್ರಾಮ ಪಂಚಾಯತ್‌ಗಳಿಗೆ ಸಹಾಯ-6-ಗ್ರಾಮ ಪಂಚಾಯತ್‌ಗಳು -01- ಬ್ಲಾಕ್ ಅನುದಾನ ಕೇಂದ್ರ ಪುರಸ್ಕೃತ ಯೋಜನೆ (ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ) 2009-10ನೇ (2501-01-198-6-01)" (ಲಿಂಕ್ ಕೋಡ್ 2501-01-800-0-07) ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 7 ಜೆಡ್‌ಪಿಎ 2003 ದಿನಾಂಕ: 14-07-2005ರನ್ವಯ ಖಜಾನೆಯಿಂದ ಪಡೆಯುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ ಹಣ ತೆಗೆಯಲು ಕಾನೂನು ರೀತ್ಯ ಅಧಿಕಾರ ನೀಡಲಾಗಿದೆ. ಈ ಯೋಜನೆಯಡಿ ಕೇಂದ್ರ ಸರ್ಕಾರವು ನೇರವಾಗಿ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿರುವ ಅನುದಾನ ಮತ್ತು ರಾಜ್ಯದ ಪಾಲಿನ ಅನುದಾನವೂ ಸೇರಿದಂತೆ ಒಟ್ಟು ಅನುದಾನವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 14 ಎಸ್‌ಜಿವೈ 2007 ದಿನಾಂಕ: 18-04-2007ರ ಸೂಚನೆಯಿಂದ ಕ್ರಮಕೈಗೊಳ್ಳುವುದು.

ಬಿಡುಗಡೆ ಮಾಡುವ ಹಣದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡುವುದು.

2009-10 ನೇ ಸಾಲಿನ ಅನುಮೋದಿತ ವಾರ್ಷಿಕ ಯೋಜನೆಯನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಸರ್ಕಾರಕ್ಕೆ ಸಲ್ಲಿಸುವುದು.

ಆರ್ಥಿಕ ಮತ್ತು ಭೌತಿಕ ಸಾಧನೆಯ ಮಾಸಿಕ ಪ್ರಗತಿ ವರದಿಯನ್ನು ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ಕೇಂದ್ರ ಸರ್ಕಾರದ Onlineಗೆ upload ಮಾಡಿ ಪ್ರತಿಯನ್ನು ಸ್ವ ಉದ್ಯೋಗ ಕಾರ್ಯಕ್ರಮಗಳ ಶಾಖೆಗೆ ತಪ್ಪದೇ ಕಳುಹಿಸುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಆಡಿಟ್ ಮಾಡಿದ ಲೆಕ್ಕಗಳನ್ನು ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಹಮತಿ ಸಂಖ್ಯೆ: ಗ್ರಾಅಪ 304 ಪಿಬಿಎಸ್ 2009 ದಿನಾಂಕ: 01-12-2009 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಎ. ಮೇಘಣ್ಣವರ

ನಿರ್ದೇಶಕರು, (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 7 ಎಸ್‌ಜಿವೈ 2009, ಬೆಂಗಳೂರು ದಿನಾಂಕ: 08-12-2009

(ರೂ.ಗಳಲ್ಲಿ)

ಕ್ರ. ಸಂ	ಜಿಲ್ಲಾ ಪಂಚಾಯತಿ ಹೆಸರು	ಜಿ.ಪಂ. ಕೋಡ್	ಡಿ.ಡಿ.ಒ. ಕೋಡ್	ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಎರಡನೇ ಕಂತಿನ ಅನುದಾನ	ರಾಜ್ಯ ಸರ್ಕಾರವು ಬಿಡುಗಡೆ ಮಾಡಬೇಕಾದ ಎರಡನೇ ಕಂತಿನ ಅನುದಾನ	ರಾಜ್ಯದ ಆಯವ್ಯಯದಲ್ಲಿ ಜಿಲ್ಲೆಗೆ ನಿಗದಿ ಪಡಿಸಿದ ರಾಜ್ಯದ ಪಾಲಿನ ಅನುದಾನ	2009-10ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳಿಗೆ ಈವರೆವಿಗೂ ಬಿಡುಗಡೆ ಮಾಡಿದ ಅನುದಾನ	ಜಿಲ್ಲಾ ಪಂಚಾಯತಿಗಳಲ್ಲಿ ಲಭ್ಯವಿರುವ ಅನುದಾನ	ಜಿಲ್ಲಾ ಆಯವ್ಯಯದ ಲಭ್ಯತೆಯಂತೆ ಬಿಡುಗಡೆ ಮಾಡುತ್ತಿರುವ ಎರಡನೇ ಕಂತಿನ ಅನುದಾನ
1	ಬಾಗಲಕೋಟೆ	461	2900ZZ0001	97,02,000	32,34,000	63,00,000	32,33,000	30,67,000	30,67,000
2	ಬೆಂಗಳೂರು (ಗ್ರಾ)	402	0300ZZ8001	21,52,000	7,17,000	17,00,000	25,87,000	(-) 8,87,000	0
3	ಬಿಜಾಪುರ	414	2800ZZ9152	1,90,10,000	63,37,000	1,23,00,000	86,24,000	36,76,000	36,76,000
	ಒಟ್ಟು			3,08,64,000	1,02,88,000	2,03,00,000	1,44,44,000	-	67,43,000

ಪಿ.ಎ. ಮೇಘಣ್ಣವರ

ಪಿ.ಆರ್. 2821 ನಿರ್ದೇಶಕರು, (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಸಂವಾಪ್ರ:36:ವಾಪ್ರಪ:09, ಬೆಂಗಳೂರು, ದಿನಾಂಕ: 9ನೇ ಡಿಸೆಂಬರ್ 2009

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪತ್ರಿಕೆಗಳು ಹಾಗೂ ವಿದ್ಯುನ್ಮಾನ ಮಾಧ್ಯಮಗಳ ಪಾತ್ರ ಮಹತ್ತರವಾಗಿದ್ದು, ಜನಸಾಮಾನ್ಯರ ಸಂವೇದನೆಗಳಿಗೆ ಸ್ಪಂದಿಸುತ್ತಾ, ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಕಾಣಿಕೆ ನೀಡುತ್ತಿವೆ. ಈ ಹಿನ್ನೆಲೆಯಲ್ಲಿ ಮಾಧ್ಯಮ ಪ್ರತಿನಿಧಿಗಳು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ರಾಜ್ಯದಲ್ಲಿ, ಜಿಲ್ಲಾ ಕೇಂದ್ರಗಳಲ್ಲಿ ಸುಸಜ್ಜಿತ ಪತ್ರಿಕಾ ಭವನಗಳನ್ನು ನಿರ್ಮಿಸಲು ಸರ್ಕಾರವು ತೀರ್ಮಾನಿಸಿ, ತತ್ಸಂಬಂಧದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ:36: ವಾಪ್ರಪ:09, ದಿನಾಂಕ: 09-12-2009ರಲ್ಲಿ ಕೆಲವು ಜಿಲ್ಲೆಗಳಲ್ಲಿ ಪತ್ರಿಕಾ ಭವನಗಳನ್ನು ನಿರ್ಮಾಣ ಮಾಡಲು ಹಾಗೂ ಹಾಲಿ ಇರುವ ಪತ್ರಿಕಾ ಭವನಗಳನ್ನು ಸುಸಜ್ಜಿತಗೊಳಿಸಲು ಒಟ್ಟು 3.00ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ತತ್ಸಂಬಂಧದಲ್ಲಿ ಪತ್ರಿಕಾ ಭವನಗಳ ನಿರ್ಮಾಣ ಹಾಗೂ ನಿರ್ಮಾಣಗೊಂಡಿರುವ ಭವನಗಳ ದುರಸ್ತಿ, ಅಭಿವೃದ್ಧಿ, ನಿರ್ವಹಣೆ, ಮೇಲ್ವಿಚಾರಣೆ ಇವುಗಳ ಉದ್ದೇಶಕ್ಕಾಗಿ ಈ ಕೆಳಕಂಡಂತೆ ಜಿಲ್ಲಾಮಟ್ಟದ ಸಮಿತಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಚಿಸಲಾಗಿದೆ.

1.	ಜಿಲ್ಲಾಧಿಕಾರಿಗಳು	ಅಧ್ಯಕ್ಷರು
2.	ಜಿಲ್ಲಾ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ	ಸದಸ್ಯರು
3.	ಜಿಲ್ಲೆಯ ವಾರ್ತಾ ಇಲಾಖೆಗೆ ಸಂಬಂಧಪಟ್ಟ ಉಪನಿರ್ದೇಶಕರು ಅಥವಾ ಸಹಾಯಕ ನಿರ್ದೇಶಕರು	ಸದಸ್ಯ ಕಾರ್ಯದರ್ಶಿ

ಈ ಸಮಿತಿಯ ಜವಾಬ್ದಾರಿ,

1. ನಿರ್ಮಾಣ ಕಾರ್ಯದ ಉಸ್ತುವಾರಿಯನ್ನು ನೋಡಿಕೊಳ್ಳುವುದು.
2. ಸಮಿತಿ ಕನಿಷ್ಠ ಮೂರು ತಿಂಗಳಿಗೊಮ್ಮೆ ಸಭೆ ಸೇರಿ ನಿರ್ಮಾಣ ಪ್ರಗತಿ ಪರಿಶೀಲನೆ ಮಾಡುವುದು.
3. ಕ್ಲುಪ್ತಕಾಲಕ್ಕೆ ಕಟ್ಟಡವನ್ನು ಪೂರ್ಣಗೊಳಿಸುವುದು.
4. ಸರ್ಕಾರಕ್ಕೆ ಆಗಾಗ್ಗೆ ಪ್ರಗತಿ ಬಗ್ಗೆ ವರದಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ನಾರಾಯಣಪ್ಪ

ಪಿ.ಆರ್. 2822 ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವೃಂದದ ವೈದ್ಯಾಧಿಕಾರಿ/ದಂತ ಆರೋಗ್ಯಾಧಿಕಾರಿಗಳಿಗೆ ಹೆಚ್ಚುವರಿಯಾಗಿ ವಿವಿಧ ಭತ್ಯೆಗಳನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1) ಆಯುಕ್ತರು ಆಕುಕ ಸೇವೆಗಳು, ಬೆಂಗಳೂರು ಇವರ ಪತ್ರ ಸಂ: ಜೆಆರ್ ಒ (1) 115/07-08 ದಿನಾಂಕ:13-08-2008

2) ಸರ್ಕಾರದ ಆದೇಶ ಸಂಖ್ಯೆ: ಆಕುಕ 718 ಹೆಚ್ ಎಸ್ ಹೆಚ್ 2008 ದಿನಾಂಕ: 22-12-2008

3) ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿಯ ವರದಿ

4) ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 28-10-2009 ರಂದು ನಡೆದ ಸಭೆಯ ನಡವಳಿಗಳು.

ಪ್ರಸ್ತಾವನೆ:

ಕರ್ನಾಟಕ ರಾಜ್ಯ ವೈದ್ಯಾಧಿಕಾರಿಗಳ ಸಂಘವು ಸಲ್ಲಿಸಿದ ಬೇಡಿಕೆಗಳಿಗೆ ಅನುಗುಣವಾಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರುಗಳಿಗೆ ವೈದ್ಯಕೀಯ ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಯ ಸರಿಸಮಾನವಾದ ವೇತನ ಮತ್ತು ಭತ್ಯೆಗಳನ್ನು ನಿಗದಿಪಡಿಸುವಂತೆ ಹಾಗೂ ಇತರ ಭತ್ಯೆಗಳನ್ನು ಮಂಜೂರು ಮಾಡುವಂತೆ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಪ್ರಸ್ತಾವನೆ ಸಲ್ಲಿಸಿದ್ದರು.

ಈ ಹಿಂದೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿಗಳು ನಡೆಸಿದ ಮುಷ್ಕರದ ಸಂದರ್ಭದಲ್ಲಿ ವೈದ್ಯಾಧಿಕಾರಿಗಳ ಸಂಘದ ಬೇಡಿಕೆಗಳಿಗೆ ಇಲಾಖೆಯು ಸ್ಪಂದಿಸಿ, ಅವರ ಪ್ರಮುಖ ಬೇಡಿಕೆಗಳಾದ ಇಲಾಖೆಯ ವೈದ್ಯಾಧಿಕಾರಿಗಳಿಗೆ ವೈದ್ಯಕೀಯ ಶಿಕ್ಷಣ ಇಲಾಖೆಯ ಬೋಧಕ ವರ್ಗದವರಿಗೆ ನೀಡಲಾಗುವ ವೇತನ ಭತ್ಯೆಗಳಿಗೆ ಸಮಾನಾಂತರವಾಗಿ ನೀಡುವ ಬಗ್ಗೆ ಮತ್ತು ಗ್ರಾಮೀಣ ಭತ್ಯೆ, ಸ್ನಾತಕೋತ್ತರ ಪದವಿ ಭತ್ಯೆ, ಶೈಕ್ಷಣಿಕ ಭತ್ಯೆ ಮುಂತಾದವುಗಳ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಮೇಲೆ ಓದಲಾದ ಕ್ರಮಾಂಕ (2)ರ ಆದೇಶದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು.

ಈ ಸಮಿತಿಯು ವೈದ್ಯರ ಸಂಘದ ಬೇಡಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸಲು ಅನೇಕ ಬಾರಿ ಸಭೆ ಸೇರಿ, ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಾಯತ್ತ ಸಂಸ್ಥೆಗಳಲ್ಲಿನ ಬೋಧಕ ವೈದ್ಯರುಗಳಿಗೆ ಕೇಂದ್ರ ಸರ್ಕಾರದ ಎ.ಐ.ಸಿ.ಟಿ.ಇ ವೇತನ ಮತ್ತು ಭತ್ಯೆಗಳನ್ನು ನೀಡಲಾಗುತ್ತಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿಗಳಿಗೆ ವೇತನ ಮತ್ತು ಭತ್ಯೆಗಳನ್ನು ರಾಜ್ಯ ಸರ್ಕಾರದ ವೇತನ ಆಯೋಗದ ಶಿಫಾರಸ್ಸಿನ ಅನ್ವಯ ನಿಗದಿಪಡಿಸಿರುವ ಕಾರಣ ಎರಡು ಇಲಾಖೆಗಳಿಗೆ ಹೋಲಿಕೆ ಮಾಡಿ ವೇತನ ಸಮಾನಾಂತರಗೊಳಿಸುವುದು ಸಮಂಜಸವಲ್ಲವೆಂದು ಸಮಿತಿಯು ಅಭಿಪ್ರಾಯಪಟ್ಟು, ಅವರ ಕಾರ್ಯವಿಶೇಷತೆ, ಹೆಚ್ಚುವರಿ ವಿದ್ಯಾರ್ಹತೆ ಹಾಗೂ ಆಡಳಿತಾತ್ಮಕ ಕಾರ್ಯ ಇತ್ಯಾದಿಗಳನ್ನು ಪರಿಗಣಿಸಿ ಹಾಗೂ ನೆರೆರಾಜ್ಯಗಳಲ್ಲಿ ನೀಡುತ್ತಿರುವ ಭತ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಕೆಲವೊಂದು ಭತ್ಯೆಗಳನ್ನು ನೀಡಲು ಸಮಿತಿಯು ಮೇಲೆ ಓದಲಾದ ಕ್ರಮಾಂಕ (3)ರ ವರದಿಯಲ್ಲಿ ಶಿಫಾರಸ್ಸು ಮಾಡಿತ್ತು.

ಈ ಸಮಿತಿಯ ಶಿಫಾರಸ್ಸು ಹಾಗೂ ಆರ್ಥಿಕ ಇಲಾಖೆಯು ನೀಡಿರುವ ಅಭಿಪ್ರಾಯದ ಹಿನ್ನೆಲೆಯಲ್ಲಿ ದಿನಾಂಕ: 25-09-2009 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಕೆಳಕಂಡ ಭತ್ಯೆಗಳನ್ನು ನೀಡಲು ಅನುಮೋದಿಸಿತ್ತು.

1. ವೈದ್ಯರು ಗ್ರಾಮೀಣ ಪ್ರದೇಶದ ಕೇಂದ್ರಸ್ಥಾನದಲ್ಲಿ ವಾಸಿಸುವುದು ಕಡ್ಡಾಯವೆಂಬ ಷರತ್ತಿಗೆ ಒಳಪಟ್ಟು ಮಾಸಿಕ ರೂ. 6000/- ಗಳ ಗ್ರಾಮೀಣ ಭತ್ಯೆ.
2. (i) ಸ್ವಂತ ಖರ್ಚಿನಲ್ಲಿ ಸ್ನಾತಕೋತ್ತರ ಪದವಿ ಪಡೆದ ವೈದ್ಯರುಗಳಿಗೆ ಮಾಸಿಕ ರೂ. 8000/- ಹಾಗೂ ಡಿಪ್ಲೊಮ ಹೊಂದಿದ ವೈದ್ಯರಿಗೆ ರೂ. 5000/- ಸ್ನಾತಕೋತ್ತರ ಭತ್ಯೆ

   (ii) ಸರ್ಕಾರಿ ಖರ್ಚಿನಲ್ಲಿ ಸ್ನಾತಕೋತ್ತರ ಪದವಿ ಪಡೆದ ವೈದ್ಯರುಗಳಿಗೆ ರೂ. 5000/- ಹಾಗೂ ಡಿಪ್ಲೊಮ ಹೊಂದಿದ ವೈದ್ಯರಿಗೆ ರೂ. 3000/- ಸ್ನಾತಕೋತ್ತರ ಭತ್ಯೆ
3. ಈಗಾಗಲೇ 6 ವರ್ಷ ಗ್ರಾಮೀಣ ಸೇವೆ ಸಲ್ಲಿಸಿ ಪ್ರಸ್ತುತ ನಗರ ಪ್ರದೇಶದಲ್ಲಿ ಕಾರ್ಯನಿರ್ವಹಿಸುವ ತಜ್ಞತೆಯಿಲ್ಲದ ವೈದ್ಯರುಗಳಿಗೆ ಉತ್ತೇಜನ ನೀಡುವುದಕ್ಕಾಗಿ ಅವರುಗಳಿಗೆ ಮಾಸಿಕ ರೂ. 4500/- ವಿಶೇಷ ಭತ್ಯೆ.

ಆದರೆ, ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘವು ಸರ್ಕಾರದ ಮುಂದೆ ಇಟ್ಟಿದ್ದ ಹಲವು ಬೇಡಿಕೆಗಳನ್ನು ಈಗಾಗಲೇ ಪರಿಶೀಲಿಸಿ ಈಡೇರಿಸಲು ಕ್ರಮಗಳನ್ನು ಕೈಗೊಂಡಿದ್ದರೂ, ಕೆಲವು ಬೇಡಿಕೆಗಳ ಕುರಿತು ಸರ್ಕಾರವು ತೆಗೆದುಕೊಂಡಿರುವ ತೀರ್ಮಾನ ತೃಪ್ತಿಕರವಾಗಿಲ್ಲವೆಂದು ಮುಷ್ಕರದ ಹಾದಿ ಹಿಡಿದಿದ್ದರು. ವೈದ್ಯಾಧಿಕಾರಿಗಳ ಸಂಘದ

ಬೇಡಿಕೆಗಳನ್ನು ಕುರಿತು ಚರ್ಚಿಸಲು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 28-10-2009ರಂದು ಸಭೆ ನಡೆಯಿತು. ಸದರಿ ಸಭೆಯಲ್ಲಿ ಕೆಲವು ಸಚಿವರು, ಆರ್ಥಿಕ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡಂತೆ ಇತರೆ ಅಧಿಕಾರಿಗಳು ಹಾಗೂ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಪ್ರಸ್ತುತ ರಾಜ್ಯದ ಆರ್ಥಿಕ ವಸ್ತುಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ವೈದ್ಯರ ಸಂಘದ ಬೇಡಿಕೆಗಳ ಬಗ್ಗೆ ಕೂಲಂಕಷವಾಗಿ ಸದರಿ ಸಭೆಯಲ್ಲಿ ಚರ್ಚಿಸಲಾಯಿತು. ಈ ವಿಷಯವನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸಲು ದಿನಾಂಕ: 25-09-2009ರಂದು ನಡೆದ ಸಚಿವ ಸಂಪುಟದಲ್ಲಿ ತೆಗೆದುಕೊಂಡಿರುವ ತೀರ್ಮಾನವನ್ನು ಪರಿಷ್ಕರಿಸಿ ಕೆಲವು ಭತ್ಯೆಗಳನ್ನು ಹೆಚ್ಚುವರಿಯಾಗಿ ನೀಡುವ ಜೊತೆಗೆ ತುರ್ತುಚಿಕಿತ್ಸಾ ಭತ್ಯೆ ಮತ್ತು ಸೂಪರ್ ಸ್ಪೆಷಾಲಿಟಿ ಭತ್ಯೆಯನ್ನು ಸಹ ನೀಡಲು ದಿನಾಂಕ: 28-10-2009ರ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮೇಲೆ ತಿಳಿಸಿದಂತೆ ತೆಗೆದುಕೊಂಡ ಪರಿಷ್ಕೃತ ತೀರ್ಮಾನದ ಹಿನ್ನೆಲೆಯಲ್ಲಿ ಈ ವಿಷಯದ ಬಗ್ಗೆ ಮತ್ತೊಮ್ಮೆ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿ ದಿನಾಂಕ: 28-10-2009ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದ ಅನ್ವಯ ಆದೇಶ ಹೊರಡಿಸಿ ನಂತರ ಸಚಿವ ಸಂಪುಟದ ಘಟನೋತ್ತರ ಅನುಮೋದನೆ ಪಡೆಯುವಂತೆ ಆರ್ಥಿಕ ಇಲಾಖೆಯು ದಿನಾಂಕ: 02-12-2009 ರ ಅ.ಟಿ. ಸಂಖ್ಯೆ:ಆಇ/1390/ವೆಚ್ಚ-5/2009ರಲ್ಲಿ ತಿಳಿಸಿದೆ.

ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂ: ಆಕುಕ 718 ಹೆಚ್‌ಎಸ್‌ಹೆಚ್ 2008, ಬೆಂಗಳೂರು, ದಿನಾಂಕ: 10ನೇ ಡಿಸೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿವಿಧ ವೃಂದದ ವೈದ್ಯಾಧಿಕಾರಿಗಳಿಗೆ ಹಾಗೂ ದಂತ ಆರೋಗ್ಯಾಧಿಕಾರಿಗಳಿಗೆ ಕೆಳಕಂಡಂತೆ ವಿವಿಧ ಭತ್ಯೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮಂಜೂರು ಮಾಡಿದೆ.

1. ವೈದ್ಯರು ಗ್ರಾಮೀಣ ಪ್ರದೇಶದ *ಕೇಂದ್ರಸ್ಥಾನದಲ್ಲಿ ವಾಸಿಸುವುದು ಕಡ್ಡಾಯವೆಂಬ ಷರತ್ತಿಗೆ ಒಳಪಟ್ಟು ಮಾಸಿಕ ರೂ. 7000/- (ರೂಪಾಯಿ ಏಳು ಸಾವಿರಗಳು ಮಾತ್ರ) ಗ್ರಾಮೀಣ ಭತ್ಯೆ.
2. ಡಿಪ್ಲೊಮ ಪಡೆದ ವೈದ್ಯರುಗಳಿಗೆ ಮಾಸಿಕ ರೂ. 6000/- (ರೂಪಾಯಿ ಆರು ಸಾವಿರಗಳು ಮಾತ್ರ) ಹಾಗೂ ಸ್ನಾತಕೋತ್ತರ ಪದವಿ ಪಡೆದ ವೈದ್ಯರಿಗೆ ಮಾಸಿಕ ರೂ. 8000/- (ರೂಪಾಯಿ ಎಂಟು ಸಾವಿರಗಳು ಮಾತ್ರ) ರಂತೆ ಸ್ನಾತಕೋತ್ತರ ಭತ್ಯೆ
3. ವಿವಿಧ ವೃಂದಗಳ ಎಲ್ಲಾ ವೈದ್ಯರಿಗೆ ಮಾಸಿಕ ರೂ. 3000/- (ರೂಪಾಯಿ ಮೂರು ಸಾವಿರಗಳು ಮಾತ್ರ) ರಂತೆ ತುರ್ತು ಚಿಕಿತ್ಸಾ ಭತ್ಯೆ.
4. ಸೂಪರ್ ಸ್ಪೆಷಾಲಿಟಿ ಅರ್ಹತೆ ಹೊಂದಿರುವ ತಜ್ಞ ವೈದ್ಯರುಗಳಿಗೆ ಮಾಸಿಕ ರೂ. 10,000/- (ರೂಪಾಯಿ ಹತ್ತು ಸಾವಿರಗಳು ಮಾತ್ರ) ಸೂಪರ್ ಸ್ಪೆಷಾಲಿಟಿ ಭತ್ಯೆ.
5. ಡಿಪ್ಲೊಮ ಅಥವಾ ಸ್ನಾತಕೋತ್ತರ ಪದವಿ ಪಡೆಯದೇ ಕನಿಷ್ಠ 6 ವರ್ಷಗಳ ಗ್ರಾಮೀಣ ಸೇವೆಯನ್ನು ಸಲ್ಲಿಸಿ, ಪ್ರಸ್ತುತ ನಗರ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರುಗಳಿಗೆ ಮಾಸಿಕ ರೂ. 5000/- (ರೂಪಾಯಿ ಐದು ಸಾವಿರಗಳು ಮಾತ್ರ) ರಂತೆ ವಿಶೇಷ ಭತ್ಯೆ.

*** ವಿವರಣೆ:** ಗ್ರಾಮೀಣ ಪ್ರದೇಶ ಅಂದರೆ, ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ಅಥವಾ ಕರ್ನಾಟಕ ಮುನ್ಸಿಪಾಲಿಟೀಸ್ ಕಾಯ್ದೆ 1964 ರಲ್ಲಿ ವ್ಯಾಖ್ಯಾನಿಸಿರುವಂತೆ ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆಗೊಳ್ಳಲಿರುವ (Transitional area) ಪ್ರದೇಶಗಳ ಹೊರತಾದ ಪ್ರದೇಶ ಎಂದು ಪರಿಭಾವಿಸತಕ್ಕದ್ದು.

ಗ್ರಾಮೀಣ ಭತ್ಯೆ ಹಾಗೂ ಸ್ನಾತಕೋತ್ತರ ಭತ್ಯೆ ಇವುಗಳ ಪೈಕಿ ಯಾವುದಾದರೂ ಒಂದು ಭತ್ಯೆಯನ್ನು ಮಾತ್ರ ಪಡೆಯಲು ವೈದ್ಯರು ಅರ್ಹರಿರುತ್ತಾರೆ.

ಇದಕ್ಕೆ ತಗಲುವ ವೆಚ್ಚವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಒಟ್ಟಾರೆ ಸಂಭವನೀಯ ಉಳಿತಾಯದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ/1390/ವೆಚ್ಚ-5/2009 ದಿನಾಂಕ: 02-12-2009ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಐ. ಹೇಮನಾಥ್

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ಸೇವೆಗಳು -1)

ಪಿ.ಆರ್. 2823

COMMERCE AND INDUSTRIES SECRETARIAT

Sub: Release of VRS amount to Karnataka State Agro Corn Products Ltd.

Read: 1) G.O. No. ಕೃತೋಇ 35 ಕೃಇಮಂ 2009 dt: 24-09-2009.

2) U.O. Note No. 1304 Exp-1/2009 dt. 23-11-2009 of the under Secretary to Govt. Finance Department. (Exp-I & Inv)..

Preamble:

The Agriculture Department vide its Govt. Order read at (1) above has sanctioned an amount of Rs. 6.72 crore as a loan towards payment of VRS amount to 121 employees of Karnataka State Agro Corn Products Ltd. Under Head of Account 6852-02-190-4-02-394 (NP).

In the U.O. Note read at (2) above, the Finance Department has informed that under the demand No. 18 (C&I) Commerce & Industries Department will have to issue the Government Order to authorize the Commissioner for Industrial Development and Director of industries & Commerce to Countersign the bill Submitted by Karnataka State Agro Corn Products Ltd.

Hence the Following order.

Order No.CI 305 SPI 2009, Bangalore Dated: 10th December 2009

In the Circumstances explained above, Commissioner for industrial Development and Director of Industries & Commerce is hereby authorized to countersign the bill/payee's receipt amounting to Rs. 6.72 Crore (Six crore and Seventy two lakhs only) submitted by the Managing Director, Karnataka State Agro Corn Products Ltd. The expenditure is debitable to Head of Account 6852-02-190-4-02-394 (NP) The release of loan is subject to the Conditions imposed in the Govt. Order No. ಕೃತೋಇ 35 ಕೃಇಮಂ 2009 dt: 24-09-2009

This Issues with the Concurrence of Finance Department vide U.O. Note No. FD 1304 Exp-I/2009 dated: 23-11-2009.

By Order and in the name of the Governor of Karnataka

APARNA PAVATE

P.R. 2824

Desk Officer (Technical Cell)

Commerce & Industries Department.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಿಗೆ ನಿವೃತ್ತಿ ಉಪದಾನದ ವ್ಯತ್ಯಾಸದ ಮೊತ್ತದ ಮೇಲೆ ಬಡ್ಡಿಯನ್ನು ಬಿಡುಗಡೆ ಮಾಡುವ ಬಗ್ಗೆ – ಆದೇಶ.

ಓದಲಾಗಿದೆ: 1) ಸರ್ಕಾರದ ಆದೇಶ ಸಂ:ಸಿಆಸುಇ 60 ಸೇಉನ್ಯಾ 2007, ಬೆಂಗಳೂರು, ದಿನಾಂಕ: 4–12–2008.

2) ಮಹಾಲೇಖಾಪಾಲರ ಪತ್ರ ಸಂ:ಪಿಎಮ್/ಜಿ1/ಡಬ್ಲ್ಯೂಪಿ–ಎನ್‌ಎಸ್‌ವಿ/2008–09/913, ದಿನಾಂಕ: 27.02.2009.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಬಾರ್ ಕೌನ್ಸಿಲ್‌ನಿಂದ ಉಚ್ಚ ನ್ಯಾಯಾಲಯಕ್ಕೆ ನೇರವಾಗಿ ಆಯ್ಕೆಗೊಂಡು ನೇಮಕಗೊಂಡ ನ್ಯಾಯಾಧೀಶರಿಗೆ ನೀಡುತ್ತಿರುವ ಮಾದರಿಯಲ್ಲಿಯೇ ಅಧೀನ ನ್ಯಾಯಾಂಗ ಸೇವೆಯಿಂದ ಉಚ್ಚ ನ್ಯಾಯಾಲಯಕ್ಕೆ ಬಡ್ತಿ ಹೊಂದಿ ನೇಮಕವಾದ ನ್ಯಾಯಾಧೀಶರುಗಳಿಗೆ ಸಹ ಅಪವಾದಾತ್ಮಕ ಪ್ರಕರಣವೆಂದು ಪರಿಗಣಿಸಿ ನಿವೃತ್ತಿ ಉಪದಾನ (ಡಿ.ಸಿ.ಆರ್.ಜಿ) ಗರಿಷ್ಠ ರೂ. 3.50 ಲಕ್ಷಗಳಿಗೆ ನಿಗಧಿಪಡಿಸಲಾಗಿತ್ತು. ಹಾಗೂ ರಿಟ್ ಅರ್ಜಿ ಸಂ:11805/2007 ರಲ್ಲಿನ 13 ಅರ್ಜಿದಾರರು ಹಾಗೂ 3 ಮಂದಿ ನಿಧನ ಹೊಂದಿದ ನ್ಯಾಯಾಧೀಶರ ಕುಟುಂಬದ ಸದಸ್ಯರಿಗೆ ದಿನಾಂಕ: 04–08–2008ರ ಆದೇಶದಲ್ಲಿ ನ್ಯಾಯಾಲಯವು ನಿರ್ದೇಶಿಸಿರುವಂತೆ ಪಾವತಿಸಬೇಕಾದ ನಿವೃತ್ತಿ ಉಪದಾನದ ಮೇಲಿನ ಬಡ್ಡಿಯನ್ನು ಸಹ ಪಾವತಿಸಲು ಆದೇಶಿಸಲಾಗಿದೆ. ಮೇಲೆ (2)ರಲ್ಲಿ ಓದಲಾದ ದಿನಾಂಕ: 27–02–2009ರ ಮಹಾಲೇಖಪಾಲರ ಪತ್ರದಲ್ಲಿ ಸರ್ಕಾರದ ಆದೇಶದ ಸಂ:ಸಿಆಸುಇ 60 ಸೇಉನ್ಯಾ 2009, ದಿನಾಂಕ: 4–12–2009ರಲ್ಲಿ

ಆದೇಶಿಸಿರುವಂತೆ 13 ಅರ್ಜಿದಾರರು ಹಾಗೂ ನಿಧನ ಹೊಂದಿದ ನ್ಯಾಯಾಧೀಶರ ಕುಟುಂಬದ ಮೂವರು ಸದಸ್ಯರಿಗೆ ತಲಾ ರೂ. 1.00 ಲಕ್ಷ ನಿವೃತ್ತಿ ಉಪದಾನದ ವ್ಯತ್ಯಾಸದ ಮೊತ್ತವನ್ನು ದಿನಾಂಕ: 19-12-2008ರಂದು ಪಾವತಿಸಿರುವುದಾಗಿ ತಿಳಿಸಿ, ಅವರುಗಳಿಗೆ ತೀರ್ಪಿನ ದಿನಾಂಕದಿಂದ 60 ದಿನಗಳ ಮೇಲ್ಪಟ್ಟ ದಿನದಿಂದ ವಾಸ್ತವವಾಗಿ ಪಾವತಿಸಿದ ದಿನಾಂಕದವರೆಗೆ ಬಡ್ಡಿಯನ್ನು ಪಾವತಿಸಲು ಸೂಕ್ತವಾದ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂ:ಸಿಆಸುಇ 19 ಸೇಉಸ್ವಾ 2009, ಬೆಂಗಳೂರು, ದಿನಾಂಕ: 10ನೇ ಡಿಸೆಂಬರ್ 2009

ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರುಗಳಿಗೆ ರಿಟ್ ಅರ್ಜಿ ಸಂ: 11805/2007ರ ತೀರ್ಪಿನನ್ವಯ ನಿವೃತ್ತಿ ಉಪದಾನದ ವ್ಯತ್ಯಾಸದ ಮೊತ್ತದ ಮೇಲೆ ಈ ಕೆಳಕಂಡಂತೆ ಬಡ್ಡಿಯನ್ನು ಪಾವತಿಸಲು ಈ ಮೂಲಕ ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಕ್ರಮ ಸಂಖ್ಯೆ	ನಿವೃತ್ತ ನ್ಯಾಯಾಧೀಶರ ಹೆಸರು	ವ್ಯತ್ಯಾಸದ ಮೊತ್ತವನ್ನು ಪಾವತಿಸಿದ ದಿನಾಂಕ	ಪಾವತಿಸಬೇಕಾದ ಮೊತ್ತ
1	ಶ್ರೀ ಜಿ. ಪತ್ರಿ ಬಸವನಗೌಡ	19-12-2008	2097.00
2	ಶ್ರೀ ಎಸ್. ವೆಂಕಟರಾಮನ್	19-12-2008	2097.00
3	ಶ್ರೀ ಎಮ್.ಬಿ. ವಿಶ್ವನಾಥ್	19-12-2008	2097.00
4	ಶ್ರೀ ಬಿ.ಎನ್. ಮಲ್ಲಿಕಾರ್ಜುನ	19-12-2008	2097.00
5	ಶ್ರೀ ಎಸ್.ಬಿ. ಮಜಗೆ	19-12-2008	2[illegible]7.00
6	ಶ್ರೀ ಕೆ.ಆರ್. ಪ್ರಸಾದ್ ರಾವ್	19-12-2008	2097.00
7	ಶ್ರೀ ಎನ್.ಎಸ್. ವೀರಭದ್ರಯ್ಯ	19-12-2008	2097.00
8	ಶ್ರೀ ಸಿ.ಎನ್.ಎ. ರಾವ್	19-12-2008	2097.00
9	ಶ್ರೀ ಬಿ.ಎಸ್. ಶ್ರೀನಿವಾಸ ರಾವ್	19-12-2008	2097.00
10	ಶ್ರೀ ಎಸ್.ಆರ್. ವೆಂಕಟೇಶಮೂರ್ತಿ	19-12-2008	2097.00
11	ಶ್ರೀ ಎಮ್.ಎಮ್. ಮಿರ್ದೆ	19-12-2008	2097.00
12	ಶ್ರೀ ಎ.ಬಿ. ಮುರ್‌ಗೋಡ್	19-12-2008	2097.00
13	ಶ್ರೀ ಆರ್. ರಾಮಕೃಷ್ಣ	19-12-2008	2097.00
14	ಶ್ರೀಮತಿ ಪಾರ್ವತಿ ಸಾಂಗ್ಲದ್ W/o Late B.K. Sangalad	19-12-2008	
15	ಶ್ರೀ ಅರವಿಂದ ಸಾಂಗ್ಲದ್ S/o Late B.K. Sangalad	19-12-2009	2097.00
16	ಶ್ರೀ ಅನಂತ ಪದ್ಮನಾಭ ಸಾಂಗ್ಲದ್ S/o Late B.K. Sangalad	19-12-2009	

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2071-01-104-2-06- Interest on belated Payment of DCRG (Charged) ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಟಿಪ್ಪಣಿ ಸಂ:ಆಇ(ವೆ) 178 ಪಿಇಎಸ್-1/2009, ದಿನಾಂಕ: 19-08-2009 ರನ್ವಯ ಆರ್ಥಿಕ ಇಲಾಖೆಯ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಪಿ.ಆರ್. 2825

FINANCE SECRETARIAT

Sub: Chief Minister's Relief Fund Rules 1958-revision of-regarding.

Read: 1) Govt.Order No. FD 103 ACP 58 dated: 3-12-1958.
2) Govt.Order No. FD 35 BMS 78 dated: 12-9-1978.
3) Corrigendum No. FD 35 BMS 78 dated: 23-9-1978.
4) Govt.Order No. FD 35 BMS 78 dated: 4-11-1980.
5) Govt.Order No. FD 8 BMS 2007 dated: 29-10-2007.
6) Govt.Order No. FD 23 TAR 2009 dated: 07-10-2009.

Preamble:

In the Govt. Order read at (1) above, sanction has been accorded for constitution of 'Chief Minister's Relief Fund, As per the Chief Minister's Relief Fund Rules Prescribed vide Govt. Order read at (2) above, Contributions received from the public and Government Should be kept in P.D. Account to be operated by the Secretary to Chief Minister or an officer authorized by him. The Fund Collected is required to be utilized for the relief of Distress of persons at the discretion of the chief Minister. Additional instructions have also been issued in Govt. Orders read at (3), (4) and (5) above for operation of the above fund.

The "Calamity Relief Fund of Karnataka" has been opened under the head of account "8235-00-111-0-02 public Contribution to the Calamity Relief" to collect donations and Contributions received from public for Calamity Relief. In Govt. Order dated:7-10-2009 read at (6) above, it has been Clarified that the "Calamity Relief Fund of Karnataka" is administered and forms the part of the Chief Minister's Relief Fund. Inview of this Clarification it is found necessary to partially modify the existing chief Minister's Relief Fund Rules and hence this order.

Govt. Order No.FD 23 TAR 2009, Bangalore, Dated: 5th December 2009

1. The Chief Minister's Relief Fund Shall be under overall control of Chief Secretary to Govt.
2. The Contributions received for the Chief Minister's Relief Fund towards Calamity relief and the contributions received for the Chief Minister's Relief Fund towards relief of distress of Persons shall be kept Separately as per the procedure prescribed in Govt. Orders No. (i) FD 23 TAR 2009 dated: 29-09-2009 and (ii) FD 35 BMS 78 dated: 12-9-1978 respectively.
3. The Contributions received for the Chief Minister's Relief Fund towards Calamity relief shall be regulated as follows
   (i) The Secretary to Govt. (Disaster Management) Revenue Department is designated as the nodal officer for managing the receipts and expenditure out of the public Contributions to the Chief Minister's Relief Fund towards Calamity Relief. The Secretary to Chief Minister is designated as the nodal officer for managing the receipts and expenditure out of the Public contributions to the Chief Minister's Relief Fund towards relief of distress of Persons. Both these officers should assist the Chief Secretary in overall Control and Management of the Chief Minister's Relief Fund.
   (ii) The Secretary to Govt. (Disaster Management) Revenue Department may transfer funds out of "8235-00-111-0-02 public Contributions to the Calamity Relief" to the Concerned Deputy Commissioner with the approval of Chief Minister for payments to implementing agencies for services rendered or supplies made. After approval of the Chief Minister the Secretary to Govt. (Disaster Management), Revenue Department shall issue an Executive Order for transferring the funds to a Separate accounts as "public"

Contributions to the Calamity Relief Fund" below `Miscellaneous Deposit Account' of Deputy Commissioner.

(iii) The Deputy Commissioner shall draw the funds based on the Executive Order issued by the Revenue Department. The Claim shall be presented on a payee's Receipt debiting the head of account "8235-00-111-0-02 public Contributions to the Calamity Relief" and the Treasuries shall transfer the funds by means of TTR to the "Miscellaneous Deposit Account" of the Concerned Deputy Commissioner. The Deputy Commissioner have to open a Separate account as "public" Contributions to the Calamity Relief Fund" under their `Miscellaneous Deposit Account' for the purpose.

(iv) The Secretary to Govt. (Disaster Management) Revenue Department should review regularly and put up to Chief Secretary periodically the funds received and released, expenditure incurred and balance available with the Deputy Commissioners in their "Miscellaneous Deposit Accounts" the Deputy Commissioners will have to preserve the vouchers and produce them for scrutiny at the time of audit.

4. In respect of sanction, operation and maintenance of funds received for relief of distress of persons under the Chief Minister's Relief Fund, the Secretary to Chief Minister shall follow the instructions issued in Govt. Order No. FD 35 BMS 78 dated. 12-09-1978.

By Order and in the Name of the Governor of Karnataka

C. SHAMARAO

P.R. 2826

Under Secretary to Government

Finance Department, (FR & BCC)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ: ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ಗ್ರೂಪ್ 'ಸಿ', ಮತ್ತು ಗ್ರೂಪ್ 'ಡಿ' ನೌಕರರ ವೃಂದ ನಿರ್ವಹಣಾ ಪ್ರಾಧಿಕಾರ ರಚನೆ ಕುರಿತು.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 4 ಎಸ್‌ಟಿಆರ್ 2001 ದಿನಾಂಕ: 22–11–2001.

2) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 101 ಎಸ್‌ಆರ್‌ಡಿ 98 (ಪಿ) ದಿನಾಂಕ: 1–4–2004

3) ಸರ್ಕಾರದ ಆದೇಶ ಸಂಖ್ಯೆ: ಮಮಇ 422 ಎಸ್‌ಜೆಡಿ 2004 ದಿನಾಂಕ: 1–1–2008

4) ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆರವರ ಕಛೇರಿಯ ಪತ್ರ ಸಂಖ್ಯೆ: ನಿಅಕಇ/ಸಿಬ್ಬಂದಿ/ವೃಂ.ನಿ.ಪ್ರಾ/2009–10/2360 ದಿನಾಂಕ: 01–07–2009.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ: 22–11–2001ರ ಆದೇಶದಲ್ಲಿ ಸರ್ಕಾರವು ವರ್ಗಾವಣೆ ಬಗ್ಗೆ ಆದೇಶ ಹೊರಡಿಸಿ ವೃಂದ ನಿರ್ವಹಣಾ ಪ್ರಾಧಿಕಾರವನ್ನು ರಚನೆ ಬಗ್ಗೆ ಮಾರ್ಗಸೂಚಿಯನ್ನು ನೀಡಿರುತ್ತದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯನ್ನು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿ: 1–4–2004ರ ಅಧಿಸೂಚನೆಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಬೇರ್ಪಡಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿ: 1–1–2008ರ ಆದೇಶದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿ/ನೌಕರರನ್ನು ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆಯಲ್ಲಿ ಶಾಶ್ವತವಾಗಿ ವರ್ಗಾವಣೆ ಮುಖಾಂತರ ನೇಮಕ ಮಾಡಿ ಆದೇಶ ಹೊರಡಿಸಿದೆ.

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ದಿ: 1–7–2009ರ ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ರವರ ಪತ್ರದಲ್ಲಿ ಅಂಗವಿಕಲ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಗೆ ವೃಂದ ನಿರ್ವಹಣಾ ಪ್ರಾಧಿಕಾರವನ್ನು ರಚಿಸುವುದು ಅವಶ್ಯಕವಾಗಿರುತ್ತದೆಂದು, ವೃಂದ ನಿರ್ವಹಣಾ ಪ್ರಾಧಿಕಾರದಲ್ಲಿ ಅಂಗವಿಕಲ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ನಿರ್ದೇಶಕರನ್ನು ಅಧ್ಯಕ್ಷರನ್ನಾಗಿ, ಉಪನಿರ್ದೇಶಕರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಂಟಿ ನಿರ್ದೇಶಕರು (ಆಡಳಿತ) ಇವರನ್ನು ಸದಸ್ಯರನ್ನಾಗಿ ನೇಮಿಸುವಂತೆ ಕೋರಿರುತ್ತಾರೆ.

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ರವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ನಿರ್ದೇಶಕರು ಅಂಗವಿಕಲ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯಲ್ಲಿನ ಗ್ರೂಪ್ 'ಸಿ' ಹಾಗೂ ಗ್ರೂಪ್ 'ಡಿ' ವೃಂದದ ನೌಕರರುಗಳ ವೃಂದ ನಿರ್ವಹಣಾ ಪ್ರಾಧಿಕಾರವಾಗಿರುವುದರಿಂದ ನಿರ್ದೇಶಕರ ಅಧ್ಯಕ್ಷತೆಯಲ್ಲಿ ವೃಂದ ನಿರ್ವಹಣಾ ಪ್ರಾಧಿಕಾರ ಸಮಿತಿ ರಚಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಮಮಇ 386 ಎಸ್‌ಜಿಡಿ 2009 (2) ಬೆಂಗಳೂರು, ದಿನಾಂಕ: 30ನೇ ನವೆಂಬರ್ 2009

ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯಲ್ಲಿನ ಗ್ರೂಪ್ 'ಸಿ' ಹಾಗೂ ಗ್ರೂಪ್ 'ಡಿ' ನೌಕರರ ವೃಂದದ ನೌಕರರುಗಳ ವರ್ಗಾವಣೆಗೆ ಸಂಬಂಧಿಸಿದಂತೆ, ನೌಕರರುಗಳ ಸೂಕ್ತತೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಇಲಾಖಾ ವೃಂದ ನಿರ್ವಹಣಾ ಪ್ರಾಧಿಕಾರವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ರಚಿಸಿದೆ.

1.	ನಿರ್ದೇಶಕರು ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ	ಅಧ್ಯಕ್ಷರು
2.	ಜಂಟಿ ನಿರ್ದೇಶಕರು (ಆಡಳಿತ), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,	ಸದಸ್ಯರು
3.	ಉಪನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಕಮಲಮ್ಮ

ಪಿ.ಆರ್. 2827

ಸರ್ಕಾರದ ಅಧೀನ ಕಾರ್ಯದರ್ಶಿ –2

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 460 ಮೈಅಪ್ರಾ 2009, ಬೆಂಗಳೂರು, ದಿನಾಂಕ: 20ನೇ ನವೆಂಬರ್ 2009

ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಯುಡಿ 120 ಟಿಟಿಪಿ 84, ದಿನಾಂಕ: 26.4.1984 ರಲ್ಲಿ ಮೈಸೂರು ನಗರದ ಸ್ಥಳೀಯ ಯೋಜನಾ ಪ್ರದೇಶವನ್ನು ಮತ್ತು ನಂಜನಗೂಡು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶವನ್ನು ಒಂದುಗೂಡಿಸಿದ್ದು. ಸರ್ಕಾರದ ಅಧಿಸೂಚನೆ ಸಂಖ್ಯೆ: ವನಇ 877 ಟಿಟಿಪಿ 87(2), ದಿನಾಂಕ: 18.8.1988 ರಲ್ಲಿ ಮೈಸೂರು ತಾಲ್ಲೂಕಿನ 33 ಗ್ರಾಮಗಳು ನಂಜನಗೂಡು ತಾಲ್ಲೂಕಿನ 5 ಗ್ರಾಮಗಳು ಮತ್ತು ಶ್ರೀರಂಗಪಟ್ಟಣದ 3 ಗ್ರಾಮಗಳನ್ನೊಳಗೊಂಡ ಸ್ಥಳೀಯ ಯೋಜನಾ ಪ್ರದೇಶವನ್ನು "Mysore-Nanjanagud ENVIRONS" ಎಂದು ಕರೆಯಲಾಗಿದೆ. ಸದರಿ ಅಧಿಸೂಚನೆಯ ಅನುಬಂಧ–I ರಲ್ಲಿ ದೇವರಸನಹಳ್ಳಿ ಗ್ರಾಮವು ಬಿಟ್ಟು ಹೋಗಿದ್ದು, ಇನ್ನು ಮುಂದೆ ಸದರಿ ದೇವರಸನಹಳ್ಳಿ ಗ್ರಾಮವನ್ನು ಅನುಬಂಧ–I ರಲ್ಲಿ ಸೇರಿಸಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸಿ.ಟಿ. ನಾರಾಯಣಸ್ವಾಮಿ

ಪಿ.ಆರ್. 2735

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಆಕುಕ 353 ಪಿಟಿಡಿ 2009, ಬೆಂಗಳೂರು, ದಿನಾಂಕ: 2ನೇ ಡಿಸೆಂಬರ್ 2009

ಸರ್ಕಾರಿ ಆದೇಶ ಸಂಖ್ಯೆ: ಆಕುಕ 353 ಪಿಟಿಡಿ 2009, ದಿನಾಂಕ: 16.10.2009ರ ಆದೇಶ ಭಾಗದ 3ನೇ ಸಾಲಿನ ಮೆರಿಟ್ ಪದದ ನಂತರ "ಸರ್ಕಾರಿ ಆದೇಶ ಸಂಖ್ಯೆ: ಆಕುಕ 18 ಪಿಟಿಡಿ 2006 ದಿ:19.1.2006 ರಲ್ಲಿ ಹಾಗೂ ಸಿಸಿಐಎಂ ರೆಗ್ಯೂಲೇಷನ್ 2005 ಮತ್ತು ಕ್ಲಾಸ್ IV(4) & (5) ರಲ್ಲಿ ನಿಗದಿಪಡಿಸಿರುವ ಮೆರಿಟ್‌ನಂತೆ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್. ಮಹಾಲಕ್ಷ್ಮಮ್ಮ

ಪಿ.ಆರ್. 2743

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ).

ಕಂದಾಯ ಸಚಿವಾಲಯ

ಭೂ ಸ್ವಾಧೀನ ಕಾಯಿದೆ ಕಲಂ 6(1)ನೇ ಪ್ರಕರಣದ ಮೇರೆಗಿನ ಅಧಿಸೂಚನೆ

ಕ್ರಮಾಂಕ:ಕಂ.ಇ.29 ಭೂ ಸ್ವಾ ಶಿ 2009, ದಿನಾಂಕ: 9ನೇ ನವೆಂಬರ್ 2009

ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆರವರು ದಿನಾಂಕ: 22.01.2009ರ ಕರ್ನಾಟಕ ರಾಜ್ಯಪತ್ರದ ಭಾಗ-6 ಪುಟ ಸಂಖ್ಯೆ: 63ರಿಂದ 64ರಲ್ಲಿ ಪ್ರಕಟವಾದ ಅಧಿಸೂಚನೆ ಕ್ರಮಾಂಕ:ಆರ್(3)ಎಲ್ಎಕ್ಯೂ.ಎಸ್ಆರ್.02/2008-09 ದಿನಾಂಕ: 30.12.2008ರ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ, ಸೊರಬ ತಾಲ್ಲೂಕ್ ಹಿರೇಶಕುನ ಗ್ರಾಮದ ಕೆರೆ ಆಧುನೀಕರಣ (ಸಂಪರ್ಕ ರಸ್ತೆ) ಸಲುವಾಗಿ ಬೇಕಾಗಬಹುದೆಂದು ಅಧಿಸೂಚಿಸಿರುತ್ತಾರೆ.

ಕರ್ನಾಟಕ ಸರ್ಕಾರದವರು 1961ನೇ ಸಾಲಿನ ಕರ್ನಾಟಕ ಅಧಿನಿಯಮ 17ರ ತಿದ್ದುಪಡಿಯಾದ 1904ನೇ ಸಾಲಿನ ಭೂ ಸಂಗ್ರಹಣಾ ಅಧಿನಿಯಮ 1894ನೇ ಸಾಲಿನ ಕೇಂದ್ರ ಅಧಿನಿಯಮದ ಪ್ರಕರಣ 5(ಎ)ರ ಉಪ ಪ್ರಕರಣ (2) ಮತ್ತು 6(1-ಎ) ಪ್ರಕರಣದ ಮೇರೆಗೆ ಉಪವಿಭಾಗಾಧಿಕಾರಿಗಳು, ಸಾಗರ ರವರು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿದ ನಂತರ ಸದರಿ ಜಮೀನುಗಳನ್ನು ಮೇಲೆ ನಿರ್ದಿಷ್ಟಪಡಿಸಲಾದ ಉದ್ದೇಶಕ್ಕೆ ವಶಪಡಿಸಿಕೊಳ್ಳಲಾಗಿದೆ ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

ಸದರಿ ಭೂ ಸಂಗ್ರಹಣ ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಸದರಿ ಜಮೀನು ಮೇಲಿನ ಉದ್ದೇಶಕ್ಕಾಗಿ ಬೇಕಾಗಿರುವುದರಿಂದ ಈ ಮೂಲಕ ಘೋಷಿಸಲಾಗಿದೆ.

ಸದರಿ ಭೂ ಸಂಗ್ರಹಣ ಅಧಿನಿಯಮದ 3ನೇ ಪ್ರಕರಣದ(ಸಿ) ಖಂಡದ ಮೇರೆಗೆ ಉಪವಿಭಾಗಾಧಿಕಾರಿಗಳು, ಸಾಗರ ಉಪವಿಭಾಗ, ಸಾಗರ ರವರನ್ನು ಸದರಿ ಜಮೀನಿನಲ್ಲಿ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು, ಜಿಲ್ಲಾಧಿಕಾರಿಗಳವರ ಪ್ರಶಾಸನ ಕಾರ್ಯಕ್ರಮಗಳನ್ನು ನಿರ್ವಹಿಸುವಂತೆ ಈ ಮೂಲಕ ನಿಯೋಜಿಸಲಾಗಿದೆ. ಜಮೀನಿನ ಅಧಿಕೃತ ಸಂಗ್ರಹಣೆಗಾಗಿ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮ 7ನೇ ಪ್ರಕರಣದ ಮೇರೆಗೆ ನಿರ್ದೇಶಿಸಲಾಗಿದೆ.

ಸದರಿ ಜಮೀನುಗಳ ನಕ್ಷೆಯನ್ನು ಉಪವಿಭಾಗಾಧಿಕಾರಿಗಳು, ಸಾಗರ ಉಪವಿಭಾಗ, ಸಾಗರ ರವರ ಕಾರ್ಯಾಲಯದಲ್ಲಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ: ಶಿವಮೊಗ್ಗ **ತಾಲ್ಲೂಕ್: ಸೊರಬ** **ಹೋಬಳಿ:ಕಸಬಾ** **ಗ್ರಾಮ: ಹಿರೇಶಕುನ**

ಕ್ರ. ಸಂ.	ಖಾತೆದಾರರ / ಹಿಡುವಳಿದಾರರ ಹೆಸರು ಶ್ರೀಯುತರುಗಳಾದ :	ಅನುಭವದಾರರ ಹೆಸರು ಶ್ರೀಯುತರುಗಳಾದ :	ಸ.ನಂ.	ತರಹೆ	ಚಕ್ಕುಬಂದಿ				ಭೂ ಸ್ವಾಧೀನದ ಜಮೀನಿನ ವಿವರ	
					ಪೂರ್ವ ಸ.ನಂ.	ಪಶ್ಚಿಮ ಸ.ನಂ.	ಉತ್ತರ ಸ.ನಂ.	ದಕ್ಷಿಣ ಸ.ನಂ.	ವಿಸ್ತೀರ್ಣ ಎ.ಗುಂ.	ಆಕಾರ ರೂ.ಪೈ.
01	ಬೆದವಟ್ಟಿ ನಾಗಪ್ಪ ಬಿನ್ ಸಿದ್ದಪ್ಪ	ಬೆದವಟ್ಟಿ ನಾಗಪ್ಪ ಬಿನ್ ಸಿದ್ದಪ್ಪ	61	ಖುಷ್ಕಿ	62	61/ಪಿ	61/1ಪಿ	61	0.21	0.16
02	ಹೆಚ್.ಮಲ್ಲಿಕಾರ್ಜುನಪ್ಪ ಬಿನ್ ರುದ್ರಪ್ಪ	ಹೆಚ್.ಮಲ್ಲಿಕಾರ್ಜುನಪ್ಪ ಬಿನ್ ರುದ್ರಪ್ಪ	62	ಖುಷ್ಕಿ	62	61	61	66	0.07	0.06
03	ಸುಶೀಲಮ್ಮ ಕೋಂ ಶಿವಾನಂದಪ್ಪ	ಸುಶೀಲಮ್ಮ ಕೋಂ ಶಿವಾನಂದಪ್ಪ	62	ಸ.ನೀ. ತರಿ	62	61ಕೆರೆ	61ಕೆರೆ	62ಪಿ	0.14	0.11

ಕ್ರ. ಸಂ.	ಖಾತೆದಾರರ / ಹಿಡುವಳಿದಾರರ ಹೆಸರು ಶ್ರೀಯುತರುಗಳಾದ :	ಅನುಭವದಾರರ ಹೆಸರು ಶ್ರೀಯುತರುಗಳಾದ :	ಸ.ನಂ.	ತರಹೆ	ಚಕ್ಕುಬಂದಿ				ಭೂ ಸ್ವಾಧೀನದ ಜಮೀನಿನ ವಿವರ	
					ಪೂರ್ವ ಸ.ನಂ.	ಪಶ್ಚಿಮ ಸ.ನಂ.	ಉತ್ತರ ಸ.ನಂ.	ದಕ್ಷಿಣ ಸ.ನಂ.	ವಿಸ್ತೀರ್ಣ ಎ.ಗುಂ.	ಆಕಾರ ರೂ.ಪೈ.
04	ಹೇಮಚಂದ್ರ ಸಂಕೀ ಬಿನ್ ಸಂಕೀ ಮಂಜಪ್ಪ	ಹೇಮಚಂದ್ರ ಸಂಕೀ ಬಿನ್ ಸಂಕೀ ಮಂಜಪ್ಪ	67	ಸ.ನೀ. ತರಿ	67	117ಕೆರೆ	117ಕೆರೆ	67	1.09	0.84
05	ಗೌಡ ಉಂಬಳಿ ಜಮೀನು – ಸರ್ಕಾರಿ – ರಾಮಚಂದ್ರಪ್ಪ ಬಿನ್ ಕುಳವಳ್ಳಿ ಕಲ್ಲಪ್ಪ	ಗೌಡ ಉಂಬಳಿ ಜಮೀನು – ಸರ್ಕಾರಿ – ರಾಮಚಂದ್ರಪ್ಪ ಬಿನ್ ಕುಳವಳ್ಳಿ ಕಲ್ಲಪ್ಪ	118/ಪಿ	ಸ.ನೀ. ತರಿ	67/ಪಿ	118/ಪಿ	118/ಪಿ	67	0.11	1.35
06	ಗುರುನಾಥ ಭಟ್ಟ ಬಿನ್ ರಾಮಭಟ್ಟ	ಕೊಂಡಿಕಾರ ತುಳಸಮ್ಮ ಕೋಂ ಸಣ್ಣಪ್ಪ	75/1	ಸ.ನೀ. ತರಿ	75/1ಇಪಿ	75/2	75/2	75/1ಇಪಿ	0.01	0.13
07	ಕೊಂಡಿಕಾರ ಕೆರಿಯಪ್ಪ ಬಿನ್ ಬಂಗಾರಪ್ಪ	ಕೊಂಡಿಕಾರ ಕೆರಿಯಪ್ಪ ಬಿನ್ ಬಂಗಾರಪ್ಪ	75/1	ಸ.ನೀ. ತರಿ	117/ಪಿ ಕೆರೆ	75/2	75/2	75/1ಡಿಪಿ 75/1ಇ	0.10	1.33
08	ಕೊಂಡಿಕಾರ ಮಹಾದೇವಪ್ಪ ಬಿನ್ ಬಂಗಾರಪ್ಪ	ಕೊಂಡಿಕಾರ ಮಹಾದೇವಪ್ಪ ಬಿನ್ ಬಂಗಾರಪ್ಪ	75/2	ಭೂ ಪ. ಪ್ರದೇಶ	75/1	114	114	75/2ಪಿ	0.06	0.70
09	ಗುತ್ತಿಮಲ್ಲಪ್ಪ @ ಜಿ.ಮಲ್ಲಿಕಾರ್ಜುನಪ್ಪ ಬಿನ್ ರೇವಪ್ಪ	ಗುತ್ತಿಮಲ್ಲಪ್ಪ @ ಜಿ.ಮಲ್ಲಿಕಾರ್ಜುನಪ್ಪ ಬಿನ್ ರೇವಪ್ಪ	118	ಸ.ನೀ. ತರಿ	66	118/ಪಿ	118/ಪಿ	118	0.10	0.68
10	ಗುತ್ಯಪ್ಪ ಬಿನ್ ಗಂಗಪ್ಪ	ಗುತ್ಯಪ್ಪ ಬಿನ್ ಗಂಗಪ್ಪ	66	ಖುಷ್ಕಿ	61	62	118	62	0.05	0.64
		ಒಟ್ಟು :							3.14	

ಖುಷ್ಕಿ: 0.33.ಎ.	ಸ.ನೀ.ತರಿ: 2.15 ಎ.	ಭೂ ಪರಿವರ್ತಿತ ಪ್ರದೇಶ: 0.06 ಎ.	ಒಟ್ಟು: 3.14ಎ.

ಪಿ.ಆರ್. 562

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ವೆಂಕಟೇಶಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ. ಸ್ವಾ–2 ಮತ್ತು ಪುನರ್ವಸತಿ)

ಕಂದಾಯ ಸಚಿವಾಲಯ

ಭೂ ಸ್ವಾಧೀನ ಕಾಯಿದೆ ಕಲಂ 6(1)ನೇ ಪ್ರಕರಣದ ಮೇರೆಗಿನ ಅಧಿಸೂಚನೆ

ಕಮಾಂಕ:ಕಂ.ಇ.30 ಭೂ ಸ್ವಾ ಶಿ 2009, ದಿನಾಂಕ: 9ನೇ ನವೆಂಬರ್ 2009

ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆರವರು ದಿನಾಂಕ: 23.04.2009ರ ಕರ್ನಾಟಕ ರಾಜ್ಯಪತ್ರದ ಭಾಗ-6 ಪುಟ ಸಂಖ್ಯೆ: 422ರಿಂದ 424ರಲ್ಲಿ ಪ್ರಕಟವಾದ ಅಧಿಸೂಚನೆ ಕಮಾಂಕ:ಆರ್(3)ಎಲ್ಎಕ್ಯೂ.ಎಸ್ಆರ್.06/2008-09 ದಿನಾಂಕ: 29.03.2009ರ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ, ಸಾಗರ ಪಟ್ಟಣದ ಕುಡಿಯುವ ನೀರು ಸರಬರಾಜು ಯೋಜನೆ ಸಲುವಾಗಿ ಬೇಕಾಗಬಹುದೆಂದು ಅಧಿಸೂಚಿಸಿರುತ್ತಾರೆ.

ಕರ್ನಾಟಕ ಸರ್ಕಾರದವರು 1961ನೇ ಸಾಲಿನ ಕರ್ನಾಟಕ ಅಧಿನಿಯಮ 17ರ ತಿದ್ದುಪಡಿಯಾದ 1904ನೇ ಸಾಲಿನ ಭೂ ಸಂಗಹಣಾ ಅಧಿನಿಯಮ 1894ನೇ ಸಾಲಿನ ಕೇಂದ್ರ ಅಧಿನಿಯಮದ ಪಕರಣ 5(ಎ)ರ ಉಪ ಪಕರಣ (2) ಮತ್ತು 6(1-ಎ) ಪಕರಣದ ಮೇರೆಗೆ ಉಪವಿಭಾಗಾಧಿಕಾರಿಗಳು, ಸಾಗರ ರವರು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿದ ನಂತರ ಸದರಿ ಜಮೀನುಗಳನ್ನು ಮೇಲೆ ನಿರ್ಧಿಷ್ಟಪಡಿಸಲಾದ ಉದ್ದೇಶಕ್ಕೆ ವಶಪಡಿಸಿಕೊಳ್ಳಲಾಗಿದೆ ಎಂಬುದಾಗಿ ಅಭಿಪಾಯಪಟ್ಟಿದ್ದಾರೆ.

ಸದರಿ ಭೂ ಸಂಗಹಣ ಅಧಿನಿಯಮದ 6ನೇ ಪಕರಣದ ಮೇರೆಗೆ ಸದರಿ ಜಮೀನು ಮೇಲಿನ ಉದ್ದೇಶಕ್ಕಾಗಿ ಬೇಕಾಗಿರುವುದರಿಂದ ಈ ಮೂಲಕ ಘೋಷಿಸಲಾಗಿದೆ.

ಸದರಿ ಭೂ ಸಂಗಹಣ ಅದಿನಿಯಮದ 3ನೇ ಪ್ರಕರಣದ(ಸಿ) ಖಂಡದ ಮೇರೆಗೆ ಉಪವಿಭಾಗಾಧಿಕಾರಿಗಳು, ಸಾಗರ ಉಪವಿಬಾಗ, ಸಾಗರ ರವರನ್ನು ಸದರಿ ಜಮೀನಿನಲ್ಲಿ ಮುಂದಿನ ಎಲ್ಲಾ ಕಾನೂನು ಕಮಗಳನ್ನು, ಜಿಲ್ಲಾಧಿಕಾರಿಗಳವರ ಪಶಾಸನ ಕಾರ್ಯಕಮಗಳನ್ನು ನಿರ್ವಹಿಸುವಂತೆ ಈ ಮೂಲಕ ನಿಯೋಜಿಸಲಾಗಿದೆ. ಜಮೀನಿನ ಅಧಿಕೃತ ಸಂಗ್ರಹಣೆಗಾಗಿ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮ 7ನೇ ಪಕರಣದ ಮೇರೆಗೆ ನಿರ್ದೇಶಿಸಲಾಗಿದೆ.

ಸದರಿ ಜಮೀನುಗಳ ನಕ್ಷೆಯನ್ನು ಉಪವಿಭಾಗಾಧಿಕಾರಿಗಳು, ಸಾಗರ ಉಪವಿಭಾಗ, ಸಾಗರ ರವರ ಕಾರ್ಯಾಲಯದಲ್ಲಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ: ಶಿವಮೊಗ್ಗ **ತಾಲ್ಲೂಕ್:** ಸಾಗರ **ಹೋಬಳಿ:**ಕಸಬಾ **ಗ್ರಾಮ:** ಯಲಗಳಲೆ, ಬಾಳಗೋಡು, ಮರಸ & ಜಂಬಗಾರು

ಕ್ರ. ಸಂ.	ಖಾತೆದಾರರ / ಹಿಡುವಳಿದಾರರ ಹೆಸರು ಶ್ರೀಯುತರುಗಳಾದ :	ಅನುಭವದಾರರ ಹೆಸರು ಶ್ರೀಯುತರುಗಳಾದ :	ಸ.ನಂ.	[illegible]	ಚಕ್ಕುಬಂದಿ				ಭೂ ಸ್ವಾಧೀನದ ಜಮೀನಿನ ವಿವರ	
					ಪೂರ್ವ ಸ.ನಂ.	ಪಶ್ಚಿಮ ಸ.ನಂ.	ಉತ್ತರ ಸ.ನಂ.	ದಕ್ಷಿಣ ಸ.ನಂ.	ವಿಸ್ತೀರ್ಣ ಎ.ಗುಂ.	ಆಕಾರ ರೂ.ಪೈ.
				1. ಯಲಗಳಲೆ:						
01	ಕೆ.ನಾರಾಯಣಪ್ಪ ಬಿನ್ ವೀರಪ್ಪ	ಕೆ.ನಾರಾಯಣಪ್ಪ ಬಿನ್ ವೀರಪ್ಪ	120/1	ಖುಷ್ಕಿ	120/2	93	ನದಿ	120/2	1.20	0.36
				2. ಬಾಳಗೋಡು:						
02	ನಾರಾಯಣಪ್ಪ ಬಿನ್ ಗಾಮಪ್ಪ	ನಾರಾಯಣಪ್ಪ ಬಿನ್ ಗಾಮಪ್ಪ	38	ತರಿ	38/1	47	38/1	40	0.08	1.13
03	ಕೆರಿಯಮ್ಮ ಕೋಂ ನಾರಾಯಣಪ್ಪ	ಕೆರಿಯಮ್ಮ ಕೋಂ ನಾರಾಯಣಪ್ಪ	48	ತರಿ	38	48	38	48	0.08	1.00
04	ದಶರಥ ಬಿನ್ ಮಹಾದೇವಪ್ಪ	ದಶರಥ ಬಿನ್ ಮಹಾದೇವಪ್ಪ	48	ತರಿ	38/1	48	38	39	0.10	1.25
				ಒಟ್ಟು :					**0.26**	

ಕ್ರ. ಸಂ.	ಖಾತೆದಾರರ / ಹಿಡುವಳಿದಾರರ ಹೆಸರು ಶ್ರೀಯುತರುಗಳಾದ :	ಅನುಭವದಾರರ ಹೆಸರು ಶ್ರೀಯುತರುಗಳಾದ :	ಸ.ನಂ.	ಬಗೆ	ಚಕ್ಕುಬಂದಿ				ಭೂ ಸ್ವಾಧೀನದ ಜಮೀನಿನ ವಿವರ	
The services of Sri D. Randeep, IAS (KN 2006), Commissioner, City Municipal Corporation, Gulbarga, are withdrawn from Urban Development Department with immediate effect and posted until further orders as Deputy Secretary to Government, Finance Department vice Sri Vipul Bansa, IAS posted as Deputy Secretary to Government, Finance Department (B&R).

By Order and in the name of the Governor of Karnataka,

P.R. 8

K.G. ANANTHA

Under Secretary to Government,

Department of Personnel and Administrative Reforms (Services-I)

NOTIFICATION

No. DPAR 444 SAS 2009, Bangalore, Dated: 15th December, 2009

Dr. V. Chandrasekar, IAS (KN 99), Director of Backward Classes Welfare is transferred with immediate effect & his services are placed at the disposal of Commerce & Industries Department until further orders for being posted as Managing Director, Hutti, Gold Mines Limited, Bangalore relieving Sri N. Sriraman, IAS of additional charge.

The Commissioner, Social Welfare Department, Bangalore is placed in additional charge of the post of Commissioner of Backward Classes Welfare with immediate effect & until further orders vice Dr., V. Chandrasekar, IAS transferred.

By Order and in the name of the Governor of Karnataka,

P.R. 9

K.G. ANANTHA

Under Secretary to Government,

Department of Personnel and Administrative Reforms (Services-I)

NOTIFICATION

No. DPAR 457 SAS 2009, Bangalore, Dated: 15th December, 2009

Dr. H.V. Parshwanath, IAS (KN 92), waiting for posting is posted with immediate effect & until further orders as Registrar of Co-operative Societies, Bangalore in the existing vacancy.

By Order and in the name of the Governor of Karnataka,

P.R. 10

K.G. ANANTHA

Under Secretary to Government,

Department of Personnel and Administrative Reforms (Services-I)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 223 ಆಸೇವ 2009, ಬೆಂಗಳೂರು, ದಿನಾಂಕ: 23ನೇ ಡಿಸೆಂಬರ್, 2009

ಈ ಕೆಳಕಂಡ ಕೆ.ಎ.ಎಸ್ (ಆಯ್ಕೆ ಶ್ರೇಣಿ/ಹಿರಿಯ ಶ್ರೇಣಿ) ಅಧಿಕಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗಳಿಗೆ ವರ್ಗಾಯಿಸಿ ನೇಮಿಸಿದೆ.

ಕ್ರ.ಸಂ	ಅಧಿಕಾರಿಯ ಹೆಸರು ಮತ್ತು ಪ್ರಸ್ತುತ ಹುದ್ದೆ ಶ್ರೀ/ಶ್ರೀಮತಿ	ವರ್ಗಾಯಿಸಿ ನೇಮಿಸಲಾದ ಹುದ್ದೆ
1	ರಾಮಾಂಜನೇಯ, ಆಯ್ಕೆ ಶ್ರೇಣಿ, ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾದಂಡಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ	ಮುಖ್ಯ ಆಡಳಿತಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು-ಖಾಲಿ ಹುದ್ದೆ
2	ಸಿ.ಎಂ. ನೂರ್ ಮನ್ಸೂರ್, ಹಿರಿಯ ಶ್ರೇಣಿ, ಯೋಜನಾಧಿಕಾರಿ, ಕರ್ನಾಟಕ ಬಾಲವಿಕಾಸ ಅಕಾಡಮಿ, ಧಾರವಾಡ	ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ-ಶ್ರೀ ರಾಮಾಂಜನೇಯ ಇವರ ಸ್ಥಾನದಲ್ಲಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 11

ಎಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2)

ಅಧಿಸೂಚನೆ

ಸಂಖ್ಯೆ: ಸಿಆಸುಇ 245 ಆಸೇವ 2009, ಬೆಂಗಳೂರು, ದಿನಾಂಕ: 22ನೇ ಡಿಸೆಂಬರ್, 2009

ಶ್ರೀಮತಿ ಗಂಗೂಬಾಯಿ ಆರ್. ಮಾನ್‌ಕರ್, ಕೆ.ಎ.ಎಸ್ (ಕಿರಿಯ ಶ್ರೇಣಿ) ಅಧಿಕಾರಿ, ಹಾಲಿ ಉಪವಿಭಾಗಾಧಿಕಾರಿ, ಕುಮಟಾ ಉಪವಿಭಾಗ, ಉತ್ತರ ಕನ್ನಡ ಜಿಲ್ಲೆ ಇವರನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಯೋಜನಾ ವ್ಯವಸ್ಥಾಪಕರು (ಅಭಿವೃದ್ಧಿ), ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಹುಬ್ಬಳ್ಳಿ-ಖಾಲಿ ಹುದ್ದೆಗೆ ವರ್ಗಾಯಿಸಿ ನೇಮಿಸಲು ಇವರ ಸೇವೆಯನ್ನು ವಸತಿ ಇಲಾಖೆಯ ವಶಕ್ಕೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 12

ಎಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2)

ಇಂಧನ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಎನ್ 183 ಸಮನ್ವಯ 2009, ಬೆಂಗಳೂರು, ದಿನಾಂಕ: 24ನೇ ಡಿಸೆಂಬರ್, 2009

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು ಇದರ ಮೆಮೊರ್‍ಯಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 22 (1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಐ.ಎಸ್.ಎನ್. ಪ್ರಸಾದ್ ಭಾ.ಆ.ಸೇ (ಕೆಎನ್-86) ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು ಇವರನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ನಿರ್ದೇಶಕರ ಮಂಡಳಿಯ ನಿರ್ದೇಶಕರನ್ನಾಗಿ (ಶ್ರೀ ವಿ.ಪಿ. ಬಳಿಗಾರ್ ಭಾ.ಆ.ಸೇ (ಕೆ.ಎನ್-80) ಇವರ ವರ್ಗಾವಣೆಯಿಂದ ತೆರವಾದ ಸ್ಥಳದಲ್ಲಿ) ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 13

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

HIGH COURT OF KARNATAKA,

NOTIFICATION

LCA-II 299/2009, Bangalore, Dated: 18th December, 2009

PART-I

In exercise of the powers conferred by Article 235 of the Constitution of India read with Rule 2 of the Karnataka Sub-Ordinate Courts (Ministerial and Other Posts) (Recruitment) Rules, 1982. the High Court of Karnataka is pleased to promote Smt. Rajivi Bai. Sheristedar, District & Sessions Court Udupi, to officiate as Chief Administrative Officer in the judicial department purely on temporary basis in the Pay Scale of Rs .11400-300-12300-350-14400-400-16800-450-19500-525-21600 in the existing vacancy and posted her to the vacancy caused due to the death of late K.G. Jayaram, CAO of Shimoga Unit with effect from the date she assumes charge.

By Order of the High Court,

P.R. 14

A.P. MURARI

Registrar (Vigilance)

ಶಿಕ್ಷಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಡಿ 93 ಡಿಸಿಇ 2007, ಬೆಂಗಳೂರು, ದಿನಾಂಕ: 17ನೇ ಡಿಸೆಂಬರ್, 2009

ಕಾಲೇಜು ಶಿಕ್ಷಣ ಇಲಾಖೆಯ ಈ ಕೆಳಕಂಡ ಗ್ರೇಡ್-1 ಪ್ರಾಂಶುಪಾಲರುಗಳಿಗೆ ಗ್ರೇಡ್-2 ಪ್ರಾಂಶುಪಾಲರ ಹುದ್ದೆಗೆ ರೂ. 16400-22400 ಯುಜಿಸಿ ವೇತನ ಶ್ರೇಣಿಯಲ್ಲಿ ಕೂಡಲೇ ಜಾರಿಗೆ ಬರುವಂತೆ ಸ್ಥಾನಪನ್ನ ಪದೋನ್ನತಿ ನೀಡಿ ಅವರ ಹೆಸರಿನ ಮುಂದೆ ನಮೂದಿಸಲಾದ ಸ್ಥಳ/ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

ಕ್ರ.ಸಂ	ಹೆಸರು ಮತ್ತು ಕಾರ್ಯ ನಿರ್ವಹಿಸುತ್ತಿರುವ ಸ್ಥಳ	ಪದೋನ್ನತಿ ನಂತರ ಸ್ಥಳ ನಿಯುಕ್ತಿಗೊಳಿಸಿರುವ ಸ್ಥಳ
1	ಶ್ರೀ ಇಬ್ರಾಹಿಂ ಬ್ಯಾರಿ, ಜಂಟಿ ನಿರ್ದೇಶಕರ ಕಛೇರಿ, ಮಂಗಳೂರು	ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಸಾಗರ, ಶಿವಮೊಗ್ಗ ಜಿಲ್ಲೆ
2	ಶ್ರೀ ಶಿಂಧೆ, ಬಿ.ಆರ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಫ್ಜಲ್‌ಪುರ, ಗುಲ್ಬರ್ಗಾ	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಡೂರು ಚಿಕ್ಕಮಗಳೂರು ಜಿಲ್ಲೆ.
3	ಶ್ರೀ ಕುಮಾರ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪುರಂ, ಬೆಂಗಳೂರು	ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಮಂಡ್ಯ
4	ಶ್ರೀ ಲಕ್ಷ್ಮೀನಾರಾಯಣ ಹೆಚ್.ವಿ. ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ	ಸರ್ಕಾರಿ ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ಹಾಸನ ಇಲ್ಲಿಯೇ ಮುಂದುವರೆಸಲಾಗಿದೆ.
5	ಶ್ರೀ ನಾವಿ ಎಸ್.ಜಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಡಿಗೇರಿ, ಧಾರವಾಡ	ಸರ್ಕಾರಿ ಬಾಲಕರ ಪ್ರಥಮ ದರ್ಜೆ ಕಾಲೇಜು, ಚಿಂತಾಮಣಿ,

ಬಡ್ತಿ ನೀಡಿ ಸೂಚಿಸಲಾದ ಸ್ಥಳ/ಹುದ್ದೆಯಲ್ಲಿ ಮೇಲ್ಕಂಡ ಪ್ರಾಂಶುಪಾಲರುಗಳು ಈ ಆದೇಶ ತಲುಪಿದ 15 ದಿವಸಗಳೊಳಗಾಗಿ ಕಾರ್ಯಭಾರ ವರದಿ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಬಡ್ತಿಯು ತಂತಾನೇ ರದ್ದುಗೊಳ್ಳುತ್ತದೆ.

ಈ ಕುರಿತು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಬಾಕಿ ಇರುವ ಅರ್ಜಿ ಸಂಖ್ಯೆ:5209/2009ರಲ್ಲಿ ನ್ಯಾಯಾಲಯ ನೀಡುವ ಅಂತಿಮ ತೀರ್ಪಿನನ್ವಯ ಕ್ರಮ ಕೈಗೊಳ್ಳುವ ಹಕ್ಕನ್ನು ಸರ್ಕಾರ ಕಾಯ್ದಿರಿಸಿದೆ.

ಬಡ್ತಿ ಹೊಂದಿದ ಪ್ರಾಂಶುಪಾಲರುಗಳು ಸ್ಥಳನಿಯುಕ್ತಿಗೊಳಿಸಲಾದ ಸ್ಥಳ/ಹುದ್ದೆಯಲ್ಲಿ ಕೂಡಲೇ ಕರ್ತವ್ಯಕ್ಕೆ ಹಾಜರಾಗಿ ಪ್ರಭಾರ ವರ್ಗಾವಣೆ ಪ್ರಪತ್ರವನ್ನು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೂ ಕಳುಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 15

ಎಸ್.ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ಕಾಲೇಜು)

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 88 ರಾಉನಿ 2009, ಬೆಂಗಳೂರು, ದಿನಾಂಕ: 22ನೇ ಡಿಸೆಂಬರ್, 2009

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಇ 19 ರಾಉನಿ 2009 ದಿನಾಂಕ:2.3.2009ರಲ್ಲಿ ಶ್ರೀ ಎಂ. ಮಹದೇವ್, ಮಾಜಿ ಸಚಿವರು, ನಂ. 103 ಬಿ, 4ನೇ ಎ ಮೈನ್, ಎಂ.ಎಲ್.ಎ. ಬಡಾವಣೆ, ಭೂಪಸಂದ್ರ, ಬೆಂಗಳೂರು–560094 ಇವರನ್ನು ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿಯ ನಿರ್ದೇಶಕರನ್ನಾಗಿ ನೇಮಿಸಿ ಹೊರಡಿಸಿದ್ದ ಆದೇಶವನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 16

ನಂಜುಂಡಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಸಹಕಾರ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಸಂವಾಪ್ರ 292 ಪ್ರವಾಯೋ 2009[ಭಾಗ–7], ಬೆಂಗಳೂರು, ದಿನಾಂಕ: 19ನೇ ಡಿಸೆಂಬರ್, 2009

ಶ್ರೀ ಕೃಷ್ಣದೇವರಾಯರ ಪೀಠಾರೋಹಣದ 500ನೇ ವರ್ಷದ ಸ್ಮರಣಾರ್ಥ ಕಾರ್ಯಕ್ರಮಗಳಿಗೆ ಡಾ:ವಿಷ್ಣುಕಾಂತ್ ಎಸ್.ಚಟ್‌ಪಲ್ಲಿ, ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ಸದಸ್ಯರು, ಕೌಶಲ್ಯ ಆಯೋಗ ಇವರನ್ನು ವಿಶೇಷಾಧಿಕಾರಿಯನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸರ್ಕಾರವು ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 17

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ:ಆಇ 166 ಇಪಿಎಸ್ 2009, ಬೆಂಗಳೂರು, ದಿನಾಂಕ: 11ನೇ ಡಿಸೆಂಬರ್, 2009

ಭಾಗ–1

ರಾಜ್ಯ ಅಬಕಾರಿ ಸೇವೆಗೆ ಸೇರಿದ ಈ ಕೆಳಕಂಡ ಅಬಕಾರಿ ಉಪ ಅಧೀಕ್ಷಕರುಗಳಿಗೆ ವೇತನ ಶ್ರೇಣಿ ರೂ. 14050–350–14400–400–16800–450–19500–525–22650–600–25050ರ ಅಬಕಾರಿ ಅಧೀಕ್ಷಕರ ವೃಂದಕ್ಕೆ ಸ್ಥಾನಪನ್ನ ಮುಂಬಡ್ತಿಗೊಳಿಸಿ ಅವರ ಹೆಸರಿನ ಮುಂದೆ ಸೂಚಿಸಲಾಗಿರುವ ಹುದ್ದೆಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ಕ್ರ.ಸಂ	ಅಧಿಕಾರಿ ಹೆಸರು ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳ ಶ್ರೀಮತಿ/ಶ್ರೀ	ಅಬಕಾರಿ ಅಧೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡಿ ನೇಮಿಸಲಾಗಿರುವ ಸ್ಥಳ
1	ಬಿ.ಎ. ಹಡಲಗೆ, ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಉಪ ಆಯುಕ್ತರ ಕಛೇರಿ, ಬೆಳಗಾಂ ಜಿಲ್ಲೆ, ಬೆಳಗಾಂ	ಮೆ:ಸಿದ್ದಾಪುರ ಡಿಸ್ಟಿಲರಿ ಲಿ., ಸಿದ್ದಾಪುರ ಗ್ರಾಮ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ
2	ಸಿ.ವಿ. ಗೀತ, ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಆಯುಕ್ತರ ಕಛೇರಿ ಬೆಂಗಳೂರು	ಕೆ.ಎಸ್.ಬಿ.ಸಿ.ಎಲ್ ಡಿಪೋ ಯಶವಂತಪುರ, ಬೆಂಗಳೂರು
3	ಹೆಚ್. ಪುಟ್ಟಸ್ವಾಮಿ ಉಡುಪಿ ಉಪ ವಿಭಾಗ, ಉಡುಪಿ ಜಿಲ್ಲೆ	ಅಬಕಾರಿ ಜಂಟಿ ಆಯುಕ್ತರ ಕಚೇರಿ, ಮಂಗಳೂರು ವಿಭಾಗ
4	ಶಿವನಗೌಡ ಅಬಕಾರಿ ಉಪ ಅಧೀಕ್ಷಕರು, ಗಾಂಧಿ ನಗರ ಉಪ ವಿಭಾಗ ಬೆಂಗಳೂರು ನಗರ ಜಿಲ್ಲೆ	ಅಬಕಾರಿ ಜಂಟಿ ಆಯುಕ್ತರ ಕಚೇರಿ, ರಾಜ್ಯ ವಿಚಕ್ಷಣ ದಳ, ಬೆಂಗಳೂರು
5	ಡಿ.ಜೆ. ಶಂಕರಪ್ಪ ಅಬಕಾರಿ ಉಪ ಅಧೀಕ್ಷಕರು, ಹಾಸನ ಉಪ ವಿಭಾಗ, ಹಾಸನ ಜಿಲ್ಲೆ	ಮೆ: ಖೋಡೆ ಬ್ರಿವರೀಸ್ ಲಿ., (ಬ್ರಿವರೀಸ್ ಡಿವಿಜನ್), 7ನೇ ಮೈಲಿ, ಕನಕಪುರ ರಸ್ತೆ, ಕೋಣನಕುಂಟೆ ಗ್ರಾಮ, ಬೆಂಗಳೂರು
6	ವಿ.ಎಸ್. ರಾಣೆ, ಅಬಕಾರಿ ಉಪ ಅಧೀಕ್ಷಕರು, ಹುಬ್ಬಳ್ಳಿ ಉಪ ವಿಭಾಗ–1, ಧಾರವಾಡ ಜಿಲ್ಲೆ	ಮೆ:ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಎಂ.ಕೆ. ಹುಬ್ಬಳ್ಳಿ, ಬೆಳಗಾಂ ಜಿಲ್ಲೆ

ಕ್ರ.ಸಂ	ಅಧಿಕಾರಿ ಹೆಸರು ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳ ಶ್ರೀಮತಿ/ಶ್ರೀ	ಅಬಕಾರಿ ಅಧೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡಿ ನೇಮಿಸಲಾಗಿರುವ ಸ್ಥಳ
7	ಎಸ್. ವೀರಭದ್ರಪ್ಪ, ಅಬಕಾರಿ ಉಪ ಅಧೀಕ್ಷಕರು, ಬಾಗಲಕೋಟೆ ಉಪ ವಿಭಾಗ, ಬಾಗಲಕೋಟೆ	ಮೆ: ಉಗಾರ್ ಶುಗರ್ ವರ್ಕ್ಸ್ ಲಿ., ಉಗಾರ ಖುರ್ದ, ಬೆಳಗಾಂ ಜಿಲ್ಲೆ
8	ಆರ್. ಬಾಲಕೃಷ್ಣ ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಆಯುಕ್ತರ ಕಛೇರಿ, ಬೆಂಗಳೂರು	ಮೆ:ಅಮೃತ್ ಡಿಸ್ಟಿಲರೀಸ್ ಲಿ., ಸರ್ವೆ ನಂ. 49, ಕಂಬಿಪುರ, ಮೈಸೂರು ರಸ್ತೆ, ಬೆಂಗಳೂರು
9	ಎಫ್.ಹೆಚ್. ಛಲವಾದಿ, ಅಬಕಾರಿ ಉಪ ಅಧೀಕ್ಷಕರು, ರಾಮದುರ್ಗ ಉಪ ವಿಭಾಗ, ಬೆಳಗಾಂ ಜಿಲ್ಲೆ	ಮೆ: ಸಾವರಿನ್ ಡಿಸ್ಟಿಲರೀಸ್ ಲಿ., ಸಿಂಗಾಪುರ ಗ್ರಾಮ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ
10	ಕೆ. ರಾಜಶೇಖರಯ್ಯ ಅಬಕಾರಿ ಉಪ ಅಧೀಕ್ಷಕರು, ತುಮಕೂರು ಉಪ ವಿಭಾಗ, ತುಮಕೂರು	ಮೆ:ಖೋಡೆ ಇಂಡಿಯಾ ಲಿ., 54 ಕನ್ನಾಯಕನ ಅಗ್ರಹಾರ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ
11	ಎ.ಎಲ್. ರಾಜಬನ್ಸಿ ಅಬಕಾರಿ ಉಪ ಅಧೀಕ್ಷಕರು, ಧಾರವಾಡ ಉಪ ವಿಭಾಗ, ಧಾರವಾಡ ಜಿಲ್ಲೆ	ಮೆ: ವಿಶ್ವನಾಥ ಶುಗರ್ಸ್ ಲಿ., ಡಿಸ್ಟಿಲರಿ ಘಟಕ, ಬೆಲ್ಲದ ಬಾಗೇವಾಡಿ, ಹುಕ್ಕೇರಿ ತಾಲ್ಲೂಕು ಬೆಳಗಾಂ ಜಿಲ್ಲೆ.
12	ಜಾರ್ಜ್ ಪಿಂಟೊ ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಉಪ ಆಯುಕ್ತರ ಕಛೇರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು	ಮೆ: ಯುನೈಟೆಡ್ ಬ್ರಿವರೀಸ್ ಲಿ., ಪ್ಲಾಟ್ ನಂ. 310, 311 322/ಇ ಬೈಕಂಪಾಡಿ ಇಂಡಸ್ಟ್ರಿಯಲ್ ಏರಿಯಾ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ
13	ಬಿ.ಎಂ. ಮಹದೇವಸ್ವಾಮಿ ಅಬಕಾರಿ ಉಪ ಅಧೀಕ್ಷಕರು, ಕೋಲಾರ ಉಪ ವಿಭಾಗ, ಕೋಲಾರ ಜಿಲ್ಲೆ	ಮೆ: ವೆಂಕಟೇಶ್ವರ ಡಿಸ್ಟಿಲರೀಸ್, 29/ಎ ಇಂಡಸ್ಟ್ರಿಯಲ್ ಏರಿಯಾ, ಯಲಹಂಕ ನ್ಯೂ ಟೌನ್, ಬೆಂಗಳೂರು
14	ಅಜೀಜ್ ಪೆರಮನೂರ್ ಅಬಕಾರಿ ಉಪ ಅಧೀಕ್ಷಕರು, ಮಂಗಳೂರು ಉಪ ವಿಭಾಗ-1, ದಕ್ಷಿಣ ಕನ್ನಡ ಜಿಲ್ಲೆ	ಮೆ: ಎಜ್ಡಿ ಡಿಸ್ಟಿಲರೀಸ್, ನಂ. 140, 143, ಬನ್ನಿಮಂಟಪ ಲೇಔಟ್, ಮೈಸೂರು
15	ಎನ್.ಎಸ್. ಶಾಮಾಜೋಯಿಷ್ ಅಬಕಾರಿ ಉಪ ಆಯುಕ್ತರ ಕಛೇರಿ, ಕೊಡಗು ಜಿಲ್ಲೆ, ಮಡಿಕೇರಿ	ಮೆ: ವಿಲ್ಸನ್ ಡಿಸ್ಟಿಲರೀಸ್ ಪ್ರೈ.ಲಿ., ಗೆಂಡೆ ಹೊಸಹಳ್ಳಿ ಅಂಚೆ, ಅರಕೆರೆ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ
16	ಎಂ. ರೂಪ ಅಬಕಾರಿ ಉಪ ಅಧೀಕ್ಷಕರು, ಖೋಡೆ ಆರ್.ಸಿ.ಎ., ಬೆಂಗಳೂರು	ಬಿಟಿ & ಎಫ್‌ಸಿ ಪ್ರೈಲಿ., 1ನೇ ಹಂತ, ಪೀಣ್ಯ ಬೆಂಗಳೂರು
17	ತಿಮ್ಮೇಗೌಡ, ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಉಪ ಆಯುಕ್ತರ ಕಛೇರಿ, ಹಾಸನ ಜಿಲ್ಲೆ	ಅಬಕಾರಿ ಅಧೀಕ್ಷಕರು, ಇಂದಿರಾ ನಗರ (ಜಾ ಮತ್ತು ತ) ಬೆಂಗಳೂರು. (ಶ್ರೀ ನಾಗರಾಜಯ್ಯ, ಎಸ್. ಇವರ ಸ್ಥಾನದಲ್ಲಿ)

ಕ್ರ.ಸಂ.	ಆಸ್ತಿಯ ವಿವರಗಳು	ಮೌಲ್ಯ ರೂಪಾಯಿಗಳಲ್ಲಿ
14)	ಮನೆ ನಂ.301ಕ್ಕೆ ಕೇಬಲ್ ಮತ್ತು ಟಿ.ವಿ. ಸಂಪರ್ಕ	1,525-00
15)	ದಿನಪತ್ರಿಕೆಗಳ ವೆಚ್ಚ	6,300-00
16)	ಟೆಲಿಫೋನ್ ಸಂಪರ್ಕ ವೆಚ್ಚ	1,60,340-00
17)	ಮನೆ ನಂ.612ರ ಬಾಡಿಗೆ	1,05,600-00
18)	ವೈದ್ಯಕೀಯ ವೆಚ್ಚ	47,078-28
19)	ಐ.ಸಿ.ಐ.ಸಿ.ಐ ಬ್ಯಾಂಕ್‌ಗೆ ಸಾಲ ಮರುಪಾವತಿ	9,439-00
20)	ಜಿಪಿಎಫ್ ಸಾಲ ಮರುಪಾವತಿ	14,000-00
21)	ಎಂ ಅಂಡ್ ಎಂ ಹಣಕಾಸು ಸಂಸ್ಥೆಯ ಸಾಲ ಮರುಪಾವತಿ	3,72,350-00
22)	ಹೀರೋ ಹೋಂಡ ಕೆಎ03-ಇಡಿ 7506 ಇದರ ವೆಚ್ಚ	25,040-00
23)	ಗೆಟ್ಜ್ ಕಾರು ರಿಜಿಸ್ಟ್ರೇಷನ್ ಸಂಖ್ಯೆ : ಕೆಎ03-ಎಂಜಿ-1242 ಇದರ ವೆಚ್ಚ	71,000-00
24)	ಮಾರುತಿ ಕಾರ್ ರಿಜಿಸ್ಟೇಷನ್ ಸಂಖ್ಯೆ : ಕೆಎ4-ಎನ್-1242 ಇದರ ವೆಚ್ಚ	2,75,850-00
25)	ಕೆನೆಟಿಕ್ ಹೋಂಡ ರಿಜಿಸ್ಟ್ರೇಷನ್ ಸಂಖ್ಯೆ :ಕೆಎ03-ಇಬಿ-3329 ಇದರ ವೆಚ್ಚ	27,376-00
26)	ಮಕ್ಕಳ ವಿದ್ಯಾಭ್ಯಾಸದ ಖರ್ಚು	1,44,885-00
27)	ಮಕ್ಕಳ ಮಧುವೆ ಖರ್ಚು	6,670-00
28)	ನಿಂಡಿಯನ್ ಜಮಾಖಾನ ಸದಸ್ಯತ್ವ	12,500-00
29)	ಆರೋಪಿತ ಅಧಿಕಾರಿಯವರು ಕಾಸ್ಮ ಪಾಲಿಟಿನ್ ಕ್ಲಬ್, ಕಲ್ಯಾಣ ನಗರ ಇದರ ಸದಸ್ಯತ್ವ	10,000-00
30)	ಕರ್ನಾಟಕ ಕಮರ್ಷಿಯಲ್ ಟ್ಯಾಕ್ಸ್ ಅಧಿಕಾರಿಗಳ ಸೇವಾ ಸಂಘದ ಸದಸ್ಯತ್ವ	1,010-00
31)	ಮನೆ ಕೆಲಸದವರ ವೆಚ್ಚ	16,850/-
32)	ಸಾಕು ನಾಯಿಯ ನಿರ್ವಹಣೆ ಮತ್ತು ವೆಚ್ಚ	1,35,450-00
33)	ದೇವಸ್ಥಾನ ಮತ್ತು ಸಂಸ್ಥೆಗಳಿಗೆ ಆರೋಪಿತ ಅಧಿಕಾರಿಯಿಂದ ನೀಡಿರುವ ದಾನ ಅಥವಾ ಕೊಡುಗೆ	-
34)	ಮಗಳ ಹೆರಿಗೆಗಾಗಿ ಯಾವುದೇ ವೆಚ್ಚವನ್ನು ಮಾಡಿರುವುದಿಲ್ಲ.	-
35)	ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್‌ಗಳ ವೆಚ್ಚ	-
36)	ಪಾಸ್‌ಪೋರ್ಟ್ ವೆಚ್ಚ	-
37)	ಆರೋಪಿತ ಅಧಿಕಾರಿ ಹಾಗೂ ಅವರ ಕುಟುಂಬ ವರ್ಗದವರ ಪ್ರವಾಸ	-
38)	ಆರೋಪಿತ ಅಧಿಕಾರಿಯವರು ಪಾವತಿಸಿರುವ ಆದಾಯ ತೆರಿಗೆ	4,803-00
39)	ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರಗಳ ಖರೀದಿ	2,900-00
40)	ಸತ್ಯನಾರಾಯಣಸ್ವಾಮಿ ಪೂಜೆ	2,750-00
	ಒಟ್ಟು ವೆಚ್ಚ	53,69,552-28

ಆದಾಯದ ವಿವರ

ಕ್ರ.ಸಂ.	ಆದಾಯದ ವಿವರಗಳು	ಮೌಲ್ಯ ರೂಪಾಯಿ
1)	ಆರೋಪಿತ ಅಧಿಕಾರಿಯವರ ವೇತನದಿಂದ ಬಂದ ಆದಾಯ	10,11,203-00
2)	ಕೃಷಿ ಆದಾಯ	8,46,800-00

ಕ್ರ.ಸಂ.	ಆದಾಯದ ವಿವರಗಳು	ಮೌಲ್ಯ ರೂಪಾಯಿ
3)	ಕಟ್ಟಡ ಬಾಡಿಗೆ	44,000–00
4)	ನಿವೇಶನ ಸಂಖ್ಯೆ: 616, ನಂದಿನಿ ಲೇಔಟ್, ಲಗ್ಗೆರೆ, ಬೆಂಗಳೂರು ಇದರ ಮಾರಾಟದಿಂದ ಬಂದ ಹಣ	3,90,967–00
5)	ಭಾವನ ಹಳ್ಳಿ, ಸರ್ವೇ ನಂ.139 ಇದರ ಪಿತ್ರಾರ್ಜಿತ ಆಸ್ತಿ ಮಾರಾಟದಿಂದ	--
6)	ಮಾರುತಿ ಕಾರ್ ಸಂಖ್ಯೆ: ಕೆಎ4–ಎನ್–1242 ಇದರ ಮಾರಾಟ	85,000–00
7)	ಎಂ.ಎಂ.ಸಂಸ್ಥೆಯಿಂದ ಪಡೆದಿರುವ ಸಾಲ	2,70,000–00
8)	ಜಿಪಿಎಫ್ ಲೆಕ್ಕದಿಂದ ಭಾಗಶ: ಹಣ ಪಡೆದಿರುವುದು	–
9)	ಜಿಪಿಎಫ್ ಸಾಲ	25,000–00
10)	ಐ.ಸಿ.ಐ.ಸಿ.ಐ ಬ್ಯಾಂಕ್‌ನಿಂದ ಸಾಲ	1,00,000–00
11)	ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್‌ನ ಮೆಚ್ಯುರಿಟಿಯಿಂದ ಬಂದ ಹಣ	15,729–30
12)	ಬ್ಯಾಂಕ್ ಖಾತೆಗಳಿಂದ ಬಂದಿರುವ ಬಡ್ಡಿ	5,852–12
13)	ವಿದೇಶಗಳಿಂದ ಆದಾಯ, ಸಾಲಗಳು, ಉಡುಗೊರೆ ಇತ್ಯಾದಿ	–
14)	ಸ್ನೇಹಿತರು, ಬಂಧುಗಳ ಮಧುವೆ ಹಾಗೂ ಇತರೇ ಸಮಾರಂಭಗಳಿಂದ ಬಂದ ಉಡುಗೊರೆ	–
15)	ಇಲಾಖೆ ಹಾಗೂ ಇತರೇ ಇಂದ ಬಂದ ಬಹುಮಾನ	–
	ಕುಟುಂಬ ಸದಸ್ಯರ ಗಳಿಕೆ	
16)	ಶ್ರೀ ಎನ್.ಡಿ.ವೆಂಕಟೇಶ್ ಬಾಬು (ಆರೋಪಿತ ಅಧಿಕಾರಿಯವರ ಮಗ) ಇವರಿಂದ ಬಂದ .	44,960–00
17)	ಆರೋಪಿತ ಅಧಿಕಾರಿಯವರ ಅಳಿಯ ಇವರ ಗಳಿಕೆ	18,380–00
	ಶ್ರೀಮತಿ ಆಶಾ ಕಿರಣ್ (ಆರೋಪಿತ ಅಧಿಕಾರಿಯವರ ಮಗಳು) ಇವರ ಉದ್ಯೋಗ ಕುರಿತು ಹೆಚ್.ಡಿ.ಎಫ್.ಸಿ ಮತ್ತು ಸ್ಟ್ಯಾಂಡರ್ಡ್ ಚಾಟರ್ಡ್ ಬ್ಯಾಂಕ್‌ಗಳಿಂದ ಯಾವುದೇ ಅಧಿಕೃತ ಮಾಹಿತಿ ಬಂದಿರುವುದಿಲ್ಲ.	–
	ಒಟ್ಟು ಆದಾಯ	**28,57,891–42**

ಆರೋಪಿತ ಅಧಿಕಾರಿಯವರು ಗಳಿಸಿರುವ ಹೆಚ್ಚುವರಿ ಸಂಪತ್ತು:

ಒಟ್ಟು ಆಸ್ತಿ	ರೂ.30,69,267.56
ಒಟ್ಟು ವೆಚ್ಚ	ರೂ. 53,69,552.28
ಆಸ್ತಿ ಮತ್ತು ವೆಚ್ಚ	ರೂ. 84,38,819.84
ಒಟ್ಟು ಆದಾಯ	ರೂ. 28,57,891.42
ಹೆಚ್ಚುವರಿ ಸಂಪತ್ತು	ರೂ. 55,80,928.42

ತನಿಖಾಧಿಕಾರಿಯು ಸಲ್ಲಿಸಿರುವ ಅಂತಿಮ ವರದಿ ಮತ್ತು ದಾಖಲೆಗಳನ್ನು ಒಳಗೊಂಡ ಕಡತಗಳನ್ನು ಸರ್ಕಾರದ ಹಂತದಲ್ಲಿ ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು, ಮೇಲ್ಕಂಡಂತೆ ಆಪಾದಿತ ಸರ್ಕಾರಿ ಅಧಿಕಾರಿ ಶ್ರೀ ಎನ್.ದೇವಾನಂದಬಾಬು, ವಾಣಿಜ್ಯ ತೆರಿಗೆ ಅಧಿಕಾರಿ, ಇವರು ದಿನಾಂಕ:17–6–1992 ರಿಂದ ಶೋಧನಾ ದಾಳಿ ನಡೆಸಿದ ದಿನಾಂಕ: 10–8–2005 ರವರೆಗಿನ ಅವಧಿಗೆ ಚೆಕ್ ಅವಧಿಯೆಂದು ಈ ಅವಧಿಯಲ್ಲಿ ಆಪಾದಿತರು ಮಾಡಿರುವ ಒಟ್ಟು ಖರ್ಚು ವೆಚ್ಚ 53,69,552.28 ಗಳಾಗಿರುತ್ತವೆ. ಆಪಾದಿತ ಅಧಿಕಾರಿಯು ತಮ್ಮ ಚೆಕ್ ಅವಧಿಯಲ್ಲಿ ಹೊಂದಿರುವ ಆದಾಯದ ಒಟ್ಟು ಮೊತ್ತ ರೂ.28,57,891.42 ಗಳಾಗಿದ್ದು, ಆಪಾದಿತ ಅಧಿಕಾರಿಯು ತಮ್ಮ ಆದಾಯಕ್ಕಿಂತ ಹೆಚ್ಚಿಗೆ ಹೊಂದಿದ ಆಸ್ತಿ ಮತ್ತು ಖರ್ಚು ವೆಚ್ಚಗಳ ಒಟ್ಟು ಮೊತ್ತ 84,38,819.84 ಗಳಾಗಿರುತ್ತದೆ. ಅಂದರೆ ಆಪಾದಿತ ಸಾರ್ವಜನಿಕ ಅಧಿಕಾರಿ ತಮ್ಮ ಎಲ್ಲಾ ಒಟ್ಟು

ಮೂಲಗಳ ಆದಾಯಕ್ಕಿಂತಲೂ ಹೆಚ್ಚಿನ ಪ್ರಮಾಣದ ಆಸ್ತಿಯನ್ನು ಹೊಂದಿರುವುದು ಕಂಡುಬರುತ್ತದೆ. ಇದಕ್ಕೆ ಆಪಾದಿತರ ಬಳಿ ಯಾವುದೇ ಸಮಾದಾನಕರ ವಿವರಣೆ ಅಥವಾ ಲೆಕ್ಕ ಲಭ್ಯವಿರುವುದಿಲ್ಲ.

ಆದ್ದರಿಂದ ಶ್ರೀ ಎನ್.ದೇವಾನಂದಬಾಬು, ವಾಣಿಜ್ಯ ತೆರಿಗೆ ಅಧಿಕಾರಿ, ಇವರು ಲಂಚ ನಿರೋಧಕ ಕಾಯ್ದೆ 1988ರ ಕಲಂ 13(1)(ಇ)ರ ಜೊತೆ ಕಲಂ 13(2)ರ ಅಡಿಯಲ್ಲಿ ಅಪರಾಧ ಎಸಗಿರುವುದು ಸ್ಪಷ್ಟವಾಗಿ ಸರ್ಕಾರಕ್ಕೆ ಮನವರಿಕೆಯಾಗಿರುತ್ತದೆ.

ಆಪಾದಿತ ಸರ್ಕಾರಿ ನೌಕರರು ತಮ್ಮ ಎಲ್ಲ ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಸ್ತಿಯನ್ನು ಗಳಿಸಿ, ಅಪರಾಧಿಕ ದುರ್ನಡತೆ ಎಸಗಿರುವುದರಿಂದ ಸದರಿಯವರನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಿಸುವುದು ಅತ್ಯವಶ್ಯಕವಾಗಿರುತ್ತದೆಂದು ಸರ್ಕಾರಕ್ಕೆ ಸ್ಪಷ್ಟವಾಗಿ ಮನವರಿಕೆಯಾಗಿರುತ್ತದೆ.

ಆಪಾಧಿತ ಅಧಿಕಾರಿಯು ಗ್ರೂಪ್ 'ಬಿ ' ವೃಂದವಾದ ವಾಣಿಜ್ಯ ತೆರಿಗೆ ಅಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ನಿಯಮ 9(1) ರನ್ವಯ ಸರ್ಕಾರವು, ಆಪಾಧಿತರನ್ನು ಕೆಲಸದಿಂದ ತೆಗೆದು ಹಾಕುವ ದಂಡನೆಯನ್ನು ವಿಧಿಸಲು ಅಧಿಕಾರವುಳ್ಳದ್ದಾಗಿರುತ್ತದೆ. ಆದ್ದರಿಂದ ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ) ರನ್ವಯ ಸರ್ಕಾರವು ಆಪಾದಿತ ಅಧಿಕಾರಿಯನ್ನು ಲಂಚ ನಿರೋಧಕ ಕಾಯ್ದೆ, 1988ರ ಕಲಂ 13(1)(ಇ)ರ ಜೊತೆಗೆ ಕಲಂ 13(2)ರ ಅಡಿಯಲ್ಲಿ ಅಭಿಯೋಗಗೊಳಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ. ಅದರಂತೆ ಈ ಕೆಳಕಂಡ ಪರಿಷ್ಕೃತ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 50 ವಾತೆತ 2005, ಬೆಂಗಳೂರು, ದಿನಾಂಕ: 17ನೇ ಡಿಸೆಂಬರ್, 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಮೇರೆಗೆ ಲಂಚ ನಿರೋಧಕ ಕಾಯ್ದೆ 1988ರ 19(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಆಪಾದಿತ ಅಧಿಕಾರಿಯಾದ ಶ್ರೀ ಎನ್.ದೇವಾನಂದ ಬಾಬು, ವಾಣಿಜ್ಯ ತೆರಿಗೆ ಅಧಿಕಾರಿ, ವಾಣಿಜ್ಯ ತೆರಿಗೆ ಇಲಾಖೆ, ಇವರ ವಿರುದ್ಧ ಸಕ್ಷಮ ನ್ಯಾಯಾಲಯದಲ್ಲಿ ಲಂಚ ನಿರೋಧಕ ಕಾಯ್ದೆ 13(1)(ಇ) ಜೊತೆಯಲ್ಲಿ ಓದಲಾದ ಕಲಂ 13(2)ರಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜಿಸಲು ಲೋಕಾಯುಕ್ತ ಪೊಲೀಸರಿಗೆ ಈ ಮೂಲಕ ಪರಿಷ್ಕೃತ ಮಂಜೂರಾತಿಯನ್ನು ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ಮೇಲ್ಕಂಡ ನಿಯಮಗಳನ್ವಯ ಈ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ಸಹಿಯ ಅಡಿಯಲ್ಲಿ ದಿನಾಂಕ: 17-12-2009 ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಲ್.ಎಸ್. ವಾಸನ್

ಪಿ.ಆರ್. 2877

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ವಾಣೀಜ್ಯ ತೆರಿಗೆ-2)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಅಧಿನಿಯಮ 2000ರ ಪ್ರಕರಣ 29(4)(i)ರನ್ವಯ ದಕ್ಷಿಣ ಕನ್ನಡ ಮಕ್ಕಳ ಕಲ್ಯಾಣ ಸಮಿತಿಯ ಶ್ರೀಮತಿ ಹಿಲ್ಡಾರಾಯಪ್ಪನ್, ಅಧ್ಯಕ್ಷರು ಮತ್ತು ಶ್ರೀ ಜಿಯೋ ಫೆರಿ ಜೇಮ್ಸ್ ಡಿಸೆಲ್ವಾ, ಸದಸ್ಯರು ಮತ್ತು ರೆನ್ನಿ ಪೀಟರ್ ಡಿಸೋಜಾ ಇವರುಗಳ ಅಧ್ಯಕ್ಷರು: ಸದಸ್ಯರು ಸ್ಥಾನವನ್ನು ರದ್ದುಗೊಳಿಸುವ ಕುರಿತು.

ಓದಲಾಗಿದೆ :
1) ಅಧಿಸೂಚನೆ ಸಂ :ಮಮಇ 3 ಮಭಾಬ 2007 ದಿನಾಂಕ :26.2.2007. :
2) ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಗಳೂರು ಇವರ ಪತ್ರ ಸಂ :ಉನಿಮ/ಮಮಅಇ/ಮಕಸ/ವರದಿ/2009-10/164 ದಿನಾಂಕ :22.10.2009
3) ಶ್ರೀ ಎಸ್. ಸುಂದರಂ ಇವರು ಪೊಲೀಸ್ ಉಪನಿರೀಕ್ಷಕರು, ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆ, ಕೈಕಂಬಾ ಇವರಿಗೆ ದಿನಾಂಕ :7.9.2007ರಲ್ಲಿ ನೀಡಿರುವ ದೂರು
4) ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯು ದಿನಾಂಕ :7.9.2007ರಲ್ಲಿ ಶ್ರೀ ರೆನ್ನಿ ಪೀಟರ್ ಡಿಸೋಜಾ ಮತ್ತು ಶ್ರೀ ಜಿಯೋ ಫೆರಿ ಜೇಮ್ಸ್ ಡಿಸೆಲ್ವಾ ಇವರ ವಿರುದ್ಧ ದಾಖಲಿಸಿರುವ ಪ್ರಥಮ ಮಾಹಿತಿ ವರದಿ.
5) ಶ್ರೀ ರೆನ್ನಿ ಪೀಟರ್ ಡಿಸೋಜಾ, ಶ್ರೀ ಜಿಯೋ ಫೆರಿ ಜೇಮ್ಸ್ ಡಿಸೆಲ್ವಾ ಇವರಿಗೆ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಹೊರಡಿಸಿರುವ ವಿವರಣೆ ಕೇಳುವ ನೋಟೀಸ್ ಸಂ :ಮಮಇ/ಪಿಡಿಎಂ/ಪ-2/43/2007-08 ದಿನಾಂಕ :15.10.2007.

6) ಶ್ರೀಮತಿ ರೆನ್ನಿ ಪಿಳ್ಳೈ ಇವರು ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಗೆ ದಿನಾಂಕ :12.9.2007ರಲ್ಲಿ ನೀಡಿರುವ ದೂರಿನ ಪ್ರತಿ.

7) ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆ ಕಾಯಕಂಬಾ, ಮಂಗಳೂರು ಇವರು ದಿನಾಂಕ :12.9.2007ರಲ್ಲಿ ದಾಖಲಿಸಿರುವ ಪ್ರಥಮ ಮಾಹಿತಿ ವರದಿ.

8) ಶ್ರೀ ರೆನ್ನಿ ಡಿಸೋಜಾ ಮತ್ತು ಶ್ರೀ ಜಿಯೋ ಡಿಸಿಲ್ವಾ ಇವರಿಗೆ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಹೊರಡಿಸಿರುವ ವಿವರಣೆ ಕೇಳುವ ನೋಟೀಸ್ ಸಂ :ಮಮಇ/ಸುಶ/ಪ-2/48/2007-08 ದಿನಾಂಕ :1.1.2008.

9) ಮಕ್ಕಳ ಕಲ್ಯಾಣ ಸಮಿತಿ, ದಕ್ಷಿಣ ಕನ್ನಡ ಇವರು ಪ್ರಕರಣ ಸಂ :23/07 ರಲ್ಲಿ ದಿನಾಂಕ :9.8.2007 ಮತ್ತು 30.8.2007ರಲ್ಲಿ ಹೊರಡಿಸಿರುವ ಆದೇಶ ಮತ್ತು ನಡವಳಿ

10) ಮಂಗಳೂರಿನ ಮಾನ್ಯ 3ನೇ ಹೆಚ್ಚುವರಿ ಡಿಸ್ಟ್ರಿಕ್ಟ್ ಮತ್ತು ಸೆಶೆನ್ಸ್ ನ್ಯಾಯಾಧೀಶರು ಇವರು ಕ್ರಿಮಿನಲ್ ಅಪೀಲು ಸಂ :159/2007ರಲ್ಲಿ ದಿನಾಂಕ :5.6.2008ರಲ್ಲಿ ನೀಡಿರುವ ತೀರ್ಪು/ಆದೇಶ.

11) ಉಪನಿರ್ದೇಶಕರು, ಮಂಗಳೂರು ಇವರು ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿ ಇವರಿಗೆ ಹೊರಡಿಸಿರುವ ಪತ್ರ ಸಂ :ಉನಿಮ/ಮಮಅಇ/2009-10/1431 ದಿನಾಂಕ :24.9.2009.

12) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಶ್ರೀಮತಿ ಹಿಲ್ಡಾರಾಯಪ್ಪನ್ ಇವರಿಗೆ ಹೊರಡಿಸಿರುವ ಕಾರಣ ಕೇಳುವ ನೋಟೀಸ್ ಸಂ :ಮಮಇ/ ಪಿಡಿಎಂ/ ದತ್ತು/ 137/ 2007-08 ದಿನಾಂಕ :15.10.2009.

13) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪತ್ರ ಸಂ :ಮಮಅಇ/ಸುಶ/ಪ/48/2007-08 ದಿನಾಂಕ :7.11.2009.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಶ್ರೀಮತಿ ಹಿಲ್ಡಾರಾಯಪ್ಪನ್ ಇವರನ್ನು ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರನ್ನಾಗಿ, ಶ್ರೀ ರೆನ್ನಿ ಪೀಟರ್ ಡಿಸೋಜಾ ಇವರನ್ನು ಸದಸ್ಯರನ್ನಾಗಿ ಮತ್ತು ಶ್ರಿ ಜಿಯೋ ಫೆಗಿ ಡಿಸಿಲ್ವಾ ಇವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಸುಂದರಂ ಮತ್ತು ಶ್ರೀಮತಿ ಜ್ಯೋತಿ ಎಂಬ ದಂಪತಿಗಳ ಮನೆಗೆ ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರು ದಾಳಿ ಮಾಡಿ ಸರಸ್ವತಿ ಎಂಬ ಬಾಲಕಿಯನ್ನು ಮನೆಕೆಲಸಕ್ಕೆ ಇಟ್ಟುಕೊಂಡಿರುವುದನ್ನು ಆಕ್ಷೇಪಿಸಿದ್ದು, ಇದು ಬಾಲ ಕಾರ್ಮಿಕ ನಿಷೇಧ ಅಧಿಕಾರಿಯ ವ್ಯಾಪ್ತಿಗೆ ಒಳಪಟ್ಟಿದ್ದು, ಸಮಿತಿಯು ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿರುವುದೆಂದು ತಿಳಿಸಲಾಗಿದೆ. ದಿನಾಂಕ:7.9.2007ರಲ್ಲಿ ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದೂರನ್ನು ದಾಖಲಿಸಿದ್ದು, ಕ್ರಮ ಸಂಖ್ಯೆ (4)ರಲ್ಲಿರುವಂತೆ ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಲಾಗಿರುತ್ತದೆ. ಈ ಕುರಿತು ಕ್ರಮ ಸಂಖ್ಯೆ (5) ರಲ್ಲಿರುವಂತ ದಿನಾಂಕ:15.10.2007ರಲ್ಲಿ ನಿರ್ದೇಶಕರು ವಿವರಣೆ ಕೇಳುವ ನೊಟೀಸನ್ನು ಹೊರಡಿಸಿರುತ್ತಾರೆ.

ಇದೇ ರೀತಿ ಬಾಲಕಿ ಗೀತಾ ಎಂಬುವವರನ್ನು ಮನೆಕೆಲಸಕ್ಕೆ ಇಟ್ಟುಕೊಂಡಿರುವರೆಂದು ಸಮಿತಿಯು ದಾಳಿ ಮಾಡಿದ್ದು, ಮೇಲೆ ಕ್ರಮ ಸಂಖ್ಯೆ (6)ರಲ್ಲಿ ಇರುವಂತೆ ದಿನಾಂಕ:12.9.2007ರಲ್ಲಿ ದೂರನ್ನು ಸಲ್ಲಿಸಲಾಗಿದ್ದು, ಕ್ರಮ ಸಂಖ್ಯೆ (7)ರಲ್ಲಿರುವಂತೆ ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಲಾಗಿರುತ್ತದೆ. ಈ ಕುರಿತು ಕ್ರಮ ಸಂಖ್ಯೆ (8)ರಲ್ಲಿರುವಂತೆ ಸದಸ್ಯತ್ವವನ್ನು ಏಕೆ ರದ್ದುಗೊಳಿಸಬಾರದೆಂಬ ಕುರಿತು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ವಿವರಣೆ ಕೇಳುವ ನೋಟಿಸನ್ನು ಹೊರಡಿಸಿದ್ದು, ಯಾವುದೇ ವಿವರಣೆ ಸ್ವೀಕೃತವಾಗಿರುವುದಿಲ್ಲ.

ಮೇಲೆ ಹೇಳಿರುವುದಲ್ಲದೆ, ಬಾಲಕಿ ರಜಿಯಾ ಎಂಬುವವರನ್ನು ಶ್ರೀ ಅಜೀಜ್ ಮತ್ತು ಉಮರ್ ಎಂಬ ವ್ಯಕ್ತಿಗಳು ಲೈಂಗಿನ ಕಿರುಕುಳ ನೀಡಿದ್ದಾರೆಂಬ ಕುರಿತು ಕ್ರಮ ಸಂಖ್ಯೆ (9)ರಲ್ಲಿರುವ ಆದೇಶದಲ್ಲಿ ಸದರಿ ಇಬ್ಬರು ವ್ಯಕ್ತಿಗಳಿಗೆ ರೂ. 25,000/- ದಂಡ ಪುನರ್ವಸತಿ ಖರ್ಚು ತಪ್ಪಿದ್ದಲ್ಲಿ 6 ತಿಂಗಳ ಜೈಲು ಶಿಕ್ಷೆ ವಿಧಿಸಿದ್ದು, ಮೇಲೆ ಕ್ರಮ ಸಂಖ್ಯೆ (10)ರಲ್ಲಿ ಓದಲಾದ ಮಾನ್ಯ ನ್ಯಾಯಾಲಯದ ತೀರ್ಪಿನಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಆದೇಶವು ಅಧಿಕಾರ ವ್ಯಾಪ್ತಿ ಮೀರಿರುವುದೆಂದು ಹೇಳುತ್ತಾ ಸದರಿ ಆದೇಶಗಳನ್ನು ಮಾನ್ಯ ನ್ಯಾಯಾಲಯವು ರದ್ದುಪಡಿಸಿರುತ್ತದೆ.

ಮೇಲೆ ಕ್ರಮ ಸಂಖ್ಯೆ (11)ರಲ್ಲಿ ಓದಲಾದ ಪತ್ರದಲ್ಲಿ ನಿರ್ಮಲಾ ಸೋಶಿಯಲ್ ವೆಲ್‌ಫೇರ್, ಉಳ್ಳಾಳ ಇದು ದತ್ತು ಸ್ವೀಕಾರ ಸಂಸ್ಥೆಯಾಗಿ ನೊಂದಾಯಿತವಾಗಿದ್ದು ಸದರಿ ಸಂಸ್ಥೆಯು ಮಕ್ಕಳ ಕಲ್ಯಾಣ ಸಮಿತಿಯ ಹಲವಾರು ರೀತಿಯ ಕಿರುಕುಳ ನೀಡುತ್ತಿದ್ದು ತಮ್ಮ ಮಾನ್ಯತೆ ರದ್ದು ಮಾಡಲು ಕೋರಿದ್ದು, 5 ಮಕ್ಕಳನ್ನು ದತ್ತು ಸಂಸ್ಥೆಯಾದ ಸ್ಫೂರ್ತಿಧಾಮಕ್ಕೆ ನೀಡುವ ನಿಮಿತ್ತ, ದತ್ತು ತೆಗೆದುಕೊಳ್ಳಲು ಆಸ್ಪದವಿದೆ ಎಂಬ ಪ್ರಮಾಣ ಪತ್ರವನ್ನು ನೀಡುವಂತೆ ಸಮಿತಿಯನ್ನು ಕೋರಿದ್ದು, ಸದರಿ ಸಂಸ್ಥೆಯನ್ನು ಸತಾಯಿಸುತ್ತಾ, ಪೊಲೀಸ್ ಮೂಲಕ ಮಕ್ಕಳನ್ನು ಸಮಿತಿಯ ಮುಂದೆ ಹಾಜರುಪಡಿಸಲು ವಾರೆಂಟ್ ಹೊರಡಿಸಿದ್ದು, ದಿನಾಂಕ:24.9.2009ರಲ್ಲಿ ಸಂಸ್ಥೆಯು ಕೋರಿದಂತೆ ಮನ್ನಣೆಯನ್ನು ರದ್ದುಪಡಿಸಿದ್ದು, ಉದ್ದೇಶಪೂರ್ವಕವಾಗಿ ಪ್ರಮಾಣ ಪತ್ರವನ್ನು ನೀಡಲು ವಿಳಂಬ ಮಾಡುತ್ತಿದ್ದು, ದಿನಾಂಕ:24.9.2009ರ ನಿರ್ದೇಶಕರ ಪತ್ರದಲ್ಲಿ ತಕ್ಷಣವೇ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿದ್ದು, ಸಮಿತಿಯು ದಿನಾಂಕ:28.9.2009ರಲ್ಲಿ ಪ್ರಮಾಣ ಪತ್ರವನ್ನು ನೀಡಿದ್ದು, ಕ್ರಮ ಸಂಖ್ಯೆ (12)ರಲ್ಲಿರುವಂತೆ ಅಧ್ಯಕ್ಷರಿಗೆ ಈ ಪ್ರಕರಣವಲ್ಲದೆ ಬಾಲಕಿ ರಜಿಯಾ ಪ್ರಕರಣವನ್ನೂ ಸಹ ಉಲ್ಲೇಖಿಸಿ ಅಧ್ಯಕ್ಷ ಸ್ಥಾನವನ್ನು ಏಕೆ ರದ್ದುಪಡಿಸಬಾರದೆಂಬ ಕುರಿತು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಕಾರಣ ಕೇಳುವ ನೋಟಿಸನ್ನು ಹೊರಡಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (13)ರಲ್ಲಿ ಓದಲಾದ ಪತ್ರದಲ್ಲಿ ಮೇಲೆ ಸೂಚಿಸಿರುವ ಪ್ರಕರಣಗಳನ್ನು ಉಲ್ಲೇಖಿಸುತ್ತಾ, ಪ್ರಸ್ತಾಪಿತ ಅಧ್ಯಕ್ಷರು ಮತ್ತು ಸದಸ್ಯರು ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿರುವ ಹಿನ್ನಲೆಯಲ್ಲಿ ಅಧ್ಯಕ್ಷತೆ ಮತ್ತು ಸದಸ್ಯತ್ವನ್ನು ವಜಾ ಮಾಡುವಂತೆ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಸರ್ಕಾರವನ್ನು ಕೋರಿರುತ್ತಾರೆ.

ಪ್ರಕರಣವನ್ನು ಪರಿಶೀಲಿಸಲಾಗಿದ್ದು, ಅಧಿಕಾರ ದುರುಪಯೋಗವಾಗಿರುವುದು ದಾಖಲಾತಿಗಳಿಂದ ಕಂಡು ಬಂದಿದ್ದು, ನಿರ್ದೇಶಕರು ನೀಡಿರುವ ಕಾರಣ ಕೇಳುವ ನೋಟೀಸ್‌ಗೆ ಉತ್ತರ ನೀಡದೆ ಮೌನವಾಗಿರುವುದು ಸದರಿ ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರು ಆರೋಪಗಳನ್ನು ಒಪ್ಪಿಕೊಂಡಂತೆ ಭಾವಿಸಬೇಕಾಗಿದ್ದು, ಆರೋಪಗಳನ್ನು ಒಪ್ಪಿಕೊಂಡಂತೆ ಇರುವುದನ್ನು ಪರಿಗಣಿಸಿ ಈ ಕೆಳಗೆ ಸೂಚಿಸಿದಂತೆ ಆದೇಶಿಸಲಾಗಿದೆ.

ಆದೇಶ ಸಂ:ಮಮಇ 193 ಮಭಾಬ 2009, ಬೆಂಗಳೂರು, ದಿನಾಂಕ:5ನೇ ಡಿಸೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಅಧಿನಿಯಮ, 2000ರ ಪರಕರಣ 29(4)(i)ರನ್ವಯ ದಕ್ಷಿಣ ಕನ್ನಡ ಮಕ್ಕಳ ಕಲ್ಯಾಣ ಸಮಿತಿಯ ಶ್ರೀಮತಿ [illegible], ಅಧ್ಯಕ್ಷರು ಮತ್ತು ಶ್ರೀ ಜಿಯೋ ಫೆರಿ ಜೇಮ್ಸ್ ಡಿಸಿಲ್ವಾ, ಸದಸ್ಯರು ಮತ್ತು ರೆನ್ನಿ ಪೀಟರ್ ಡಿಸೋಜಾ, ಸದಸ್ಯರು ಇವರುಗಳ ಅಧ್ಯಕ್ಷರು; ಸದಸ್ಯರ ಸ್ಥಾನವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ವಿ. ಶಿವಕುಮಾರ್

ಪಿ.ಆರ್. 2890

ಸರ್ಕಾರದ ಅಧೀನ ಕಾರ್ಯದರ್ಶಿ–1

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಇಂಧನ ಸಚಿವಾಲಯ

ವಿಷಯ : ಮೆ: ವೈಜ್ ಮೆನ್ ಲಿಮಿಟೆಡ್ ಇವರಿಗೆ ಹಂಚಿಕೆ ಮಾಡಲಾಗಿರುವ4.8 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ :ಡಿಇ 133 ಎನ್ ಸಿಇ 97 (5) ದಿನಾಂಕ :20–4.1998
2) ಸರ್ಕಾರಿ ಆದೇಶ ಸಂಖ್ಯೆ :ಇಎನ್ 233 ಎನ್ ಸಿಇ 2007 ದಿನಾಂಕ :16.6.2007.
3) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಸಕರ ಪತ್ರ ಸಂಖ್ಯೆ :ಕೆಆರ್‌ಇಡಿ/08/VolIV/2008/2028 ದಿನಾಂಕ :2/3.12.2008.
4) ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ :ಇಎನ್ 450 ಎನ್‌ಸಿಇ 2008 ದಿನಾಂಕ :27.12.2008.
5) ಮೆ :ವೈಜ್ ಮೆನ್ ಲಿಮಿಟೆಡ್ ಇವರ ಪತ್ರ ದಿನಾಂಕ :2.1.2009.
6) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಪತ್ರ ಸಂಖ್ಯೆ :ಕೆಆರ್‌ಇಡಿ/08/WL/2009/2619 ದಿನಾಂಕ :13./17.8.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಆದೇಶದಲ್ಲಿ ಮೆ:: ವೈಜ್‌ಮೆನ್ ಲಿಮಿಟೆಡ್ ಇವರಿಗೆ ದಾವಣಗೆರೆ ಜಿಲ್ಲೆಯ ಅರಸಿನಗುಂಡಿ ಗ್ರಾಮದ ಬಳಿ 18 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಒಡಬಡಿಕೆ ಮಾಡಿಕೊಂಡ ದಿನಾಂಕದಿಂದ 4 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ 13.2 ಮೆಗಾ ವ್ಯಾಟ್‌ನ್ನು ಮೆ:ಎಕಿಯಾನ್ ವಿಂಡ್ ಎನರ್ಜಿ ರವರಿಗೆ ವರ್ಗಾವಣೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು 5 ವರ್ಷಕ್ಕೆ ಮೇಲ್ಪಟ್ಟ ಯಾವುದೇ ಪ್ರಗತಿ ಸಾಧಿಸದ ಕಂಪನಿಗಳ ಪಟ್ಟಿಯನ್ನು ಕಳುಹಿಸುತ್ತಾ, ಸದರಿ ಕಂಪನಿಗಳ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪಟ್ಟಿಯಲ್ಲಿ ಮೆ:ವೈಜ್‌ಮೆನ್ ಲಿಮಿಟೆಡ್ ಕಂಪನಿ ಒಂದಾಗಿರುತ್ತದೆ.

ಮೆ:: ವೈಜ್ ಮೆನ್ ಲಿಮಿಟೆಡ್ ಇವರ ಉಳಿದ 4.8 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಕಾರಣ ಕೇಳುವ ನೋಟೀಸನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಲಾಗಿತ್ತು.

ಮೆ:: ವೈಜ್ ಮೆನ್ ಲಿಮಿಟೆಡ್ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಪತ್ರದಲ್ಲಿ ಸದರಿ ನೋಟೀಸಿಗೆ ಉತ್ತರವನ್ನು ಸಲ್ಲಿಸಿರುತ್ತಾರೆ. ಸದರಿ 4.8. ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ತಾಂತ್ರಿಕವಾಗಿ ಮತ್ತು ವಾಣಿಜ್ಯವಾಗಿ ಅನುಷ್ಠಾನ ಮಾಡಲು ಯೋಗ್ಯವಾಗಿರುವುದಿಲ್ಲವೆಂದು ತಿಳಿಸಿ, ಸದರಿ 4.8 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸರ್ಕಾರಕ್ಕೆ ಅಧ್ಯರ್ಪಣೆ ಮಾಡಲು ಸಿದ್ಧರಿರುತ್ತಾರೆಂದು ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಅಭಿವೃದ್ಧಿದಾರರ ಕೋರಿಕೆಯನ್ನು ಪರಿಗಣಿಸಿ, ಸದರಿ 4.8 ಮೆಗಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಇಎನ್ 450 ಎನ್‌ಸಿಇ 2008,. ಬೆಂಗಳೂರು, ದಿನಾಂಕ:27ನೇ ನವೆಂಬರ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶಗಳ ಸಂಖ್ಯೆ:ಡಿಇ 133 ಎನ್ ಸಿಇ 97(5) ದಿನಾಂಕ:20.4.1998 ರಲ್ಲಿ ಮೆ:: ವೈಜ್‌ಮೆನ್ ಲಿಮಿಟೆಡ್ ಇವರಿಗೆ ದಾವಣಗೆರೆ ಜಿಲ್ಲೆಯ ಅರಸಿನಗುಂಡಿ ಗ್ರಾಮದ ಬಳಿ ಹಂಚಿಕೆಯಾಗಿದ್ದ ಸಾಮರ್ಥ್ಯದಲ್ಲಿ ಉಳಿದ 4.8 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆಗೆ ಸಂಬಂಧಿಸಿದ ಆದೇಶ ಹಾಗೂ ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಜಿ. ಸಂಪತ್ ಕುಮಾರ್

ಪಿ.ಆರ್. 2795

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ.

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಹೊಸ ವೆಬ್ ಸೈಟ್ ಪ್ರಾರಂಭಿಸಲು ಅಗತ್ಯವಾದ ಹಣವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : Delsyst Technologies ವ್ಯವಸ್ಥಾಪಕರ ಪತ್ರ ದಿನಾಂಕ :4.11.2009.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಯೋಜನಾ ಡೇಟಾಬೇಸ್ ನೊಂದಿಗೆ ಹೊಸ ವೆಬ್ ಸೈಟ್ ಉಡಾವಣಾ ಕಾರ್ಯವನ್ನು Delsyst Technologies ಸಂಸ್ಥೆಗೆ ವಹಿಸಲಾಗಿದ್ದು, ಇದಕ್ಕಾಗಿ ತಗಲುವ ವೆಚ್ಚ ರೂ. 26.250–00ಗಳ ಪೈಕಿ ಶೇಕಡಾ 70 ರಷ್ಟು ಮೊತ್ತ ರೂ. 18.375–00ಗಳನ್ನು ಒಪ್ಪಂದದಂತೆ ಬಿಡುಗಡೆ ಮಾಡಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಮೂಅಇ 107 ಮೂಇವಿ 2009, ಬೆಂಗಳೂರು, ದಿನಾಂಕ: 22ನೇ ಡಿಸೆಂಬರ್, 2009

ಮೇಲಿನ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ೋಜನಾ ಡೇಟಾ ಬೇಸ್‌ನೊಂದಿಗೆ ಹೊಸ ವೆಬ್ ಸೈಟ್ ಉಡಾವಣಾ ಕಾರ್ಯಕ್ಕೆ ತಗಲುವ ವೆಚ್ಚ ರೂ. 18,375-00 ರೂ. ಹದಿನೆಂಟು ಸಾವಿರದ ಮೂರು ನೂರ ಎಪ್ಪತ್ತೈದು)ಗಳನ್ನು Delsyst Technologies ಸಂಸ್ಥೆಗೆ ಬಿಡುಗಡೆ ಮಾಡಲು ರ್ಕಾರದ ಮಂಜೂರಾತಿಯನ್ನು ನೀಡಿದೆ.

2. ಈ ಮೊತ್ತವನ್ನು ಲೆಕ್ಕ ಶೀರ್ಷಿಕೆ "3451-00-090-1-06-125- Infrastructure Preliminary studies-Modernization" ಇದರಡಿ 2009-10ನೇ ಸಾಲಿನಲ್ಲಿ ಒದಗಿಸಿರುವ ರೂ. 100.00 ಲಕ್ಷಗಳ ಆಯವ್ಯಯದಿಂದ ಭರಿಸತಕ್ಕದ್ದು.

3. ಈ ಮೊತ್ತವನ್ನು ನಿರ್ದೇಶಕರು, ಪಿಪಿಪಿ ಕೋಶ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರು ಪೇಯೀಸ್ ಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿ ತೆಗೆದು ಸದರಿ ಮೊತ್ತವನ್ನು Delsyst Technologies ಸಂಸ್ಥೆಗೆ ನೀಡಲು ಅನುಮತಿಸಿದೆ.

4. ಈ ಆದೇಶವನ್ನು ದಿನಾಂಕ:16.5.2008ರ ಆದೇಶ ಸಂಖ್ಯೆ FD 1 TFP 2008 ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾ ಯೋಜನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್. ಮಂಜುಳ ಗೀತ

ಪಿ.ಆರ್. 2841 ಸರ್ಕಾರದ ಅಧೀನ ಕಾರ್ಯದರ್ಶಿ,

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ,

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬಿಜಾಪೂರ ಜಿಲ್ಲೆ ಬಿಜಾಪೂರ ತಾಲ್ಲೂಕು ಕಾಖಂಡಕಿ ಗ್ರಾಮದ ಹತ್ತಿರ ಜಿನುಗು ಕೆರೆ ನಿರ್ಮಾಣ ಕಾಮಗಾರಿಗಾಗಿ ಕಾಖಂಡಕಿ ಗ್ರಾಮದ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆ ನಡೆಸಲು ಮುಂಗಡ ಹಣ ಠೇವಣಿ ಮಾಡುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ :26.11.2009 ರಂದು ಅಂತ್ಯಗೊಂಡ ಪತ್ರ ಸಂಖ್ಯೆ :ಮುಇಂ.ಸನೀ/(ಉ)ವ/ಬಿಜಾ/ಭೂಸ್ವಾಪ್ರ/209-10/7089

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಬಿಜಾಪೂರ ಜಿಲ್ಲೆ ಬಿಜಾಪೂರ ತಾಲ್ಲೂಕು ಕಾಖಂಡಕಿ ಗ್ರಾಮದ ಹತ್ತಿರ ಜಿನುಗು ಕೆರೆ ನಿರ್ಮಾಣ ಕಾಮಗಾರಿಗಾಗಿ ಕಾಖಂಡಕಿ ಗ್ರಾಮದ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲು ರೂ. 56,27,458/-ಗಳನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಕಂದಾಯ ಇಲಾಖೆಯ ಸುತ್ತೋಲೆ ಸಂಖ್ಯೆ:ಕಂಇ 42 ಭೂಸ್ವಾಹ 2000 ದಿನಾಂಕ:8.10.2001ರಲ್ಲಿ ಸೂಚಿಸಿರುವಂತೆ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಸಂಭವನೀಯ ವೆಚ್ಚದ ಶೇ.50 ರಷ್ಟನ್ನು ಮುಂಗಡ ಹಣವಾಗಿ ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಬೇಕಾಗಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸನೀಇ 102 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 17ನೇ ಡಿಸೆಂಬರ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಿಜಾಪೂರ ಜಿಲ್ಲೆ ಬಿಜಾಪೂರ ತಾಲ್ಲೂಕು ಕಾಖಂಡಕಿ ಗ್ರಾಮದ ಹತ್ತಿರ ಜಿನುಗು ಕೆರೆ ನಿರ್ಮಾಣ ಕಾಮಗಾರಿಗಾಗಿ ಕಾಖಂಡಕಿ ಗ್ರಾಮದ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲು ರೂ. 56,27,458/-ಗಳನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲು ಸರ್ಕಾರವು ಅನುಮೋದನೆ ನೀಡಿದೆ.

ಈ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಆದೇಶ ಸಂಖ್ಯೆ:ಎಫ್ ಡಿ 01 ಟಿಎಫ್‌ಪಿ 2008, ದಿನಾಂಕ:16.5.2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಸುಧಾಕರ ಶೆಟ್ಟಿ,

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ, (ಸಣ್ಣ ನೀರಾವರಿ)

ಪಿ.ಆರ್. 2869

ಕಂದಾಯ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ:ಕಂಇ 148 ಎಲ್‌ಆರ್‌ಎ 2009, ಬೆಂಗಳೂರು, ದಿನಾಂಕ: 18ನೇ ಡಿಸೆಂಬರ್, 2009

ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 48 ಎಲ್‌ಆರ್‌ಎ 2008 ದಿನಾಂಕ:13.10.2008ರ ಪಟ್ಟಿಯ ಕ್ರಸಂ/20(2)ರಲ್ಲಿ "ಶ್ರೀ ಶಾಂತರಾಜು ಅರಸು" ಇವರ ಬದಲಾಗಿ "ಶ್ರೀ ಗಣೇಶ್ ಬಿನ್ ಕೃಷ್ಣಪ್ಪ" ವಿರೋಗನಗರ, ಬೆಂಗಳೂರು ಪೂರ್ವ ತಾಲ್ಲೂಕು, ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ನಾರಾಯಣ ಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ, (ಭೂ ಸುಧಾರಣೆ)

ಪಿ.ಆರ್. 2893

ನಗರಾಭಿವೃದ್ಧಿ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ನಅಇ 225 ಟಿಎಂಇ 2009, ಬೆಂಗಳೂರು, ದಿನಾಂಕ:22ನೇ ಡಿಸೆಂಬರ್, 2009

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ನಅಇ 225 ಬಿಎಂಎಸ್ 2009, ದಿನಾಂಕ:26.11.2009ರ 8ನೇ ಸಾಲಿನಲ್ಲಿರುವ "ನಗರಾಭಿವೃದ್ಧಿ ಆಯುಕ್ತರ ಕಛೇರಿ" ಎಂಬುದನ್ನು "ಪೌರಾಡಳಿತ ನಿರ್ದೇಶಕರು ಮತ್ತು ಆಯುಕ್ತರ ಕಛೇರಿ" ಎಂದು ತಿದ್ದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಿ.ಆರ್. ರವೀಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 2894

ಶಿಕ್ಷಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಡಿ 93 ಡಿಸಿಇ 2007, ಬೆಂಗಳೂರು, ದಿನಾಂಕ:17ನೇ ಡಿಸೆಂಬರ್, 2009

ಕಾಲೇಜು ಶಿಕ್ಷಣ ಇಲಾಖೆಯ ಗ್ರೇಡ್–1 ಪ್ರಾಂಶುಪಾಲರುಗಳಿಗೆ ಬಡ್ತಿ ನೀಡಿ ಹೊರಡಿಸಲಾದ ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 93 ಡಿಸಿಇ 2007 ದಿನಾಂಕ:17.12.2009ರ ಕ್ರಮ ಸಂಖ್ಯೆ:2ರಲ್ಲಿನ ಶ್ರೀ ಸಿಂಧೆ ಜಿ.ಆರ್. ಗ್ರೇಡ್–1 ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಫಜಲ್‌ಪುರ್, ಗುಲ್ಬರ್ಗಾ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕಾರಣ ಕೇಳುವ ನೋಟೀಸ್ ಸಂಖ್ಯೆ:ಇಡಿ 347 ಡಿಸಿಇ 2008 ದಿನಾಂಕ:7.12.2009ರೊಂದಿಗೆ ದೋಷಾರೋಪಣೆ ಪಟ್ಟಿ ಜಾರಿ ಮಾಡಿರುವುದರಿಂದ ಅಧಿಕೃತ ಜ್ಞಾಪನ ಸಂಖ್ಯೆ:ಡಿಪಿಎಆರ್ 23 ಎಸ್‌ಆರ್‌ಆರ್ 98 ದಿನಾಂಕ:14.7.1999 ರನ್ವಯ ಅವರಿಗೆ ಸಂಬಂಧಿಸಿದಂತೆ ಮಾತ್ರ ಬಡ್ತಿಯನ್ನು ಹಿಂದಕ್ಕೆ ಪಡೆದು ಸೀಲ್ಡ್ ಕವರ್‌ನಲ್ಲಿಟ್ಟು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, (ಕಾಲೇಜು)

ಪಿ.ಆರ್. 2899

12 Other standard conditions in vogue as per the Ministry's guidelines for Wind Power Projects shall also be applicable in the instant case including the mitigative measures emerging out of the study on Impact of Wind Farms on the Birds Raptors and other wildlife as and when the study is concluded as per term of reference.

13 All other conditions under different rules, regulations and guidelines including environmental clearance and the Scheduled Tribes and other Traditional Forest Dwellers(Recognition of Forest Rights) Act, 2006 shall be complied with before transfer of forest land.

14 The lessee shall pay lease rent as fixed by the Government from time to time.

15 The leased out area should be used for the purpose for which it is granted. In case the land is not used for the stipulated purpose with in one year or when it no longer needed for the stipulated purpose the area should be forfeited to the Forest Department under section 82 of Karnataka Forest Act 1963. The Deputy Conservator of Forests, Ghataprabha Division, Gokak is authorised to take necessary action in this regard. No residential buildings shall be permitted in the proposed area.

16 Compensatory afforestation shall be raised at the cost of user agency over equivalent non-forest land at the rate prevailing at the time of approval(at present it is Rs. 84,000/- per ha.). The user agency has to identify suitable alternative non forest land (other then now identified in Mandya District) for raising Compensatory Afforestation and to mutate the same in favour of Forest Department.

17 Karnataka Forest Act 1963 and Rules 1969 will be applicable for any violation.

18 The road proposed to be constructed shall be executed in such a way that it helps soil and water erosion conservation.

19 The user agency should not sub-lease, mortgage and hypothecate the forest area.

20 The user agency has to pay the Net Present Value(NPV) of forest land diverted under this proposal as per the orders of the Hon'ble Supreme Court of India and as per the guidelines issued by the Government of India vide in its letter F.No.5-3/2007-FC, dated: 05.02.2009(MOEF).

21 The wind energy farm should be located at a safe distance (1 KM or more) from the areas like National Parks and Sanctuaries, area of outstanding natural beauty, natural heritage sites of Archeological importance, sites of special scientific interests and other important landscapes.

22 The vane tips of the wind turbine shall be painted with orange colour to avoid bird hits. The location of the wind mill shall be such that it does not stand in the migratory path of the birds and is not near the breeding sites of the migratory birds.

23 The distance of the wind mill turbines from the highways, villages and habitations etc., shall be at a safe distance, and in normal course, a distance of 300 meter would be considered safe.

24 The user agency has to pay a lease rent of Rs. 30,000/- per MW is to be realised from the user agency shall be utilized in providing gas connections to the local villagers under the Joint Forest Management Programme and the other conservation measures. This amount shall be deposited with compensatory afforestation management and planning agency.

25 The intervening area between two wind mill footprints shall be planted up with dwarf tree species at the project cost. The State Government shall also consider developing medicinal plant gardens in available gaps in wind farms with possible help from National Medicinal Plant Boards at user agency's cost

26 Soil and moisture conservation measures like contour trenching shall be taken up on the hillocks supporting the wind mill at the cost of user agency.

27 Adequate fire protection measures, including employment of fire watchers and maintenance of fire lines etc., shall be undertaken by the user agency in the project area at its own cost.

28 Trees shall be felled only when it becomes necessary and under strict supervision of State Forest Department i.e. Deputy Conservator of Forests concerned.

29 The user agency shall pay the cost of extraction of trees if available as estimated by the Department(Deputy Conservator of Forests).

30 The user agency shall ensure that there shall be no damage to the available wildlife.

31 The approval under the Forest (Conservation)Act, 1980 is subject to the clearance under the Environment (Protection)Act,1986, if required.

32 The user agency while executing the agreement has to register the Deed with the concerned jurisdictional Sub-Registrar as per the prevailing rate of Stamp Duty and Registration fee.

33 The user agency shall abide by all the conditions imposed upon by Government of India, Government of Karnataka and principal Chief Conservator of Forests.

34 Any other condition to be stipulated by /Government of India/State Government /Principal Chief Conservator of Forests, Karnataka in the interest of conservation of forests.

By Order and in the Name of Governor of Karnataka,

P.R. 2687

H.M.MALLIKARJUNA SWAMY,
Under Secretary to Government
Forest, Ecology and Environment Department

Sub : Diversion of 2.1456 ha. of forest land in Sy.No.12 of Chokkanahalli village for construction of 66 KV LILO line from existing 66 KV Goribidanur-Doddaballapura SC(Circuit-II) line for a distance of 9.375 Kms. to the proposed 2 x 8 MVA, 66/11 Sub-Station at Gundamgere in favour of Ex.Engineer, KPTCL, Bangalore.

Read:
1 Letter No.A5(5)GFL.CR.37/07-08, dated 21-10-2008 of Principal Chief Conservator of Forests, Bangalore.
2. State Government letter No.FEE 134 FGL 2008, dated :17.01.2009.
3. Letter No. 4-KRB572/2009-BAN/4220 dated 17-04- 2009 of Government of India, Ministry of Environment and Forests, Regional Office, (South Zone), Bangalore.
4. Letter No.A5(5)GFL.CR.37/07-08,dated 15-07-2009 of Principal Chief onservator of Forests, Bangalore.
5. State Government letter No.FEE 134 FGL 2008, dated :02.09.2009.
6 Letter No. 4-KRB572/2009-BAN/5595 dated:14.09.2009 of Government of India, Ministry of Environment and Forests, Regional office(South Zone), Bangalore.

PREAMBLE:

The Principal Chief Conservator of Forests, Bangalore vide his letter read at (1) above had submitted a proposal for diversion of 2.1456 ha. of forest land in Sy.No.12 of Chokkanahalli village, Bangalaore Rural Forest Division, Bangalore Rural District for construction of 66 KV LILO line from existing 66 KV Goribidanur-Doddaballapura SC(Circuit-II) line for a distance of 9.375 kms to the proposed 2 x 8 MVA, 66/11 Sub-Station at Gundamgere in favour of Executive Engineer, KPTCL, Bangalore subject to certain conditions.

Accordingly, the proposal was recommended to Government of India, vide State Government letter dated:17.01.2009 read at 2 above.

The Government of India, Ministry of Environment and Forests, Regional Office, South Zone, Bangalore vide their letter dated 17-04-2009 read at 3 above conveyed its approval (Stage-I) for diversion of 2.1456 ha. of forest land subject to fulfillment of certain conditions and the same was communicated to the Principal Chief Conservator of Forests, Bangalore for compliance.

The Principal Chief Conservator of Forests, Bangalore vide his letter dated 15-07-2009 furnished the compliance report read at 4 above and the same has been sent to Government of India vide State Government letter dated: 02.09.2009 read at 5 above.

Government of India Ministry of Environment and Forests, Regional Office, South Zone, Bangalore vide their letter dated: 14.09.2009 read at 6 above has conveyed its approval (Stage-II) under Section 2 of Forest (Conservation) Act,1980 for diversion of 2.1456 ha. of forest land in Sy.No.12 of Chokkanahalli village, Bangalaore Rural Forest Division, Bangalore Rural District for construction of 66 KV LILO line from existing 66 KV Goribidanur-Doddaballapura SC(Circuit-II) line for a distance of 9.375 kms to the proposed 2 x 8 MVA, 66/11 Sub-Station at Gundamgere in favour of Executive Engineer, KPTCL, Bangalore subject to certain conditions.

The proposal has been examined in detail and hence the order.

GOVERNMENT OREDER NO. FEE 134 FGL 2008, BANGALORE, DATED: 2nd November, 2009

In the circumstances explained in the preamble above, Government is pleased to accord approval under section (2) of Forest (Conservation) Act 1980 for diversion of 2.1456 ha. of forest land in Sy.No.12 of Chokkanahalli village, Bangalaore Rural Forest Division, Bangalore Rural District for construction of 66 KV LILO line from existing 66 KV Goribidanur-Doddaballapura SC(Circuit-II) line for a distance of 9.375 kms to the proposed 2 x 8 MVA, 66/11 Sub-Station at Gundamgere in favour of Executive Engineer, KPTCL, Bangalore subject to the following conditions:

1. The legal status of forest land shall remain unchanged.
2. Compensatory afforestation shall be raised over 4.2912 ha. of degraded forest land at the cost of user agency.
3. The additional amount of the NPV of the diverted forest land if any becoming due after revision of the same by the Hon`ble Supreme Court of India in future, shall be charged by the State Government from the user agency and the same shall be transferred to Ad-hoc CAMPA in account number CA 1582 of Corporation Bank, Block-II, CGO Complex, Phase-I, Lodhi Road, New Delhi-110 003.
4. Only minimum number of trees shall be cut based on actual requirement for laying the transmission line.
5. The total forest area utilised for the project shall not exceed 2.1456 ha. In case the land is not taken over by the user agency or the same is not used for the stipulated purpose within a period of two years, then the area shall be taken back by the Forest Department.
6. The land shall be utilised only for the purpose for which it is released.
7. If the land is not required for the purpose for which it is granted the same should be resumed back to the Forest Department by the Deputy Conservator of Forests under section 82 of Karnataka Forest Act 1963.
8. The user agency has to pay the lease rent as fixed by the Government at the time of sanction and any subsequent orders in this regard.

9. The lease is granted for 20 years.
10. The Karnataka Forest Act, 1963 and Rules, 1969 will be applicable for any violation.
11. The user agency shall pay the cost of extraction and transportation charges of trees estimated by the Deputy Conservator of Forests from the proposed land if extracted.
12. The user agency shall pay the cost of raising compensatory afforestation over the degraded forest area at the rate prevailing at the time of sanction(at present it is Rs. 84,000.00).
13. The user agency has to pay the Net Present Value as per the orders of the Hon`ble Supreme Court dated: 28/3/2008.
14. Any other conditions to be imposed by the Government of India/Government of Karnataka /Principal Chief Conservator of Forests will be abided by the lessee.

By Order and in the Name of Governor of Karnataka,

H.M.MALLIKARJUNA SWAMY,

Under Secretary to Government

Forest, Ecology and Environment Department

P.R. 2527

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ಎನ್.ದೇವಾನಂದಬಾಬು, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ವಿರುದ್ಧದ ಅಭಿಯೋಜನಾ ಆದೇಶದ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ :

1 ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜಿ)/ಸಿಟಿ/ಕ್ರೈಂ–29/2005/ ದಿನಾಂಕ:02–08–2008.

2 ತನಿಖಾ ದಾಖಲೆಗಳಾದ ಪ್ರಥಮ ತನಿಖಾ ವರದಿ/ ಶೋಧನಾ ಪಂಚನಾಮೆಗಳು, ಸಾಕ್ಷಿದಾರರ ಹೇಳಿಕೆಗಳು ಮತ್ತು ತನಿಖಾಧಿಕಾರಿಯ ಅಂತಿಮ ವರದಿಯ ಕಡತಗಳು.

3 ಸರ್ಕಾರಿ ಆದೇಶ ಸಂಖ್ಯೆ: ಆಇ 50 ವಾತೆತ 2005,ದಿನಾಂಕ: 29–12–2008.

4 ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜಿ)/ಸಿಟಿ/ಕ್ರೈಂ–29/2005/ ದಿನಾಂಕ:23–01–2009.

5 ಸರ್ಕಾರಿ ಆದೇಶ ಸಂಖ್ಯೆ: ಆಇ 50 ವಾತೆತ 2005,ದಿನಾಂಕ: 10–09–2009.

6 ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜಿ)/ಸಿಟಿ/ ಕ್ರೈಂ–29/2005/ ದಿನಾಂಕ:20–10–2009.

ಪ್ರಸ್ತಾವನೆ:

ಶ್ರೀ ಎನ್.ದೇವಾನಂದಬಾಬು, ಪ್ರಸ್ತುತ ವಾಣಿಜ್ಯ ತೆರಿಗೆ ಅಧಿಕಾರಿ, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರ ಕಚೇರಿ, ಕೋರಮಂಗಲ, ಬೆಂಗಳೂರು, ಇವರು ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಪ್ರಮಾಣದ ಆಸ್ತಿಯನ್ನು ಹೊಂದಿರುವರೆಂದು ತಿಳಿದು ಬಂದ ವಿಶ್ವಾಸಾರ್ಹ ಮಾಹಿತಿಯನ್ವಯ ಸದರಿ ಆರೋಪಿತರ ವಿರುದ್ಧ ಬೆಂಗಳೂರು ನಗರ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ: 29/2005ರ ಪ್ರಕಾರ ದಿನಾಂಕ: 9–8–2005 ರಂದು ಲಂಚ ನಿರೋಧಕ ಕಾಯ್ದೆ 1988 ಕಲಂ 13(1)(ಇ) ಜೊತೆ 13(2)ರ ರೀತ್ಯ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ದಾಖಲಿಸಿರುವ ಪ್ರಕರಣದ ಮೇರೆಗೆ ಮೇಲೆ (1) ಮತ್ತು (2) ರಲ್ಲಿ ಓದಲಾದ ತನಿಖಾಧಿಕಾರಿಯ ವರದಿ ಮತ್ತು ತನಿಖಾ ದಾಖಲೆಗಳನ್ನು ಹೆಚ್ಚುವರಿ ಪೊಲೀಸ್ ಮಹಾನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ದಿನಾಂಕ:02–08–2008ರ ಪತ್ರದೊಂದಿಗೆ ಕಳುಹಿಸಿಕೊಟ್ಟು ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಲಾಗಿದೆ:

1) ಪ್ರಥಮ ವರ್ತಮಾನದ ವರದಿ.
2) ಶೋಧನಾ ಪಂಚನಾಮೆಗಳು:
3) ಮನೆ ನಂ.301, 7ನೇ ಮುಖ್ಯರಸ್ತೆ, ಹೆಚ್.ಆರ್.ಬಿ.ಆರ್. ಬಡಾವಣೆ, ಹೆಣ್ಣೂರು ಬಾಣಸವಾಡಿ, ಬೆಂಗಳೂರು ಇಲ್ಲಿ ದಿನಾಂಕ:10–08–2005 ರಂದು ನಡೆಸಲಾದ ಶೋಧನಾ ಪಂಚನಾಮೆ.

4) ಆರೋಪಿತರ ತಂದೆ ಶ್ರೀ ಮುನಿಯಪ್ಪನವರ ವಾಸದ ಮನೆ ಭಾವನ ಹಳ್ಳಿ ಅಂಚೆ, ಮಾಲೂರು ತಾಲ್ಲೂಕು, ಕಸಬಾ ಹೋಬಳಿ, ಕೋಲಾರ ಜಿಲ್ಲೆ ಇಲ್ಲಿ ದಿನಾಂಕ:10-08-2005 ರಂದು ನಡೆಸಲಾದ ಶೋಧನಾ ಪಂಚನಾಮೆ.

ಶ್ರೀ ಎನ್.ದೇವಾನಂದಬಾಬು, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ವಿರುದ್ಧ ದಾಖಲಾಗಿರುವ ಲೋಕಾಯುಕ್ತ ಧಾಳಿ ಪ್ರಕರಣ ಕುರಿತಂತೆ, ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿದ ತನಿಖಾಧಿಕಾರಿಯ ಅಂತಿಮ ವರದಿ ದಿನಾಂಕ:30.7.2008ರ ಪ್ರಕಾರ ಆಪಾದಿತ ಅಧಿಕಾರಿಯಾದ ಶ್ರೀ ದೇವಾನಂದಬಾಬುರವರು ದಿನಾಂಕ: 17-6-1992 ರಿಂದ 10-08-2005 ರವರೆಗಿನ ಪರಿಶೀಲನಾ ಅವಧಿ (ಚೆಕ್ ಪಿರಿಯಡ್) ಯಲ್ಲಿ ಒಟ್ಟು ರೂ.30,69,267-56 ಪೈಸೆಗಳ ಒಟ್ಟು ಆಸ್ತಿಯನ್ನು ಹೊಂದಿರುತ್ತಾರೆಂದು ಮತ್ತು ಈ ಅವಧಿಯಲ್ಲಿ ಆಪಾದಿತರು ತಮ್ಮ ಮತ್ತು ತಮ್ಮ ಕುಟುಂಬದ ಸದಸ್ಯರಿಗಾಗಿ ಮಾಡಿರುವ ಒಟ್ಟು ಖರ್ಚು ರೂ.53,69,552-28 ಪೈಸೆಗಳಾಗಿದ್ದು, ಆಪಾದಿತರು ಈ ಅವಧಿಯಲ್ಲಿ ಎಲ್ಲಾ ಬಲ್ಲ ಮೂಲಗಳಿಂದ ಗಳಿಸಿರುವ ಆದಾಯವು ಒಟ್ಟು ರೂ.28,57,891-42 ಪೈಸೆಗಳಾಗಿರುತ್ತದೆ. ಆಪಾದಿತ ಆಸ್ತಿಯ ಮತ್ತು ಖರ್ಚಿನ ಒಟ್ಟು ಮೊತ್ತ ರೂ.84,38,819-84 ಪೈಸೆಗಳಾಗಿದ್ದು, ಹೆಚ್ಚಿನ ಪ್ರಮಾಣದ ಆಸ್ತಿಯ ಒಟ್ಟು ಮೊತ್ತವು ರೂ.55,80,928-42 ಪೈಸೆಗಳಾಗುತ್ತವೆ. ಅಂದರೆ ಆಪಾದಿತ ಅಧಿಕಾರಿ ತಮ್ಮ ಎಲ್ಲಾ ಬಲ್ಲ ಮೂಲಗಳ ಆದಾಯಕ್ಕಿಂತಲೂ ಶೇ.195.28 ರಷ್ಟು ಹೆಚ್ಚಿನ ಪ್ರಮಾಣದ ಆಸ್ತಿಯನ್ನು ಹೊಂದಿರುವುದು ಕಂಡುಬರುತ್ತದೆ. ಈ ಹೆಚ್ಚಿನ ಆಸ್ತಿಯ ಬಗ್ಗೆ ಆರೋಪಿತರು ಯಾವುದೇ ತೃಪ್ತಿಕರ ವಿವರಣೆ ಅಥವಾ ಲೆಕ್ಕವನ್ನು ನೀಡಿರುವುದಿಲ್ಲ. ಈ ರೀತಿಯ ಆರೋಪಿಯು ಲಂಚ ನಿರೋಧ ಕಾಯ್ದೆ 1988ರ ಕಲಂ 13(1)(ಇ) ಜೊತೆಯಲ್ಲಿ ಓದಲಾದ 13(2)ರ ಅಡಿಯಲ್ಲಿ ಎಸಗಿರುವ ಶಿಕ್ಷಾರ್ಹ ಅಪರಾಧವು ಮೇಲ್ನೋಟಕ್ಕೆ ಸಾಭೀತಾಗಿರುತ್ತದೆ. ಆಪಾದಿತರು ಸಾರ್ವಜನಿಕ ಹಿತದೃಷ್ಟಿಯಿಂದ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಲು ಅರ್ಹರಾಗಿರುತ್ತಾರೆ. ಅವರನ್ನು ಅಭಿಯೋಜನೆಗೆ ಒಳಪಡಿಸಲು ಸಕ್ಷಮ ಪ್ರಾಧಿಕಾರದ ಅರ್ಥಾತ್ ಸದರಿ ಆಪಾದಿತ ಅಧಿಕಾರಿಯನ್ನು ತನ್ನ ಹುದ್ದೆಯಿಂದ ತೆಗೆದುಹಾಕುವ ಅಧಿಕಾರವುಳ್ಳ ಪ್ರಾಧಿಕಾರದ ಪೂರ್ವಾನುಮತಿ ಅತ್ಯಗತ್ಯವಾಗಿರುತ್ತದೆ ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ತಿಳಿಸಿರುತ್ತಾರೆ.

ಆದ್ದರಿಂದ ಶ್ರೀ ಎನ್.ದೇವಾನಂದಬಾಬು, ವಾಣಿಜ್ಯ ತೆರಿಗೆ ಅಧಿಕಾರಿ, ಇವರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 13(1)(ಇ) ಜೊತೆಯಲ್ಲಿ ಓದಲಾದ ಕಲಂ 13(2)ರ ಅಡಿಯಲ್ಲಿ ಎಸಗಿರುವ ಅಪರಾದಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧ ಕಾಯ್ದೆ 1988ರ ಕಲಂ 19(1)(ಬಿ) ರನ್ವಯ ಮಂಜೂರಾತಿ ಆದೇಶವನ್ನು ನೀಡುವಂತೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತರವರು ಕೋರಿರುತ್ತಾರೆ. ಅದರಂತೆ, ಮೇಲೆ ಓದಲಾಗಿರುವ ಕ್ರಮ ಸಂಖ್ಯೆ: (3)ರ ಸರ್ಕಾರಿ ಆದೇಶ ದಿನಾಂಕ: 29-12-2008 ರಲ್ಲಿ ಅಭಿಯೋಜನಾ ಮಂಜೂರಾತಿ ಆದೇಶವನ್ನು ನೀಡಲಾಗಿದೆ.

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ: (4)ರ ಪತ್ರದಲ್ಲಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತರವರು ಸರ್ಕಾರ ಹೊರಡಿಸಿರುವ ಆದೇಶದಲ್ಲಿ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿದ್ದು, ಅವುಗಳನ್ನು ಸರಿಪಡಿಸಿ, ಪರಿಷ್ಕೃತ ಆದೇಶವನ್ನು ನೀಡುವಂತೆ ಕೋರಿದ್ದರ ಮೇರೆಗೆ ಮೇಲೆ ಓದಲಾಗಿರುವ ಕ್ರಮ ಸಂಖ್ಯೆ: (5)ರ ಪರಿಷ್ಕೃತ ಆದೇಶವನ್ನು ಹೊರಡಿಸಲಾಗಿತ್ತು. ಆದರೆ ಸದರಿ ಆದೇಶದಲ್ಲಿ ಈ ಕೆಳಕಂಡ ಇನ್ನು ಕೆಲವು ನ್ಯೂನತೆಗಳು ಕಂಡುಬಂದಿವೆ ಎಂದು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ: (6)ರ ಪತ್ರದಲ್ಲಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತರವರು ವರದಿ ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಮತ್ತೊಮ್ಮೆ ಪರಿಶೀಲಿಸಲಾಗಿದೆ.

1) ಅಭಿಯೋಜನಾ ಮಂಜೂರಾತಿ ಆದೇಶ ಪುಟ ಸಂಖ್ಯೆ 2ರ ಮೊದಲನೇ ಕಂಡಿಕೆಯ 9ನೇ ಸಾಲಿನಲ್ಲಿ ಆದಾಯ ಒಟ್ಟು "ರೂ.18,37,891-42" ಎಂದು ನಮೂದಾಗಿದ್ದು, ಅದನ್ನು "28,57,891-42" ಎಂದು ಸರಿಯಾಗಿ ನಮೂದಿಸುವುದು.

2) ಅಭಿಯೋಜನಾ ಮಂಜೂರಾತಿ ಆದೇಶ ಪುಟ ಸಂಖ್ಯೆ 4ರ ಕ್ರಮ ಸಂಖ್ಯೆ: 12 ರಲ್ಲಿ ಭಾವನಹಳ್ಳಿ ಸರ್ವೇ ನಂ.239 ರಲ್ಲಿ 15 ಎಕರೆ 31 ಗುಂಟೆ ಜಮೀನು "ರೂ. 1,30,000-00" ಎಂದು ನಮೂದಾಗಿರುವುದನ್ನು "ರೂ. 1,39,000-00" ಎಂದು ನಮೂದಿಸುವುದು.

3) ಅಭಿಯೋಜನಾ ಮಂಜೂರಾತಿ ಆದೇಶ ಪುಟ ಸಂಖ್ಯೆ 6ರ ಕ್ರಮ ಸಂಖ್ಯೆ: 42 ರಲ್ಲಿ "ಶ್ರೀ ಎನ್.ಡಿ.ವೆಂಕಟೇಶ್ ಬಾಬುರವರ ಉಳಿತಾಯ ಖಾತೆ . . . . 7.35" ಎಂದು ಮೂದಾಗಿರುವುದನ್ನು "ಶ್ರೀ ಎನ್.ಡಿ.ವೆಂಕಟೇಶ್ ಬಾಬುರವರ ಉಳಿತಾಯ ಖಾತೆ . . . . 7.30" ಎಂದು ಸರಿಯಾಗಿ ನಮೂದಿಸುವುದು ಸೂಕ್ತ ಹಾಗೂ ಅದೇ ಪುಟದ ಕ್ರಮ ಸಂಖ್ಯೆ:46 ರಲ್ಲಿ "ಅಡಿಗೆ ಅನಿಲ ಸಂಪರ್ಕ ರೂ.1,900/-" ಗಳೆಂದು ನಮೂದಿಸಿರುವುದನ್ನು ಕೈಬಿಡುವುದು ಸೂಕ್ತ.

4) ಅಭಿಯೋಜನಾ ಮಂಜೂರಾತಿ ಆದೇಶ ಪುಟ ಸಂಖ್ಯೆ 8, 9 ಹಾಗೂ 9ನೇ ಪುಟದ 8ನೇ ಸಾಲಿನಲ್ಲಿ ಒಟ್ಟು ಆದಾಯ ರೂ. "18,37,891-42" ಎಂದು ನಮೂದಾಗಿರುವುದನ್ನು ರೂ. "28,57,891-42" ಸರಿಯಾಗಿ ನಮೂದಿಸುವುದು ಸೂಕ್ತವೆಂದು ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತರವರು ತಿಳಿಸಿರುತ್ತಾರೆ.

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ: (5)ರ ಸರ್ಕಾರದ ಆದೇಶದಲ್ಲಿ ಈ ಅಧಿಕಾರಿಯನ್ನು ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿಯನ್ನು ನೀಡಲಾಗಿತ್ತು. ಆದರೆ ತದನಂತರದ ಬೆಳವಣಿಗೆಯ ಹಿನ್ನೆಲೆಯಲ್ಲಿ ಪ್ರಕರಣವನ್ನು ಮತ್ತೊಮ್ಮೆ ಪರಿಶೀಲಿಸಲಾಗಿದೆ.

ತನಿಖೆಯು ಪೂರ್ಣಗೊಂಡ ನಂತರ ಆಪಾದಿತರ ವಶದಲ್ಲಿದ್ದ ಒಟ್ಟು ಆಸ್ತಿ ಆದಾಯದ ವಿವರಗಳು ಈ ಕೆಳಗಿನಂತೆ ಇರುವುದೆಂದು ತನಿಖಾಧಿಕಾರಿಯು ಅಂತಿಮ ವರದಿಯಲ್ಲಿ ತಿಳಿಸಿರುತ್ತಾರೆ.

ಆಪಾದಿತರ ಮತ್ತು ಅವರ ಕುಟುಂಬದ ಸದಸ್ಯರ ಹೆಸರಿನಲ್ಲಿರುವ ಆಸ್ತಿಗಳ ಸಂಕ್ಷಿಪ್ತ ವಿವರಗಳು ಮತ್ತು ಮೌಲ್ಯದ ಪಟ್ಟಿ:

ಕ್ರ.ಸಂ.	ಆಸ್ತಿಗಳ ವಿವರಗಳು	ಮೌಲ್ಯ
1)	ಭಾವನ ಹಳ್ಳಿ, ಸರ್ವೇ ನಂ.139 ರಲ್ಲಿ 7 ಎಕರೆ 38 ಗುಂಟೆ ಜಮೀನು	-
2)	ಭಾವನ ಹಳ್ಳಿ, ಸರ್ವೇ ನಂ.183 ರಲ್ಲಿ 3 ಎಕರೆ 24 ಗುಂಟೆ ಜಮೀನು	-
3)	ಭಾವನ ಹಳ್ಳಿ, ಸರ್ವೇ ನಂ.180/6 ರಲ್ಲಿ 3 ಎಕರೆ 26 ಗುಂಟೆ ಜಮೀನು	-
4)	ಭಾವನ ಹಳ್ಳಿ, ಸರ್ವೇ ನಂ.207 ರಲ್ಲಿ 1 ಎಕರೆ 14 ಗುಂಟೆ ಜಮೀನು	-
5)	ಭಾವನ ಹಳ್ಳಿ, ಸರ್ವೇ ನಂ.208/3 ರಲ್ಲಿ 14 ಗುಂಟೆ ಜಮೀನು	-
6)	ಭಾವನ ಹಳ್ಳಿ, ಸರ್ವೇ ನಂ.209/4 ರಲ್ಲಿ 26 ಗುಂಟೆ ಜಮೀನು	-
7)	ಭಾವನ ಹಳ್ಳಿ, ಸರ್ವೇ ನಂ.233/1 ರಲ್ಲಿ 4 ಎಕರೆ 17 ಗುಂಟೆ ಜಮೀನು	-
8)	ಭಾವನ ಹಳ್ಳಿ, ಸರ್ವೇ ನಂ.181 ರಲ್ಲಿ 1 ಎಕರೆ 19 ಗುಂಟೆ ಜಮೀನು	-
9)	ಭಾವನ ಹಳ್ಳಿ, ಸರ್ವೇ ನಂ.182 ರಲ್ಲಿ 2 ಎಕರೆ ಜಮೀನು	-
10)	ಭಾವನ ಹಳ್ಳಿ, ಸರ್ವೇ ನಂ.167 ರಲ್ಲಿ 2 ಎಕರೆ 30 ಗುಂಟೆ ಜಮೀನು	-
11)	ನಿವೇಶನ ಸಂಖ್ಯೆ:10, ಸರ್ವೇ ನಂ.93/2, ಜಾರಕ್‌ಬಂಡೆ ಕಾವಲ್, ಬೆಂಗಳೂರು	-
12)	ಭಾವನ ಹಳ್ಳಿ, ಸರ್ವೇ ನಂ.239 ರಲ್ಲಿ 15 ಎಕರೆ 31 ಗುಂಟೆ ಜಮೀನು.	ರೂ. 1,39,000-00
13)	ನಿವೇಶ ಸಂಖ್ಯೆ: 301, 7ನೇ ಮುಖ್ಯರಸ್ತೆ, ಕಲ್ಯಾಣ ನಗರ, ಬಾಣಸವಾಡಿ, ಬೆಂಗಳೂರು.	ರೂ. 5,56,345-00
14)	40x60 ಅಳತೆಯ ನಿವೇಶನ ಸಂಖ್ಯೆ: 182, ಖಾತಾ ನಂ.192, ವೈಟ್ ಗಾರ್ಡನ್, ಮಾಲೂರು ಟೌನ್, (ಆರೋಪಿತ ಅಧಿಕಾರಿಯವರ ಮಗಳು ಶ್ರೀಮತಿ ಎನ್.ಡಿ.ಆಶಾ ಕಿರಣ್‌ರವರ ಹೆಸರಿನಲ್ಲಿ)	ರೂ. 72,000-00
15)	40x29 ಅಳತೆಯ ನಿವೇಶನ ಸಂಖ್ಯೆ: 5965, ರಾಜೇಂದ್ರ ಲೇಔಟ್, ಮಾಲೂರು (ಆರೋಪಿತ ಅಧಿಕಾರಿಯವರ ನಾದಿನಿ ಶ್ರೀಮತಿ ಉಮಾದೇವಿಯವರ ಹೆಸರಿನಲ್ಲಿ)	-
16)	ಬಿ.ಡಿ.ಎ.ನಿವೇಶನ ಸಂಖ್ಯೆ: 616, ನಂದಿನಿ ಲೇಔಟ್, ಲಗ್ಗೆರೆ, ಬೆಂಗಳೂರು	ರೂ. 19,033-00
17)	ಸರ್ವೇ ನಂ.62 ಭಾವನ ಹಳ್ಳಿ, 6 ಎಕರೆ 22 ಗುಂಟೆ ಜಮೀನು	ರೂ. 4,75,000-00
18)	ರಿಜಿಸ್ಟ್ರೇಷನ್ ಸಂಖ್ಯೆ: ಕೆಎ04-ಎನ್3396 ಜೆನ್ ಕಾರು (ಆರೋಪಿತ ಅಧಿಕಾರಿಯ ಹೆಸರಿನಲ್ಲಿ)	-

ಕ್ರ.ಸಂ.	ಆಸ್ತಿಗಳ ವಿವರಗಳು	ಮೌಲ್ಯ
19)	ಹೀರೋ ಹೋಂಡ ಮೋಟಾರ್ ಸೈಕಲ್ ರಿಜಿಸ್ಟ್ರೇಷನ್ ಸಂಖ್ಯೆ : ಕೆಎ03–ಇಡಿ –7506	ರೂ.59,800–00
20)	ಗೆಟ್ಜ್ ಕಾರು ರಿಜಿಸ್ಟೇಷನ್ ಸಂಖ್ಯೆ : ಕೆಎ03–ಎಂಜೆ–1242	ರೂ.5,51,803–00
21)	ಮಾರುತಿ ಕಾರ್ ರಿಜಿಸ್ಟೇಷನ್ ಸಂಖ್ಯೆ : ಕೆಎ4–ಎನ್–1242	–
22)	562 ಗ್ರಾಂ ಮತ್ತು 900 ಮಿಲಿ ಗ್ರಾಂ ಚಿನ್ನದ ಒಡವೆ ಮತ್ತು 7 ಕೆ.ಜಿ. 678 ಗ್ರಾಂ ಬೆಳ್ಳಿಯ ವಸ್ತುಗಳು ಹಾಗೂ ಇತರೇ ಗೃಹೋಪಯೋಗಿ ವಸ್ತುಗಳು	ರೂ. 7,82,359–00
23)	ಶೋಧನಾ ಕಾಲದಲ್ಲಿ ದೊರೆತ ನಗದು ಹಣ	ರೂ.32,000–00
24)	ಶ್ರೀ ಎನ್.ಡಿ.ವೆಂಕಟೇಶ್‌ಬಾಬು ರವರ ಹೆಚ್.ಡಿ.ಎಫ್.ಸಿ. ಬ್ಯಾಂಕ್, ಕಮ್ಮನಹಳ್ಳಿ, ಉಳಿತಾಯ ಖಾತೆ	ರೂ. 19.84
25)	ಶ್ರೀ ಟಿ.ಮುನಿಯಪ್ಪರವರ ಉಳಿತಾಯ ಖಾತೆ ಸಂಖ್ಯೆ:4182 ಕೆನರಾಬ್ಯಾಂಕ್, ಕಲ್ಯಾಣನಗರ.	–
26)	ಆರೋಪಿತ ಅಧಿಕಾರಿಯವರ ಉಳಿತಾಯ ಖಾತೆ ಸಂಖ್ಯೆ:000019738 ಕೆನರಾ ಬ್ಯಾಂಕ್, ಮೆಜೆಸ್ಟಿಕ್ ಶಾಖೆ.	–
27)	ಶ್ರೀ ಟಿ.ಮುನಿಯಪ್ಪ ಮತ್ತು ಆರೋಪಿತ ಅಧಿಕಾರಿಯವರ ಜಂಟಿ ಖಾತೆ ಸಂಖ್ಯೆ:3201 ವಿಜಯಾ ಬ್ಯಾಂಕ್, ಚಿಕ್ಕಕುಂತೂರು ಶಾಖೆ	ರೂ. 2,162–00
28)	ಆರೋಪಿತ ಅಧಿಕಾರಿಯವರ ಉಳಿತಾಯ ಖಾತ ಸಂಖ್ಯೆ: 1302, ಕೆನರಾ ಬ್ಯಾಂಕ್ ಕಲ್ಯಾಣ ನಗರ.	839–60
29)	ಆರೋಪಿತ ಅಧಿಕಾರಿಯವರ ಪತ್ನಿಯ ಉಳಿತಾಯ ಖಾತೆ ಸಂಖ್ಯೆ: 1296, ಕೆನರಾ ಬ್ಯಾಂಕ್ ಕಲ್ಯಾಣ ನಗರ ಶಾಖೆ.	163–00
30)	ಶ್ರೀ ವೇಮನ ಸೌಹಾರ್ದ ಪತ್ತಿನ ಸಹಕಾರ ಸಂಘ ಲಿ. ಬೆಂಗಳೂರು, ಇದರಲ್ಲಿನ ಷೇರುಗಳು (ಆರೋಪಿತ ಅಧಿಕಾರಿಯ ಹೆಸರಿನಲ್ಲಿ)	ರೂ. 5,000–00
31)	ಶ್ರೀ ವೇಮನ ಸೌಹಾರ್ದ ಪತ್ತಿನ ಸಹಕಾರ ಸಂಘ ಲಿ. ಬೆಂಗಳೂರು, ಇದರಲ್ಲಿನ ಷೇರುಗಳು (ಆರೋಪಿತ ಅಧಿಕಾರಿಯವರ ಪತ್ನಿಯ ಹೆಸರಿನಲ್ಲಿ)	ರೂ. 2,000–00
32)	ಮಹರ್ಷಿ ವಾಲ್ಮೀಕಿ ಗಿರಿಜನ ಪತ್ತಿನ ಸಹಕಾರ ಸಂಘ ನಿಯಮಿತ – ಷೇರುಗಳು (ಆರೋಪಿತ ಅಧಿಕಾರಿಯ ಹೆಸರಿನಲ್ಲಿ)	ರೂ. 2,500–00
33)	ಮಹರ್ಷಿ ವಾಲ್ಮೀಕಿ ಗಿರಿಜನ ಪತ್ತಿನ ಸಹಕಾರ ಸಂಘ ನಿಯಮಿತ – ಷೇರುಗಳು (ಆರೋಪಿತ ಅಧಿಕಾರಿಯವರ ಪತ್ನಿಯ ಹೆಸರಿನಲ್ಲಿ)	ರೂ. 2,500–00
34)	ಆರೋಪಿತ ಅಧಿಕಾರಿಯವರ ತಂದೆ ಶ್ರೀ ಟಿ.ಮುನಿಯಪ್ಪ, – ಇಂಡಿಯಾನ ಜಿಮ್‌ಖಾನಾ ಕ್ಲಬ್, ಕಾಕ್ಸ್‌ಟೌನ್, ಬೆಂಗಳೂರು. ಇವರ ಸದಸ್ಯರಾಗಿರುತ್ತಾರೆ.	–
35)	ಕರ್ನಾಟಕ ಕಮರ್ಷಿಯಲ್ ಟ್ಯಾಕ್ಸ್ ಅಧಿಕಾರಿಗಳ ಸೇವಾ ಸಂಘ ಇದರ ಅಜೀವ ಸದಸ್ಯರು – ಆರೋಪಿತ ಅಧಿಕಾರಿ	–
